೩೮೩
೩೮೪

ಸಂಪಾದಕ: ಚಂದ್ರಶೇಖರ ಪಾಟೀಲ

ಸಂಕ್ರಮಣ ಪ್ರಕಾಶನ, ಬೆಂಗಳೂರು

ಬಿಡಿ ಪ್ರತಿ : ರೂ. ೨೦
ಪ್ರಕಟನೆಯ
೪೪ನೆಯ ವರ್ಷ

ಸಂಕ್ರಮಣ

ಜನವರಿ-ಏಪ್ರಿಲ್
೨೦೦೯

ಸಂಕ್ರಮಣ

ಸಾಹಿತ್ಯ ಸಂಕಲನ

ಸಂಪುಟ : ೪೪ ಸಂಚಿಕೆ : ೦೧-೦೨

ಜನವರಿ -ಏಪ್ರಿಲ್ ೨೦೦೯

ಸಂಪಾದಕ
ಚಂದ್ರಶೇಖರ ಪಾಟೀಲ (ಚಂಪಾ)

ಸಹಾಯ
ನೀಲಾ ಪಾಟೀಲ
ಮೀನಾ ಸದಾಶಿವ

ವಾರ್ಷಿಕ ಚಂದಾ : ರೂ. ೨೦೦
ಐದು ವರ್ಷಕ್ಕೆ : ರೂ. ೯೦೦
ಆಜೀವ ಚಂದಾ : ರೂ. ೩,೦೦೦
ಮಹಾ ಪೋಷಕತ್ವ : ರೂ. ೫,೦೦೦

ಸಂಕ್ರಮಣ ಪ್ರಕಾಶನ
ಮೂರನೇ ಕ್ರಾಸ್, ಜ್ಯೋತಿ ಲೇಔಟ್
ಯೆಲಚೇನಹಳ್ಳಿ, ಜೆ. ಪಿ. ನಗರ ಅಂಚೆ
ಬೆಂಗಳೂರು ೫೬೦ ೦೭೮
(ಫೋನು : ೦೮೦-೨೬೩೨ ೩೩ ೪೪)

ಲಿಪಿ ಜೋಡಣೆ ಹಾಗೂ ಮುದ್ರಣ
ನೇತ್ರಾ ಪ್ರಿಂಟರ್ಸ್
ಬೆಂಗಳೂರು-೫೬೦ ೦೧೮

ಈ ಸಂಚಿಕೆಯಲ್ಲಿ

ಡಾ. ಚಂದ್ರಶೇಖರ. ಹೆಬ್ಬುಗಳ್ಳಾಡ

ಆಪಸಾತ್

ಸಂಕ್ರಮಣ : ಮತ್ತೊಂದು ದಾಪುಗಾಲು

• ಸಂಪಾದಕರು

ಕಾಲದ ಗತಿಯಲ್ಲಿ ಅನೇಕ ಕಾರಣಗಳಿಂದಾಗಿ ಒಂದು ಭಾಷಾ ಸಮುದಾಯದ ಸಾಹಿತ್ಯ ಸೃಷ್ಟಿಯ ಒಟ್ಟಾರೆ ನೋಟ ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಕನ್ನಡದಲ್ಲಿ ಕತೆ, ಕಾದಂಬರಿ, ಕಾವ್ಯ ರಚನೆಗೆ ಎಂದೂ ಬರ ಬಿದ್ದಿಲ್ಲ. ಹೊಸ ಹೊಸ ಪ್ರತಿಭೆಗಳು ಅರಳುತ್ತಲೇ ಇವೆ. ನಾಟಕ ಸೃಷ್ಟಿಯಲ್ಲಿ ಮಾತ್ರ ನಿರಾಶಾದಾಯ ಸ್ಥಿತಿ ಮುಂದುವರೆದಿದೆ. 'ಸಾಹಿತ್ಯ ಪತ್ರಿಕೆ' ಗಳು ಸಂಖ್ಯೆಯಲ್ಲಿ ಕಡಿಮೆ; ಆದರೆ ದೈನಿಕಗಳ ಸಾಪ್ತಾಹಿಕ ಪುರವಣಿಗಳು ಮತ್ತು ಟ್ಯಾಬಲೈಡ್‌ಗಳು ವಿವಿಧ ಪ್ರಕಾರಗಳ ಸಾಹಿತ್ಯಕ್ಕೆ ಇಂಬುಗೊಡುತ್ತಿವೆ. ಸಮೃದ್ಧಿ ಮತ್ತು ವೈವಿಧ್ಯ - ಎಂದಿನಂತೆ ಕನ್ನಡದ ನೆಲದ ಸಿರಿಯನ್ನು ಹೆಚ್ಚಿಸಿದೆ.

ಕಳೆದೊಂದು ದಶಕದಲ್ಲಿ ಕಾವ್ಯ ವಲಯದಲ್ಲಿ ಚುಟುಕು / ಹನಿಗವನಗಳು ದಂಡಿ ದಂಡಿಯಾಗಿ ಹುಟ್ಟುತ್ತಿವೆ. ಇದು ಆತಂಕ ಉಂಟು ಮಾಡಬೇಕಿಲ್ಲ. ಒಟ್ಟಾರೆ ಸೃಜನಶೀಲತೆಯ ಮುನ್ನಡೆಯ ಸಂಕೇತ ಅದು. ಇನ್ನೊಂದು ಅಚ್ಚರಿಯ ಬೆಳವಣಿಗೆ ಎಂದರೆ ನಮ್ಮ ಅನೇಕ ಪ್ರಬುದ್ಧ ಚೇತನಗಳು ತಮ್ಮ ಅಂಕಣ ಬರಹಗಳ ಮೂಲಕ ಕನ್ನಡದ ಪ್ರಬಂಧ-ಸಾಹಿತ್ಯಕ್ಕೆ ಹೊಸ ತಿರುವನ್ನೇ ನೀಡುತ್ತಿರುವುದು. ಬದುಕಿನ ಅನೇಕ ಮಗ್ಗಲುಗಳನ್ನು ಸರಳ ನಿರೂಪಣೆಯ ಮೂಲಕ ಜನಸಮುದಾಯಕ್ಕೆ ತಲುಪಿಸುವ ಈ ಬಗೆಯ ಸಾಮೂಹಿಕ ಪ್ರಯತ್ನ ಈ ಪ್ರಮಾಣದಲ್ಲಿ ಹಿಂದೆಂದೂ ನಡೆದಿರಲಿಲ್ಲ. ನಮ್ಮ ದಿನಪತ್ರಿಕೆ-ವಾರಪತ್ರಿಕೆಗಳು ಈ ಕೆಲಸ ನಿರ್ವಹಿಸುತ್ತಿವೆ.

ಸಮಕಾಲೀನ ಮಿಡಿತ-ತುಡಿತಗಳನ್ನು ಸೂಕ್ತವಾಗಿ ಗ್ರಹಿಸುತ್ತಲೇ, ದಾಖಲಿಸುತ್ತಲೇ ಬಂದಿರುವ 'ಸಂಕ್ರಮಣ' ಈ ನಿಟ್ಟಿನಲ್ಲಿ ಇಟ್ಟ ಒಂದು ಹೆಜ್ಜೆಯನ್ನು ನೀವು ಓದುತ್ತಿರುವ ಈ ಸಂಚಿಕೆಯಲ್ಲಿ ಗಮನಿಸುತ್ತೀರಿ. ಸಮಾಜವಾದಿ ನಿಲುವಿನ ಖ್ಯಾತ ಚಿಂತಕ ಡಿ.ಎಸ್. ನಾಗಭೂಷಣ ಅವರು ವಾರಪತ್ರಿಕೆಯೊಂದಕ್ಕೆ ಬರೆದ ಲೇಖನಗಳಿಂದ ಆಯ್ದ ಕೆಲವು ಭಾಗ ನಿಮ್ಮೆದುರಿಗಿವೆ. ಸಂಕ್ರಮಣದ ಪ್ರತಿ ಸಂಚಿಕೆಯಲ್ಲಿ 'ಅಂಕಣಗಳ ಅಂಗಳದಿಂದ' ಎಂಬ ಶೀರ್ಷಿಕೆಯಲ್ಲಿ ಬೇರೆ ಬೇರೆ ಹೆಸರಾಂತ ಚಿಂತಕರಿಗಾಗಿ ಹತ್ತು ಪುಟ ಮೀಸಲು ಇನ್ನು ಮುಂದೆ.

*

ಅಂದ ಹಾಗೆ, ೪೪ನೆಯ ಸಂಪುಟದ ಈ ಮೊದಲ ಸಂಚಿಕೆ 'ಸಂಯುಕ್ತ ಸಂಚಿಕೆ'ಯಾಗಿ ನಿಮ್ಮ ಕೈಸೇರಲು ಒಂದು ತಾಂತ್ರಿಕ ಕಾರಣ-ಅಂಚೆ ಬಟವಡೆಯ ಅನುಕೂಲಕ್ಕಾಗಿ. ಮುಂದಿನ ಸಂಚಿಕೆಗಳು ಕ್ರಮವಾಗಿ ಜೂನ್, ಅಗಸ್ಟ್, ಅಕ್ಟೋಬರ್, ಡಿಸೆಂಬರ ತಿಂಗಳ ಕೊನೆಯ ವಾರಗಳಲ್ಲಿ ಬರಲಿವೆ. ನವೆಂಬರ್-ಡಿಸೆಂಬರ್ ೨೦೦೯ರದು ೧೭೬ ಪುಟಗಳ 'ವಿಶೇಷಾಂಕ'ವಾಗಲಿದೆ.

ಎಂದಿನಂತೆ ನಿಮ್ಮ ಸಹಕಾರವಿರಲಿ. ■

ಕಾಮಾಟಿಪುರ ಗಣೇಶ ಮತ್ತು ಪ್ರಲಾಪಸಿಂಹ

● ಚಂದ್ರಶೇಖರ ಪಾಟೀಲ

ಇದು ಕೀಳುಮಟ್ಟದ ನಿಂದನೆ

ತಮ್ಮನ್ನು ತಾವೇ ವಿಚಾರವಂತರೆಂದು ಘೋಷಿಸಿಕೊಂಡಿರುವ ಕೆಲವು ಮಾಹಿತಿ ಸಂಶೋಧಕರು, ಮತಾಂತರವನ್ನು ಕಾನೂನು ಪ್ರಕಾರ ನಿಷೇಧಿಸಬೇಕೆಂದು ಕರೆಕೊಟ್ಟಿದ್ದಾರೆ. (ಪ್ರ.ವಾ. ಜ. ೫) ಮತಾಂತರದಿಂದ ಭಾರತೀಯ ಸಂಸ್ಕೃತಿ ಹಾನಿಯಾಗುತ್ತಿದೆ, ಎಂಬುದಾಗಿ ನಂಬಿರುವ ಇವರಿಗೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೇನೆಂದು ಗೊತ್ತಿಲ್ಲವೆ?

ವಾಸ್ತವವಾಗಿ ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿ ಹಿಂದೂ ಧರ್ಮವನ್ನು ಪರಿಗಣಿಸ ಬೇಕೇ ಹೊರತು, ಹಿಂದೂ ಧರ್ಮ ಮಾತ್ರವೇ ಭಾರತೀಯ ಸಂಸ್ಕೃತಿಯಲ್ಲ. 'ಭಾರತೀಯ' ಎಂಬುದರಲ್ಲಿ ಬೌದ್ಧ, ಜೈನ, ವೀರಶೈವ, ಸಿಖ್, ಇಸ್ಲಾಂ, ಕ್ರೈಸ್ತ ಮುಂತಾದ ಹಲವಾರು ಧರ್ಮಗಳೂ ಸೇರಿದ್ದು ಈ ಧರ್ಮಗಳೆಲ್ಲ ಬೆಳೆದಿರುವುದು ಮತಾಂತರ ಮೂಲಕವೆ ಎಂಬುದನ್ನು ಮರೆಯುವಂತಿಲ್ಲ.

ಅಂತೆಯೇ ಈ ದೇಶದಲ್ಲಿ ಸಾವಿರಾರು ಜಾತಿ, ಪಂಗಡಗಳೆಲ್ಲವನ್ನೂ ಹಿಂದೂ ಧರ್ಮದ ಚೌಕಟ್ಟಿನಲ್ಲಿ ಸಮಾವೇಶಗೊಳಿಸಲು ಯಾವ ಆಧಾರಗಳೂ ಇಲ್ಲ. ಅದನ್ನು ಒಪ್ಪುವುದಾದರೆ ವರ್ಣಾಶ್ರಮ ಪದ್ಧತಿಗನುಸಾರವಾಗಿ ಶ್ರೇಣೀಕೃತ ಜಾತಿಪದ್ಧತಿ ಹಾಗೂ ಅಸ್ಪೃಶ್ಯತಾ ಆಚರಣೆಯನ್ನೂ ಒಪ್ಪಬೇಕಾಗುತ್ತದೆ.

ಕೆಳಜಾತಿಯ ಜನರು ಸಾವಿರಾರು ವರ್ಷಗಳಿಂದಲೂ ತಮಗಾಗುವ ಅವಮಾನ, ಅನ್ಯಾಯ ಗಳನ್ನು ಪ್ರತಿಭಟಿಸಿ ಮತಾಂತರಗೊಳ್ಳುತ್ತಿದ್ದಾರೆ. ಇದನ್ನು ತಡೆಯಲು ಆತ್ಮಗೌರವ, ಸಮಾನತೆಯ ಆಧಾರದಲ್ಲಿ ಹಿಂದೂ ಧರ್ಮವನ್ನು ಪುನರ್ ರಚಿಸಬೇಕಾಗುತ್ತದೆ. ಈ ಅಂಶಗಳನ್ನು ಗೌಣವಾಗಿಸಿ ಮತಾಂತರದ ಬಗೆಗೆ ಬೊಬ್ಬೆಹಾಕುವುದು ಯಥಾಸ್ಥಿತಿ ವಾದಿಗಳ ತಂತ್ರವಾಗಿದೆ.

ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವುದನ್ನು ವಿರೋಧಿಸಿದರೂ ಆಳದಲ್ಲಿ ಮತಾಂತರ ವಿರೋಧಿಗಳ ಗುರಿ: ಬೌದ್ಧರು. ಇತ್ತೀಚೆಗೆ ಲಕ್ಷಾಂತರ ಮಂದಿ ದಲಿತರು ಕರ್ನಾಟಕದಲ್ಲಿ ಬೌದ್ಧ ದೀಕ್ಷೆ ಪಡೆಯುತ್ತಿರುವುದನ್ನು ಗಮನಿಸಿ ಮತಾಂತರವನ್ನೇ ನಿಷೇಧಿಸುವ ಮಾತನಾಡುತ್ತಿದ್ದಾರೆ.

ಬೌದ್ಧ ಧರ್ಮವು ಹಿಂದೂ ಧರ್ಮದ ಶಾಖೆ ಎಂದು ಅಪ್ಪಣೆ ಕೊಡಿಸುವ ಪೇಜಾವರ ಮಠಾಧೀಶರು ಅದೇ ಉಸಿರಿನಲ್ಲಿ ದಲಿತರು ಬೌದ್ಧ ದೀಕ್ಷೆ ಪಡೆಯಬಾರದೆಂದೂ, ಬೇಕಾದರೆ ಆರ್ಯ ಸಮಾಜ ಸೇರಿಕೊಳ್ಳಬಹುದೆಂದೂ ಪರವಾನಗಿ ನೀಡುತ್ತಾರೆ. ಮಧ್ವ ಮತಕ್ಕೆ ಬನ್ನಿ

ಎಂದು ಆಹ್ವಾನ ನೀಡುವ ಔದಾರ್ಯವಿಲ್ಲದ ಮತ್ತು ಅಸ್ಪೃಶ್ಯರೊಡನೆ ಸಹಪಂಕ್ತಿ ಭೋಜನಕ್ಕೆ ಒಪ್ಪದ ಪೇಜಾವರರ ಶಿಷ್ಯರೂ ಸಾಹಿತಿ, ಬುದ್ಧಿಜೀವಿಗಳ ಮೇಲೆ ಸುಳ್ಳು ಆರೋಪ ಹೊರಿಸುತ್ತಾರೆ.

'ಬುದ್ಧಿ ಜೀವಿಗಳ ಬಾಯಲ್ಲಿ ಕಾಮಾಟಿಪುರದ ವಾಸನೆ ಬರುತ್ತಿದೆ' ಮುಂತಾಗಿ ಕೀಳು ಮಟ್ಟದ ವ್ಯಕ್ತಿ ನಿಂದೆಗೆ ಹೊರಟಾಗ ಅವರೊಂದಿಗೆ ಸಂವಾದ ಅಸಾಧ್ಯವೆನಿಸುತ್ತದೆ.

ನಾನು ಗೌರವಿಸುವ ಹಿರಿಯರೂ ಗುರುಗಳೂ ಆದ ಡಾ. ಚಿದಾನಂದಮೂರ್ತಿ ತಮ್ಮ ಇಳಿ ವಯಸ್ಸಿನಲ್ಲಿ ಯಾವ ಮಟ್ಟದ ಜನರೊಡನೆ ವೇದಿಕೆ ಹಂಚಿಕೊಳ್ಳುತ್ತಿದ್ದಾರೆಂಬುದನ್ನು ಗಮನಿಸಿದಾಗ ನನ್ನ ಮನಸ್ಸು ಮುದುಡಿ ಹೋಗುತ್ತದೆ.

ಕೆ. ಮರುಳಸಿದ್ದಪ್ಪ

*

'ಪ್ರಜಾವಾಣಿ' ದೈನಿಕದ ಜನವರಿ ೬ರ ವಾಚಕರ ವಾಣಿಯಲ್ಲಿ ಬಂದ ಕೆ. ಮರುಳಸಿದ್ದಪ್ಪ (ಕೆಎಂಎಸ್) ಅವರ ಪತ್ರ ಓದಿ ಕುತೂಹಲದಿಂದ ಮುನ್ನಾ ದಿನದ ಪತ್ರಿಕೆಯ ಸಂಚಿಕೆ ತರಿಸಿದೆ. ವಿಜಯ ಕರ್ನಾಟಕ ಪತ್ರಿಕೆ ವಾರಾನುವಾರ ಮತಾಂತರ ಕುರಿತು ನಡೆಸಿದ 'ಮುಕ್ತ' ವೇದಿಕೆಯ ಕೆಲವು ಆಯ್ದ ಲೇಖನಗಳನ್ನು ಪುಸ್ತಕ ರೂಪದಲ್ಲಿ 'ಮತಾಂತರ: ಸತ್ಯದ ಮೇಲೆ ಹಲ್ಲೆ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿತ್ತು. ಅದರ ಬಿಡುಗಡೆ ಕಾರ್ಯಕ್ರಮದ ವರದಿ ಅಲ್ಲಿತ್ತು. ಲೋಕಾರ್ಪಣೆ ಮಾಡಿದವರು ಹಿರಿಯ ಸಾಹಿತಿ ಎಸ್. ಎಲ್. ಭೈರಪ್ಪನವರು. ವೇದಿಕೆಯ ಮೇಲಿದ್ದ ಇತರರು: ಎನ್. ಎಸ್. ರಾಜಾರಾಮ, ಚಿದಾನಂದಮೂರ್ತಿ, ಹಾರನಹಳ್ಳಿ ರಾಮಸ್ವಾಮಿ ಮತ್ತು ಶತಾವಧಾನಿ ಆರ್. ಗಣೇಶ. ಜನವರಿ ೪ರ ಈ ಕಾರ್ಯಕ್ರಮದ ವಿವರಗಳನ್ನು ಕೆಎಂಎಸ್ ಪ್ರಸ್ತಾಪಿಸಿದ್ದಾರೆ.

ನನಗೊಂದು ಸಮಾಧಾನವಾಗಿತ್ತು. ಭೈರಪ್ಪ ಕ್ಯಾಂಪಿನ ಅನೇಕರು ನಾಡಿನ ಎಡ ಮತ್ತು ಪ್ರಗತಿಪರ ಚಿಂತಕರನ್ನು ಸಾರಾಸಗಟಾಗಿ 'ಬುದ್ಧಿಜೀವಿ' (intellectual) ಎಂಬ ಪದಪ್ರಯೋಗದ ಮೂಲ ನಮನಮೂನೆಯಾಗಿ ಹೀಯಾಳಿಸುತ್ತಿರುವುದು ನಮಗೆಲ್ಲ ಗೊತ್ತು. ಸಹಜವಾಗಿಯೇ ಕಮ್ಯುನಿಷ್ಟರು, ಸಮಾಜವಾದಿಗಳು, ದಲಿತ-ಬಂಡಾಯ ಸಾಹಿತಿಗಳು, ಹಿಂದೂ ಮೂಲಭೂತ ವಾದಿಗಳನ್ನು ವಿರೋಧಿಸುವವರು, ನಾಸ್ತಿಕರು - ಈ ಕೆಟಗರಿಯಲ್ಲಿ ಬರುತ್ತಾರೆ. ಅದು ಸರಿ, ಅವರ ಅನುಕೂಲ. ಆದರೆ ಹೀಗೆ ಹೀಯಾಳಿಸುವ ಮನುವಾದಿಗಳು, ಬಲಪಂಥೀಯರು, ಕರ್ಮಠರು, ಕೋಮುವಾದಿಗಳು, ಆರ್‌ಎಸ್‌ಎಸ್ ಬೆಂಬಲಿಗರು, ಹಿಂದೂ ರಾಷ್ಟ್ರವಾದಿಗಳು - ಇವರನ್ನೆಲ್ಲ 'ಬುದ್ಧಿಜೀವಿ' ಪದಕ್ಕೆ ಎದುರಾದ ಯಾವ ಶಬ್ದದಲ್ಲಿ ಕಟ್ಟಿಹಾಕಬೇಕು ಎಂಬ ತೀವ್ರ ಹುಡುಕಾಟದಲ್ಲಿ ಇದ್ದವ ನಾನು. ಹೀಗಾಗಿ ಭಾರತೀಯ ವಿಚಾರವಂತರ ವೇದಿಕೆ (Platform of Indian Intellects) ಅಸ್ತಿತ್ವಕ್ಕೆ ಬಂದದ್ದು ವಿಚಾರ ಸಮರಕ್ಕೆ ಒಂದು ರಂಗವನ್ನು ನಿರ್ಮಿಸಿದಂತಾಗಿತ್ತು.

ಪ್ರಜಾವಾಣಿಯ ವರದಿಯ ಈ ವಿವರಗಳು ಕೂಡ ಗಮನಾರ್ಹ: 'ತಮ್ಮ ಜೀವನ ಹಿಂದೂ ಧರ್ಮ ರಕ್ಷಣೆಗೆ ಮೀಸಲು' ಎಂದು ಆರಂಭದಲ್ಲೇ ಹೇಳಿ ವಿಚಾರಗಳನ್ನು ಮಂಡಿಸಿದ

ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ, 'ಮಹಾತ್ಮ ಗಾಂಧೀಜಿ ಕ್ರೈಸ್ತ ಧರ್ಮದ ಕುರಿತು ಒಳ್ಳೆಯ ಭಾವನೆ ಹೊಂದಿರಲಿಲ್ಲ. ಕ್ರೈಸ್ತರು ಎಂದಿಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲಿಲ್ಲ. ವರ್ಷಗಳು ಕಳೆದಂತೆ ಮುಸ್ಲಿಂ ಮತ್ತು ಕ್ರೈಸ್ತರ ಸಂಖ್ಯೆ ಹೆಚ್ಚುತ್ತಿದೆ. ಭವಿಷ್ಯದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಾರೆ' ಎಂದರು.

ಶತಾವಧಾನಿ ಆರ್. ಗಣೇಶ ಅವರ ಹೆಸರು ನೀವು ಕೇಳಿರಬೇಕು. ಅವಧಾನ ಕಲೆಯಲ್ಲಿ ಪಾರಂಗತರು. ಅವರ ಅಧ್ಯಯನಶೀಲತೆ, ಮಾಹಿತಿ ಸಂಗ್ರಹ, ವಾದ ಮಂಡಿಸುವ ರೀತಿ ಎಲ್ಲ ಆಕರ್ಷಣೀಯ. ಜನವರಿ ೪ರ ಸಭೆಯಲ್ಲಿ ಅವರು ಆಡಿದರೆನ್ನಲಾದ ಮಾತುಗಳಿವು: 'ಬುದ್ಧಿ ಜೀವಿಗಳ ಬಾಯಿಯಲ್ಲಿ ಮುಂಬೈಯ ಕಾಮಾಟಿಪುರದ ವಾಸನೆ ಬರುತ್ತದೆ. ಅವರು ಬೌದ್ಧಿಕ ವ್ಯಭಿಚಾರ ಮಾಡುತ್ತಿದ್ದಾರೆ. ಅವರಿಗೆ ರಾಷ್ಟ್ರಮಟ್ಟದಲ್ಲಿ ಮಾನವಿದೆಯೇ ಹೊರತು ರಾಜ್ಯದಲ್ಲಿ ಇಲ್ಲ. ಅಂಥವರ ಹೆಸರನ್ನು ತೆಗೆದುಕೊಂಡರೆ ಮತ್ತೊಮ್ಮೆ ಅರ್ಚನೆ ಮಾಡಿಕೊಳ್ಳ ಬೇಕಾಗುತ್ತದೆ.'

ಇಲ್ಲಿ ಗಣೇಶರ ವ್ಯಂಗ್ಯಕ್ಕೆ ಗುರಿಯಾದವರು ಡಾ. ಯು.ಆರ್. ಅನಂತಮೂರ್ತಿ ಅಂತ ಪತ್ರಿಕಾ ವರದಿಯಲ್ಲಿಯೇ ಉಲ್ಲೇಖವಿದೆ.

ಪ್ರಜಾವಾಣಿಯ ಜನವರಿ ೭ರ ವಾಚಕರ ವಾಣಿಯಲ್ಲಿ ಬಂದ ನನ್ನ ಪತ್ರಕ್ಕೆ ಹಿನ್ನೆಲೆಯಾಗಿ ಇಷ್ಟೆಲ್ಲ ಮಾತು. ಆ ಪತ್ರ ಇದು:

ಗಣೇಶ ಮತ್ತು ಕಾಮಾಟಿಪುರ

ಮತಾಂತರ ಕುರಿತು ವ್ಯಾಪಕ ಚರ್ಚೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಭೈರಪ್ಪ-ಚಿದಾನಂದಮೂರ್ತಿ-ನವರತ್ನ-ಗಣೇಶ್ ಮುಂತಾದವರನ್ನು ಒಳಗೊಂಡ ಏಕಾಭಿಪ್ರಾಯದ ಒಂದು ಗುಂಪು ಇನ್ನೊಂದು ಅಭಿಪ್ರಾಯದ ಗುಂಪಿನವರಿಗೆ 'ಬುದ್ಧಿಜೀವಿ' ಎಂಬ ನಾಮಕರಣ ಮಾಡಿ ಟೀಕೆ ಮಾಡುತ್ತಿರುವುದನ್ನು ನೋಡಿದ್ದೇವೆ. ಇವರು ಇತ್ತೀಚೆಗೆ Platform of Indian Intellects (ಭಾರತೀಯ ವಿಚಾರವಂತರ ವೇದಿಕೆ) ರಚಿಸಿಕೊಂಡಿದ್ದು ಸ್ವಾಗತಾರ್ಹ. ಈಗ 'ಬುದ್ಧಿಜೀವಿ' ಮತ್ತು 'ವಿಚಾರವಂತ' ಎಂಬ ಎರಡು ಶಬ್ದಗಳು ನಮ್ಮೆದುರಿಗೆ ಇವೆ. ಇವೆರಡೂ ಇಂಗ್ಲೀಷಿನ Intellect / intellectual ಪದಗಳಿಗೆ ಸಂವಾದಿಯಾದ ಕನ್ನಡ ಪದಗಳು.

ನಾನೂ ಕುತೂಹಲದಿಂದ ಅನೇಕ ನಿಘಂಟುಗಳ ಮೇಲೆ ಕಣ್ಣಾಡಿಸಿದೆ. Intellectಗೆ ಹತ್ತಿರ ಹತ್ತಿರವಾಗಿ ನನಗೆ ಕಂಡದ್ದು: ಬುದ್ಧಿ-ಜಾಣ-ಪ್ರಾಜ್ಞ-ಮೇಧಾವಿ ಮುಂತಾದ ಪದಗಳು ಮಾತ್ರ. 'ವಿಚಾರ' ಎಂಬ ಶಬ್ದ ಕಾಣಲಿಲ್ಲ. ವಿಚಾರ-ವೈಚಾರಿಕತೆಗಳಿಗೆ ಸಂವಾದಿಯಾದ ಇಂಗ್ಲಿಷ್ ಶಬ್ದ 'rational' ಎಂಬುದು. ವೇದಿಕೆಯ 'ವಿಚಾರವಂತ'ರು ಗಮನಿಸಬೇಕು.

'ಬುದ್ಧಿಜೀವಿ' ಮತ್ತು 'ವಿಚಾರವಂತ' ಶಬ್ದಗಳು ವಿರುದ್ಧಾರ್ಥಕವೇ ಆಗಿದ್ದರೆ ಒಂದು ಸಣ್ಣ

ಅಪಾಯವಿದೆ: 'ಬುದ್ಧಿಜೀವಿ'ಗಳು 'ವಿಚಾರಹೀನ'ರೆಂಬ, 'ವಿಚಾರವಂತ'ರು 'ಬುದ್ಧಿಗೇಡಿ' ಗಳೆಂಬ ತೀರ್ಮಾನಕ್ಕೆ ಸಾಮಾನ್ಯರು ಬರಬಹುದಾಗಿದೆ!

ವಿಚಾರವಂತರ ಜನವರಿ ೪ರ ಕಾರ್ಯಕ್ರಮದಲ್ಲಿ ಪಾಲುಗೊಂಡ ಚಿಮೂ ಅವರು 'ಇಳಿಯ ವಯಸ್ಸಿನಲ್ಲಿ ಯಾವ ಮಟ್ಟದ ಜನರೊಡನೆ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ' ಎಂಬುದಕ್ಕೆ ಡಾ. ಕೆ. ಮರುಳಸಿದ್ದಪ್ಪನವರು ಖೇದಗೊಂಡಿದ್ದಾರೆ. (ವಾಚಕರ ವಾಣಿ, ಜ. ೬) ನನಗೆ ಹಾಗೆ ಅನಿಸುತ್ತಿಲ್ಲ. ಹಿರಿಯರಾದ ಚಿಮೂ ಅವರ 'ಎತ್ತರ' ನಾಡಿಗೆಲ್ಲ ಗೊತ್ತು. ಅವರು ವೇದಿಕೆ ಹಂಚಿಕೊಂಡಿದ್ದು ಅದೇ 'ಎತ್ತರ'ದ ಮಹಾಶಯರೊಂದಿಗೆ!

ಶತಾವಧಾನಿ ಆರ್. ಗಣೇಶ್ ಅವರು, 'ಮುಂಬೈಯ ಕಾಮಾಟಿಪುರದ ವಾಸನೆ' ಕುರಿತು ಪ್ರಸ್ತಾಪಿಸಿದ್ದು ಮಜಾ ಅನಿಸಿತು. ಬ್ರಹ್ಮಚಾರಿ ಎಂದೇ ಖ್ಯಾತನಾಗಿರುವ 'ಗಣೇಶ'ನಿಗೂ 'ಕಾಮಾಟಿಪುರ'ಕ್ಕೂ ಇರಬಹುದಾದ ಎತ್ತಣಿಂದೆತ್ತಣ ಸಂಬಂಧವನ್ನು ಆ ಭೈರವೇಶ್ವರನೇ ಬಲ್ಲ. ಅಂದ ಹಾಗೆ ಇನ್ನು ಮೇಲೆ ನಮ್ಮ 'ಶತಾವಧಾನಿ ಗಣೇಶ'ರನ್ನು 'ಕಾಮಾಟಿಪುರ ಗಣೇಶ' ಎಂದು ಕರೆಯೋಣವೇ?

ಚಂಪಾ

*

ಪ್ರಜಾವಾಣಿಯ ಈ ಪತ್ರಕ್ಕೆ ಅದ್ಭುತವಾದ ಪ್ರತಿಕ್ರಿಯೆ ಬಂದದ್ದು ವಿಜಯ ಕರ್ನಾಟಕದ 'ಬೆತ್ತಲೆ ಜಗತ್ತು' ಸಾಪ್ತಾಹಿಕ ಅಂಕಣದ ಪ್ರತಾಪ್ ಸಿಂಹ ಅವರಿಂದ. (೧೦ ಜನವರಿ ೨೦೦೯) ಅವರ ಮಾರುದ್ದದ ಶೀರ್ಷಿಕೆ: 'ಗಣೇಶ್ ಮಾತಾಡಿದರೆ ಚಂಪಾ ನಾಲಗೆಯೇಕೆ ತುರಿಸುತ್ತದೆ?

ಮುಂದಿನ ಬೆಳವಣಿಗೆಗಳಿಗೆ ಪ್ರಸ್ತುತವಾದ ಆ ಲೇಖನದ ಕೆಲವು ವಾಕ್ಯ ಭಾಗಗಳಿವು:

೧. ಗಣೇಶ್ ಮಾತನಾಡಿದರೆ ಚಂಪಾ ಅವರ ನಾಲಿಗೆಯೇಕೆ ತುರಿಸಲು ಆರಂಭವಾಗುತ್ತದೆ? ಕಾಮಾಟಿಪುರದ ವೇಶ್ಯೆಯರಿಗೂ 'ಸಮಯ ಸಾಧಕ'ರಿಗೂ ಯಾವ ವ್ಯತ್ಯಾಸವೂ ಇಲ್ಲ ಎಂಬ ಶತಾವಧಾನಿಗಳ ಮಾತಿನ ಅರ್ಥವನ್ನೂ ಗ್ರಹಿಸದೆ 'ಅವರನ್ನು ಕಾಮಾಟಿಪುರದ ಗಣೇಶ್ ಎಂದು ಕರೆಯೋಣವೇ' ಎಂದು ಲೇವಡಿ ಮಾಡಿರುವ ಚಂಪಾ ಅವರಿಗೇನಾಗಿದೆ?

೨. ಅದಿರಲಿ, ಚಂಪಾ ಅವರು ತಮ್ಮ ಘನತೆಗೆ ತಕ್ಕಂತೆ ವರ್ತಿಸುತ್ತಿದ್ದಾರೆಯೇ? ಹುಬ್ಬಳ್ಳಿ-ಧಾರವಾಡದ ಕಡೆ ಈ ಚಂಪಾ ಎಷ್ಟು ಫೇಮಸ್ ಎಂದರೆ ಯಾವುದಾದರೂ ಬೀದಿ ನಾಯಿ ಇಂಗ್ಲಿಷ್ ಬೋರ್ಡ್ ಮೇಲೆ ಮೂತ್ರ ಮಾಡಿದರೆ ಆ ನಾಯಿ ತನ್ನದೇ ಎಂದು claim ಮಾಡುತ್ತಾರೆ ಎಂದು ಜನ ಮುಸಿ ಮುಸಿ ನಗುತ್ತಾ ಲೇವಡಿ ಮಾಡುವುದು ತಾವೇ ಶಾಣ್ಯಾ ಎಂದು ಬೀಗುವ ಈ ಚಂಪಾ ಅವರಿಗೆ ಇನ್ನೂ ಗೊತ್ತಾಗಿಲ್ಲವೆ?

೩. ಬೇರೆಯವರ ಹೆಸರನ್ನು ಗೇಲಿ ಮಾಡುವ ಇವರ ಹೆಸರು ಹೇಗಿದೆ? ಚಂಪಾ ಅಂದರೆ ಅದು ಗಂಡೋ ಹೆಣ್ಣೋ ತಿಂಡಿಯೋ (ಚಂಪಾಕಲಿ) ಅಥವಾ ಜಿರಲೆ ಮದ್ದೋ?

೪. ಅವಧಾನದಂತಹ ಕಲೆಯನ್ನು ಉಳಿಸಿ, ಬೆಳೆಸುತ್ತಿರುವ, ಬ್ರಹ್ಮಚಾರಿಯಾಗಿ ಸಂಶೋಧನೆಗೆ ತಮ್ಮನ್ನು ಮುಡಿಪಾಗಿಟ್ಟಿರುವ ಮೆಕ್ಯಾನಿಕಲ್ ಎಂಜಿನಿಯರ್ ಗಣೇಶರಂತಹ ಪ್ರಾಜ್ಞರ ಬಗ್ಗೆ ಲಘುವಾಗಿ ಮಾತನಾಡಿದರೆ ಅವರಿಗೆ ನೋವಾಗುವುದಿಲ್ಲವೆ?

೫. ಚಿಮೂ ಅವರ 'ಎತ್ತರ'ದ ಬಗ್ಗೆ... ಅವಹೇಳನಕಾರಿಯಾಗಿ ಮಾತನಾಡುವ ಚಂಪಾ ತಮ್ಮ 'ಎತ್ತರ'ವನ್ನು ಎಂದಾದರೂ ಅಳೆದುಕೊಂಡಿದ್ದಾರಾ?

೬. 'ಊರು-ಕೇರಿ ಸ್ವಚ್ಛವಾಗಬೇಕೆಂದರೆ ಹಂದಿಗಳಿರಬೇಕು' ಎಂದು ದಾಸರು ಹೇಳಿದ್ದು ಮುಂದೆ ಚಂಪಾ ಅವರ ಜನನದ ಮುಂದಾಲೋಚನೆಯಿಂದಲೇ ಎಂದರೆ ಹೇಗಾದೀತು? ಇನ್ನು ಮುಂದಾದರೂ ಮಾತನಾಡುವ ಮೊದಲು ಯೋಚಿಸುವುದೊಳಿತು. ಅಷ್ಟಕ್ಕೂ ಇತರರನ್ನು ನಿಂದಿಸಿದರೆ ಅವರು ತಿರುಗಿ ಹೂವಿನ ಹಾರ ಹಾಕುವುದಿಲ್ಲ.

*

ನಾನು ವಿಜಯ ಕರ್ನಾಟಕ ಪತ್ರಿಕೆಯ ನಿತ್ಯ ಓದುಗ. ಮಾಮೂಲಿನಂತೆ ಅದರಲ್ಲಿ ಕೆಲವು ಉಪಯುಕ್ತ, ಅನೇಕ ನಿರುಪಯುಕ್ತ ಅಂಕಣಗಳಿವೆ. ಸಂಪಾದಕ ವಿಶ್ವೇಶ್ವರ ಭಟ್ಟರೊಂದಿಗೆ ಅನೇಕ ವರ್ಷಗಳ ಸ್ನೇಹ. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿ. ಸಾಹಿತ್ಯದಲ್ಲಿ ಬಹಳ ಆಸಕ್ತಿ, ಸಂಭಾವಿತ. ಬರವಣಿಗೆ ಕೂಡ ಸಹಜ, ಸುಲಲಿತ, ಸುಲಭಗ್ರಾಹ್ಯ. ಅವರ ಅಂಕಣದೊಂದಿಗೆ ನಾನು ತಪ್ಪದೇ ಓದುವುದು ಪ್ರತಾಪಸಿಂಹರ ಬರಹಗಳನ್ನು. ಕಾರಣ: ಅಪಾರವಾದ ಮಾಹಿತಿ ಸಂಕಲನ, ಅದನ್ನು ಉದ್ದೇಶಿತ ಗುರಿಯಾಗಿ ಬಳಸಿಕೊಳ್ಳುವ ಜಾಣಾಕ್ಷತನ, ಯಾವ ಮುಜುಗರ-ನಖರಾಗಿರಿ ಇಲ್ಲದೆ ಬಳಸುವ ಭಂಡ ಭಾಷೆ ಇತ್ಯಾದಿ. ಮೊದಲಿನಿಂದಲೂ ಪಕ್ಕಾ ಚಡ್ಡಿ ಅಂತ ಕಾಣುತ್ತದೆ. ಪ್ರವೀಣ ತೊಗಾಡಿಯಾ, ಪ್ರಮೋದ ಮುತಾಲಿಕ, ವರುಣ ಗಾಂಧಿ ಅಂಥವರ ಪಿಂಡಕ್ಕೆ ಹುಟ್ಟಿದಂತಿರುವ ಪ್ರಚಂಡ ಅಗ್ನಿವದನ.

ನನ್ನನ್ನೇ ಟಾರ್ಗೆಟ್ ಮಾಡಿಕೊಂಡು ಈ ಸಿಂಹ ಬರೆದ ಲೇಖನ ಓದಿ ಖುಶಿಯಾಯಿತು. ಅದಕ್ಕೊಂದು ಪ್ರತಿಕ್ರಿಯೆ ಬರೆದು ಕಳಿಸುವೆ - ಅಂತ ಭಟ್ಟರಿಗೆ ಹೇಳಿದೆ. ಕಳಿಸಿರಿ ಅಂದರು. ಕಳಿಸಿದೆ ಫ್ಯಾಕ್ಸ್ ಮೂಲಕ. ಅದು ಇದು:

ಪ್ರತಾಪ-ಸಿಂಹರ ಸಿಂಹ-ಪ್ರಲಾಪ

ಸಮಕಾಲೀನ ಸಮಸ್ಯೆಯೊಂದರ ಬಗ್ಗೆ ರಾಜಧಾನಿಯ ಮತ್ತೊಂದು ಪತ್ರಿಕೆಯ ಮೈದಾನದಲ್ಲಿ ನಡೆಯುತ್ತಿದ್ದ ಜಗಳವನ್ನು ತಮ್ಮ ಪತ್ರಿಕೆಯ ರಣರಂಗಕ್ಕೆ ಆವಾಹನೆ ಮಾಡಿಕೊಂಡು ಪ್ರತಾಪ ಸಿಂಹರು ನನ್ನನ್ನು ಹಿಗ್ಗಾಮುಗ್ಗಾ ಝಾಡಿಸಿದ್ದಾರೆ. (ವಿಜಯ ಕರ್ನಾಟಕ, ಜನವರಿ ೧೦)

● ನಾನು ಬರೆದ ಮೂರೇ ಮೂರು ವಾಕ್ಯಗಳು ನಮ್ಮ ಭಾರತೀಯ 'ವಿಚಾರವಂತ'ರನ್ನು ಇಷ್ಟು ಘಾಸಿಗೊಳಿಸಬಹುದೆಂದು ನನಗೆ ಅನ್ನಿಸಿರಲಿಲ್ಲ. 'ಮುಂಬೈಯ ಕಾಮಾಟಿಪುರದ ವಾಸನೆ' (ಎಂಬ ಶಬ್ದ) ಮೊದಲು ಬಂದದ್ದೇ ಶತಾವಧಾನಿ ಗಣೇಶ ಅವರ ಬಾಯಿಯಿಂದ. ಆ ಮಾತಿಗೆ ಬಂದ ಪ್ರತಿಕ್ರಿಯೆಗಳ ಸರಣಿಯಲ್ಲಿ ನನ್ನಿಂದ ಅವರಿಗೆ 'ಕಾಮಾಟಿಪುರ ಗಣೇಶ'

ಎಂದು ನಾಮಕರಣವಾದದ್ದು. ಈಗ ಒಂದು What if. ಅವತ್ತು ಅವರ ಬಾಯಿಯಿಂದ ಆ ಮಾತು ಬಂದಿರದಿದ್ದರೆ? ಏನೂ ಆಗುತ್ತಿರಲಿಲ್ಲ. ಬೆತ್ತಲೆ ಜಗತ್ತಿನ ಪ್ರತಾಪ-ಸಿಂಹರ ಸಿಂಹ-ಪ್ರಲಾಪವನ್ನು ನಾವು ಕೇಳುತ್ತಿರಲಿಲ್ಲ. ಗಣೇಶರ ಹೊಸ ನಾಮಧೇಯವು ಅವರ 'ಗೋರಿ' ಎಂದಾದರೆ ಅದನ್ನು ತೋಡಿಕೊಂಡವರು ಅವರೇ ಅಲ್ಲವೇ?

- 'ಇನ್ನು ಮುಂದಾದರೂ ಮಾತನಾಡುವ ಮೊದಲು ಯೋಚಿಸುವುದೊಳಿತು. ಅಷ್ಟಕ್ಕೂ ಇತರರನ್ನು ನಿಂದಿಸಿದರೆ ಅವರು ತಿರುಗಿ ಹೂವಿನ ಹಾರ ಹಾಕುವುದಿಲ್ಲ.' - ಎಂಬ ಪ್ರತಾಪ ಸಿಂಹರ ನೀತಿ ಮಾತು ಲಿಂಗಮೆಚ್ಚಿ ಅಹುದಹುದೆನ್ನುವ ಮಾತು! ಶತಾವಧಾನಿಗಳು ಇನ್ನು ಮುಂದಾದರೂ ಅವಧಾನಿಸಬೇಕು.

- ಚಿದಾನಂದ ಮೂರ್ತಿಗಳ 'ಎತ್ತರ'ದ ವಿಷಯ. ವಿಚಾರವಂತರ ವೇದಿಕೆಯಲ್ಲಿದ್ದವರೆಲ್ಲ 'ಸಮಾನ ಮನಸ್ಕರು' ಎಂದು ನನ್ನ ಅರ್ಥ. ನನ್ನ ವಾಕ್ಯವನ್ನು ಅವರವರಿಗೆ ಕಂಡಂತೆ ಗ್ರಹಿಸಬಹುದು. ಚಿಮೂ 'ಮಹಾನ್-ವಿದ್ವಾಂಸ' ಎಂದಾದರೆ ಉಳಿದವರೂ ಮಹಾನ್ ವಿದ್ವಾಂಸರೇ. ಚಿಮೂ 'ಕುಬ್ಜ-ಪಂಡಿತ' ಎಂದಾದರೆ ಉಳಿದವರೂ ಅವರೇ.

- ಪ್ರತಾಪಸಿಂಹರು 'ಇಂಗ್ಲಿಷ್ ಬೋರ್ಡ ಮೇಲೆ ಮೂತ್ರ ಮಾಡುವ ನಾಯಿ'ಯ ಚಿತ್ರ ನೀಡಿದ್ದಾರೆ. ಅಷ್ಟು ಎತ್ತರದ ಬೋರ್ಡ್ ಮೇಲೆ ಬೀದಿಯ ಮೇಲಿನ ಒಂದು ಪ್ರಾಣಿ ಉಚ್ಚೆ ಹೊಯ್ಯುವುದೇ ಒಂದು ಅಸಂಬದ್ಧವಾದ ಅದ್ಭುತ ಕಲ್ಪನೆ. ಇಂಥ 'ಪ್ರತಾಪ'ವನ್ನು ಸಿಂಹವೇ ಮಾಡಲಿ, ನಾಯಿಯೇ ಮಾಡಲಿ - ಅದು ನನ್ನದು ಅಂತ claim ಮಾಡುವುದು ನನ್ನ ಭಾಗ್ಯ!

- ಪಾಪ, ನನ್ನ 'ಚಂಪಾ' ಎಂಬ ಹೆಸರು ಗಂಡೋ, ಹೆಣ್ಣೋ, ತಿಂಡಿಯೋ, ಜಿರಲೆ ಮದ್ದೋ ಎಂಬುದೇ ಗೊತ್ತಿಲ್ಲವಂತೆ! (ಇಂಥದೆಲ್ಲ ಪತ್ತೆ ಹಚ್ಚುವ ಜವಾಬ್ದಾರಿಯನ್ನು ತೀಕ್ಷ್ಣ ವಾಸನಾ-ಪ್ರಜ್ಞೆಯ ವಿಚಾರವಂತರಿಗೆ ವಹಿಸುವುದು ಒಳ್ಳೆಯದು.) 'ಜಿರಲೆ ಮದ್ದು' ಎಂಬ ಅಡ್ಡ ಹೆಸರು ನನಗೆ ಪ್ರಿಯವಾಯಿತು. ನನ್ನ ಪ್ರಶ್ನೆ: ನಾನು 'ಮದ್ದು' ಆದರೆ 'ಜಿರಲೆ'ಗಳು ಯಾರ್‍ಯಾರು?

*

ಮರುದಿನ ಮತ್ತೆ ಫೋನು. ಭಟ್ಟರ ದನಿ ಬದಲಾಗಿತ್ತು: "ನಿಮ್ಮ ಪ್ರತಿಕ್ರಿಯೆ ನೋಡಿದೆ. ಅದರಲ್ಲೇನೂ ಹುರುಡಿಲ್ಲ. ಅದೇ ನಿಂದೆ, ಆಪಾದನೆ." ನಾನೆಂದೆ: "ನಿಮ್ಮ ಪತ್ರಿಕೆಯಲ್ಲಿ ಬಂದ ಲೇಖನಕ್ಕೆ ನಿಮ್ಮಲ್ಲಿಯೇ ಉತ್ತರ ಬರಬೇಕಲ್ಲವೇ? ಇದಲ್ಲವೆ ಪತ್ರಿಕಾ ಧರ್ಮ?". ಮರ್ಮಕ್ಕೆ ತಾಕಿರಬೇಕು: "ನಮ್ಮ ಸೀನಿಯರುಗಳನ್ನು ಕೇಳುವೆ. ೨೪ ಗಂಟೆಯೊಳಗಾಗಿ ಐ ವಿಲ್ ಗೆಟ್ ಬ್ಯಾಕ್ ಟು ಯೂ." ಅಂದರು. ಮರುದಿನ ಸಂಜೆ ೨೪ ಗಂಟೆಗೆ ಇನ್ನೂ ೨೦ ನಿಮಿಷವಿರುವಾಗಲೇ - ಅವರ ಉಪಸಂಪಾದಕ ಪುಟ್ಟಸ್ವಾಮಿ ಮೂಲಕ ಮೆಸೇಜು. ಅದೇ ಅದೇ. ನಾನು "ಏನು, ನನ್ನೊಂದಿಗೆ ನೇರ ಮಾತನಾಡಲು ನಿಮ್ಮ ಸಂಪಾದಕನಿಗೆ ಧೈರ್ಯವಿಲ್ಲವೇ?" ಎಂದವನೇ ಮುಂದೆ ಐದೇ ನಿಮಿಷದಲ್ಲಿ ಮತ್ತೊಂದು ಫ್ಯಾಕ್ಸ್ ಕಳಿಸಿದೆ.

ಪ್ರಿಯ ವಿಶ್ವೇಶ್ವರ ಭಟ್ಟರೆ,

ನಿನ್ನೆ ಸಂಜೆ ನೀವೇ ಹಾಕಿಕೊಂಡ ಗಡುವು ಮೀರುತ್ತಿದ್ದಂತೆ ಗೆ. ಕರಿಸ್ವಾಮಿ ಮೂಲಕ ನಿಮ್ಮ ಸಂದೇಶ ತಲುಪಿತು. ನಗ ಬಂದಿತು. ನನ್ನ ಮರುಸಂದೇಶವೂ ಅವರಿಂದ ತಲುಪಿರಬೇಕು. 'ಪ್ರತಾಪ ಸಿಂಹ' ಮೂಲಕ ನೀವೇ ಅಟ್ಯಾಕ್ ಮಾಡಿಸಿದ್ದು. ನನಗೇನೂ ಇದು ಹೊಸತಲ್ಲ. (ನಿಮಗೂ ಹೊಸತಲ್ಲ-ಐದು ಸಾವಿರ ವರ್ಷದ ಪರಂಪರೆ ಇದೆ.) ಶಿವಮೊಗ್ಗ ಸಮ್ಮೇಳನದಲ್ಲಿ ನಾನು ತಳೆದ ನಿಲುವು ಖಂಡಿಸಿ ಇಡೀ ಒಂದು ಪುಟದ ಎಸ್.ಎಂ.ಎಸ್. ಅಟ್ಯಾಕ್ ಮಾಡಿಸಿದ್ದಿರಿ, ಅಲ್ಲವೆ?

ಹಳೇ ಪರಿಚಯದ ನಿಮ್ಮ ಬಗ್ಗೆ ನನಗೆ ಪ್ರೀತಿ, ಅಭಿಮಾನ ಇದೆ. ನಿಮ್ಮ ಬರವಣಿಗೆಯೂ ಆಕರ್ಷಕ. ತಪ್ಪದೆ ಓದುತ್ತೇನೆ. ಆದರೆ ಒಬ್ಬ 'ಪತ್ರಕರ್ತ'ನಾಗಿ ನೀವು Total Failure. ಮತಾಂತರ ಕುರಿತು ನಡೆಸಿದ ಮಹಾ-ಸಂವಾದದ ಮೊದಲರ್ಧದ ದಾರಿ ತುಂಬ ಬ್ಯಾಲನ್ಸ್ ಆಗಿತ್ತು. ತಾರಿಣಿ ಚಿದಾನಂದರ ಪುಸ್ತಕ-ಭಾಗವನ್ನು ಅವರ ಅನುಮತಿ ಇಲ್ಲದೆ ಪ್ರಕಟಿಸಿದಿರಲ್ಲ- ಅದಕ್ಕೆ ನೀವಿತ್ತ 'ವಿವರಣೆ' ತುಂಬ ಹಾಸ್ಯಾಸ್ಪದವಾಗಿತ್ತು. ಆತ್ಮಾವಲೋಕನ ಅಗತ್ಯವಿದೆ ನಿಮಗೆ. ಕನ್ನಡ ಜನ ಪ್ರೀತಿಯಿಂದ ತನ್ನದನ್ನಾಗಿಸಿಕೊಂಡ ಒಂದು ಪತ್ರಿಕೆ 'ಪರಿವಾರ'ವೊಂದರ ಕರಪತ್ರ ಆಗಿರುವುದು ನಾಡಿನ ದುರಂತ. 'ಪ್ರತಾಪ-ಸಿಂಹರ ಸಿಂಹ-ಪ್ರಲಾಪ'- ತಲುಪ ಬೇಕಾದಲ್ಲಿ ತಲುಪುತ್ತದೆ. ಆ ಬಡಪಾಯಿ ನಿಜವಾಗಿಯೂ ಒಬ್ಬ ಹೇಡಿಯೇ ಇರಬೇಕು. ಅವನು 'ಕಸಬ' ನಾದರೆ ನೀವೇ ಪಾಕಿಸ್ತಾನ - ಅಲ್ಲವೇ?

ಚಂಪಾ

ಮುಂದೇ ಐದೇ ನಿಮಿಷದಲ್ಲಿ ಮತ್ತೆ ಕರಿಸ್ವಾಮಿ. ಬೆನ್ನಿಗೇ ಭಟ್ಟರ ಅಂಗಲಾಚುವ ದನಿ: "ಸಾರ್, ನಿಮ್ಮ ಸಂದೇಶ ಬಂದಿದೆ".

ಮಾತಿನ ಅಗತ್ಯವಿಲ್ಲ - ಎಂದು ಫೋನು ಕುಟ್ಟಿದೆ.

*

ನನ್ನ 'ಪ್ರಲಾಪ-ಸಿಂಹ' ಪತ್ರ ಗೌರಿ 'ಲಂಕೇಶ'ದಲ್ಲಿ ಬಂತು. ರವಿ ಬೆಳಗೆರೆಯ ಹಾಯ್ ಬೆಂಗಳೂರು ಪತ್ರಿಕೆಯಲ್ಲಿ ಬಂತು. ಅದಕ್ಕೆ ರವಿಯ ಚಿಕ್ಕ ಟಿಪ್ಪಣಿ ಬೇರೆ: "ವಿಜಯ ಕರ್ನಾಟಕದ ಅಷ್ಟೂ ಅಂಕಣಕಾರರನ್ನು ಬೆಂಬಲಿಸಿ ತಾನು ಬಾಯಿಗೆ ಕಾಂಡೋಮ್ ಹಾಕಿಕೊಳ್ಳದೆ ವಾದಕ್ಕಿಳಿಯುವುದು ಪ್ರತಾಪಸಿಂಹನ ರೂಢಿ. ಆದರೆ ಎಳಸು ಸಿಮ್ಮನಿಗೆ ಗೊತ್ತಿಲ್ಲ: ಚಂಪಾ ಥರದವರ ಕೈಗೆ ಸಿಕ್ಕರೆ ನೆಲದ ಮೇಲೆ ಕೂತು ಕಾಲು ಚಾಚಿ ಪಾದಗಳ ಮಧ್ಯೆ ಟೆಂಗಿನಕಾಯಿ ಇಟ್ಟುಕೊಂಡು ಜುಟ್ಟು ಸುಲಿದಂತೆ ಸುಲಿದುಬಿಡುತ್ತಾರೆ."

ರವಿಯ ನಿಲುವುಗಳ ಬಗ್ಗೆ ಯಾರು ಏನೇ ಹೇಳಲಿ. ಅವನದು ಅನುಭವ ಜನ್ಯ ಸತ್ಯದ ಬರವಣಿಗೆ.

*

ಮುಂದೆ ಕೆಲವೇ ದಿನಗಳಲ್ಲಿ ವಿಶ್ವೇಶ್ವರ ಭಟ್ಟರಿಗೆ ಮತ್ತೊಂದು ಖಾಸಗಿ ಪತ್ರ

ಬರೆಯಬೇಕಾಯಿತು. ಅವರು ತಮ್ಮ ಸ್ವಂತ ಅಂಕಣದಲ್ಲಿ ಪ್ರಮೋದ ಮುತಾಲಿಕ, ಜಿ.ಕೆ. ಗೋವಿಂದರಾವ ಅವರೊಂದಿಗೆ ನನಗೂ 'ಪ್ರಚಾರ ಜೀವಿ' ಅಂತ ಬಿರುದು ನೀಡಿದ್ದರು.

ನಾನು ಬರೆದೆ:

"ಈ ನಡುವೆ ನಿಮ್ಮ ಅಂಕಣದಲ್ಲಿ ಮುತಾಲಿಕ, ಜಿ.ಕೆ.ಜಿ. ಅವರೊಂದಿಗೆ ನನಗೂ "ಪ್ರಚಾರ ಜೀವಿ" ಪಟ್ಟ ಕಟ್ಟಿದ್ದು ಗಮನಿಸಿರುವೆ. ಬಹಳ ಸಪ್ಪೆ ಅನ್ನಿಸಿತು. ನಿಮ್ಮ ಬರವಣಿಗೆ ಸರಳ ಮತ್ತು ಸುಭಗ ಆದರೆ ನಮ್ಮ ಪ್ರಲಾಪಸಿಂಹನ guts ಮತ್ತು sharpness ನಿಮ್ಮಲ್ಲಿ ಕಾಣದು. ನಿಮ್ಮದು ನಾಜೂಕಯ್ಯನ ಸ್ವಭಾವ. ನಿಮ್ಮ ಹಾಗೆ ನಿಮ್ಮ ಶೈಲಿ.

ಒಮ್ಮೆ ಭಾನಾಮತಿ ಭಟ್ಟರೊಂದಿಗೆ ಕುಂತಾಗ ನಾನೆಂದೆ: "ವಿಜಯ ಕರ್ನಾಟಕಕ್ಕೆ ಒಂದು ಕ್ಯಾರಕ್ಟರೇ ಇಲ್ಲವಲ್ಲ!" ಅದಕ್ಕೆ ಅವರು: "ಅದರ ಎಡಿಟರ್‌ಗೇ ಕ್ಯಾರಕ್ಟರ್ ಇಲ್ಲ, ಪತ್ರಿಕೆಗೆಲ್ಲಿ ಬರಬೇಕು? ಅಲ್ರೀ ಚಂಪಾ, ಒಬ್ಬ ಮಿನಿಸ್ಟರನ ಪಿ.ಎ. ಆಗಿದ್ದವನು ಒಂದು ಪತ್ರಿಕೆಯ ಸಂಪಾದಕನಾಗುವುದು ಹೇಗೆ?"

ಇದು ನಿಮ್ಮ ಮಾಧ್ಯಮ ವಲಯದಲ್ಲಿಯೇ ನಿಮಗಿರುವ ವಾಯನ. ಸುಮ್ಮನೆ ಕುಂತಾಗ ಏಕಾಂತದಲ್ಲಿ ಯೋಚಿಸಿರಿ. ಆರೋಗ್ಯಕ್ಕೆ ಚಲೋ.

ಚಂಪಾ

*

ಬಿಜೆಪಿ ನಾಯಕ ಅನಂತಕುಮಾರ ಅವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ವಿಶ್ವೇಶ್ವರಭಟ್ಟರು ಅವರ ಪಿ.ಎ. ಆಗಿದ್ದರೆಂದೂ, ಆ ಸ್ಥಾನವನ್ನು 'ಸದುಪಯೋಗ'ಪಡಿಸಿಕೊಂಡು ಸದ್ಯದ ತಮ್ಮ 'ಮಾನ'ವನ್ನು ಗಳಿಸಿಕೊಂಡಿದ್ದಾರೆಂದೂ ಅವರದೇ ಮಾಧ್ಯಮ ಪ್ರಪಂಚದಲ್ಲಿ ಚಾಲ್ತಿಯಲ್ಲಿರುವ ಮಾತು. 'ಬೆಂಗಳೂರೆಂಬ ಲಾಬಿನಗರ' - ಅಂತ ನಾನು ಎಂದೋ ನಾಮಕರಣ ಮಾಡಿದ್ದೇನೆ. ಇಲ್ಲಿ ಮುಕಳಿ ಇಲ್ಲದ ಮಗಿಗಳಂತೆ ಉರುಳಾಡುವ ಸುದ್ದಿಗಳಿಗೆ ತಳವೂ ಇಲ್ಲ ಬುಡವೂ ಇಲ್ಲ.

ಒಂದು ನಂಬಲು ಅನರ್ಹವಾದ ಮೂಲದಿಂದ ನನಗೆ ಬಂದ ಸುದ್ದಿ ಇದು. ವಿಜಯ ಕರ್ನಾಟಕದಲ್ಲಿ ನನ್ನ ಪ್ರತಿಕ್ರಿಯೆ ಪ್ರಕಟಿಸದೆ ಇರಲು ಭಟ್ಟರಿಗಿದ್ದ ಒಂದು ಕಾರಣ: ಅಂಕಣಕಾರ ಪ್ರಲಾಪಸಿಂಹ ಚಿಂತಾಜನಕವಾಗಿ ಪ್ರತಿಕ್ರಿಯಿಸಿ, "ಚಂಪಾ ಪತ್ರ ಪ್ರಕಟವಾದರೆ ನಾನು ಪತ್ರಿಕೆಯ ಕಚೇರಿಯಲ್ಲೇ ನೇಣು ಹಾಕಿಕೊಂಡು ಸಾಯುತ್ತೇನೆ"- ಅಂತ ಬೆದರಿಸಿದ್ದನಂತೆ!

ತಾವು ಮಿನಿಸ್ಟರನ 'ಪಿ.ಎ.' ಆಗಿದ್ದರ ಬಗ್ಗೆ ಭಟ್ಟರಿಗೆ ಯಾಕೋ ಕೀಳರಿಮೆ ಇದ್ದಂತಿದೆ. ನನಗೆ ಉಚ್ಚಮಟ್ಟದ ಹುದ್ದೆ ಇತ್ತು - ಅಂತ ಹೇಳುತ್ತಾರಂತೆ. ಅದೇನೋ ಎಸ್.ಓ.ಡಿ (S.O.D.) ಅಂತೆ!

ಅಂದರೆ, Security Officer on Duty ಇರಬಹುದೇ - ಅಂತ ನನ್ನ ಅನುಮಾನ!

■

ಹೊಸ ಬದುಕ ಹಾಡು

● ಎಸ್. ಎಸ್. ಹಳ್ಳೂರ

ಏನೆಂದು ಹಾಡಲಿ
ಹೊಸ ಬದುಕ ಹಾಡ

ರವಿ ಮೂಡಿ ಬಂದಾನ
ಹೂವಾಗಿ ಅರಳ್ಯಾನ
ಬೇವಿನ ಬುಡದಾಗ
ತಂಪಾಗಿ ಹರಡ್ಯಾನ

ಸಂಜೀಯ ಹೊತ್ತಿಗೆ
ಪಡುವಣ ಕೆಂಪು
ಹಕ್ಕೀ ಹಿಂಡುಗಳೆಲ್ಲ
ಗೂಡೀಗೆ ಮರಳ್ಯಾವ

ರಾತ್ರೀಯ ಮುಗಿಲಾಗ
ಚಂದಪ್ಪ ಮೂಡ್ಯಾನ
ಮೊಸರ ಬೆಳುದಿಂಗಳು
ಹಸನಾಗಿ ಹರಡ್ಯಾದ

ಚಿನ್ನಾರ ಆಟವಲಿ
ಮೈಮರೆತು ಹೋಗ್ಯಾದ
ಕತ್ತಲ ರಾತ್ರಿಯಲಿ
ಕನಸೆಲ್ಲ ಕರಗ್ಯಾದ

ಏನೆಂದು ಹಾಡಲಿ
ಹೊಸ ಬದುಕ ಹಾಡ

ನಾಡು-ನುಡಿ-ಸಂಸ್ಕೃತಿ*

● ಎಲ್. ಬಸವರಾಜು

ನಮ್ಮ ಕರ್ನಾಟಕದ ಕೆಲವು ಭಾಗಗಳೂ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತೆಂಬುದನ್ನು - ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಮತ್ತು ಕೊಪ್ಪಳದಲ್ಲಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ, ಸಿದ್ದಾಪುರದಲ್ಲಿ ಮತ್ತು ಜಟ್ಟಿಂಗ ರಾಮೇಶ್ವರದಲ್ಲಿ ಸಿಕ್ಕಿರುವ ಅವನ ಬ್ರಾಹ್ಮೀ ಲಿಪಿಯ, ಪ್ರಾಕೃತ ಭಾಷೆಯ ಶಾಸನಗಳು ದೃಢಪಡಿಸುತ್ತಿವೆ.

ಮತ್ತು ಆ ಶಾಸನಗಳಲ್ಲಿ ಸ್ವತಃ ಅಶೋಕನೇ ಹೇಳಿಕೊಂಡಿರುವಂತೆ - ಹೆಚ್ಚು ಶ್ರಮವಹಿಸಿ ಅವನು ತನ್ನನ್ನು ತಾನೇ ಧರ್ಮಸುಧಾರಣೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದರಿಂದ - ಜಂಬೂ ದ್ವೀಪದ ಯಾವ ಜನ ಬೌದ್ಧ ಧರ್ಮದೊಡನೆ ಬೆರೆಯಲಾಗಲಿಲ್ಲವೋ ಅವರೆಲ್ಲಾ ಬೆರೆಯಲು ಸಾಧ್ಯವಾಯಿತೆಂದೂ - ಈ ಧಾರ್ಮಿಕ ಸತ್ಫಲಗಳನ್ನು ಕೇವಲ ಉತ್ತಮ ಸ್ಥಿತಿಯಲ್ಲಿರುವರೇ ಅಲ್ಲ, ಕೆಳಸ್ಥಿತಿಯಲ್ಲಿರುವವರೂ ಪಡೆಯುವಂತಾಯಿತೆಂದೂ ಆಶಾದಾಯಕವಾಗಿ ಆ ಅಶೋಕನು ಆಡಿರುವ ಆ ಮಾತಿನಲ್ಲಿ - ಕರ್ನಾಟಕದ ಅಸಂಖ್ಯಾತ ದಲಿತ ವರ್ಗದ ಜನರೂ ಬೌದ್ಧರಾಗಿದ್ದರೆಂಬುದನ್ನು ಸೂಚಿಸುತ್ತದೆ.

ಹೀಗಾಗಿ ದಲಿತರಿಗೆ ಈ ಬೌದ್ಧ ಧರ್ಮವಾದರೂ ಮಾನ್ಯತೆಯನ್ನು ಕೊಟ್ಟು ಅವರ ಆತ್ಮ ವಿಶ್ವಾಸವನ್ನೂ ಆತ್ಮ ಗೌರವವನ್ನೂ ಹೆಚ್ಚಿಸಲು ನೆರವಾಯಿತಲ್ಲಾ ಎನ್ನುವಂತಾದರೂ ಅದು ವೈದಿಕರಿಗೆ ಕಿರಿಕಿರಿಯನ್ನೇ ಉಂಟುಮಾಡಿದಂತಾಗಬಹುದು. ಅಶೋಕನು ತನ್ನ ಹಲವು ಶಾಸನಗಳಲ್ಲಿ ತನ್ನನ್ನು "ದೇವಾನಾಂ ಪ್ರಿಯ" ಎಂದು ಕರೆದುಕೊಂಡಿರುವುದನ್ನು ಅವೈದಿಕರು ಗೇಲಿ ಮಾಡುವುದು ನಡೆದೇ ಇತ್ತು.! ಈಗಲೂ ಸಂಸ್ಕೃತದಲ್ಲಿ "ದೇವಾನಾಂಪ್ರಿಯ"ನೆಂದರೆ ಮೂರ್ಖನೆಂಬ ಅರ್ಥವಿದೆಯಂತೆ. ಅದ್ದರಿಂದ ಆ ವೈದಿಕರಿಗೆ ಬೌದ್ಧ ಧರ್ಮದ ಮೇಲೆ ಮತ್ತು ಅದರ ಪ್ರಚಾರಕರ ಮೇಲೆ ಏನೊಂದು ತಿರಸ್ಕಾರ ದ್ವೇಷವಿತ್ತೆಂಬುದನ್ನು ಊಹಿಸಬಹುದಾಗಿದೆ.

ಅದೇನೇ ಇರಲಿ - ಕರ್ನಾಟಕದಲ್ಲಿ ಕ್ರಿಸ್ತ ಪೂರ್ವ ಮೂರನೇ ಶತಮಾನದಿಂದಲೂ ಬೌದ್ಧಧರ್ಮ ಎಲ್ಲ ಕಾಲಗಳಲ್ಲಿ ಪ್ರಚುರವಾಗಿತ್ತಾದರೂ, ಆ ಧರ್ಮವನ್ನು ಪ್ರಚಾರ ಮಾಡಲು ಕನ್ನಡದಲ್ಲಿ ಯಾರೂ ಕಾವ್ಯಗಳನ್ನು ಬರೆಯಲಿಲ್ಲವೆಂದರೆ ಅದೊಂದು ಅಸಂಬದ್ಧ ತೀರ್ಮಾನವೇ ಆದೀತು.

---

* ಜನವರಿ ೨೯. ೨೦೦೯ ರಂದು ಚಿತ್ರದುರ್ಗದಲ್ಲಿ ನಡೆದ ಎಪ್ಪತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ

ಕಾಲಾಂತರದಲ್ಲಿ ಬೌದ್ಧ ಧರ್ಮವು ಭಾರತದಿಂದ ಪರದೇಶಿಯಾಗಿ ಹೋಯಿತೆಂದ ಮೇಲೆ-ಕರ್ನಾಟಕದಲ್ಲಿಯಾದರೂ ಅದು ಈಗ ಕೇವಲ ಹೆಸರಿಗೆ ಮಾತ್ರ ಉಳಿದಿತ್ತೆಂಬುದರಲ್ಲಿ ಸತ್ಯಾಂಶವಿದೆ ಎನಿಸುವುದಾದರೂ- ೯ನೇ ಶತಮಾನದ ಆ ಕವಿರಾಜಮಾರ್ಗ ಗ್ರಂಥದಲ್ಲಿ ಹೇಳಿರುವಂತೆ ಆ ವೇಳೆಗಾಗಲೇ ವಿಮಲೋದಯ-ನಾಗಾರ್ಜುನ-ಜಯಬಂಧು-ದುರ್ವಿನೀತ ಮುಂತಾದವರು ಕನ್ನಡ ಚಂಪೂ ಕಾವ್ಯಗಳನ್ನು ಬರೆದು "ಗದ್ಯಾಶ್ರಮ ಗುರುತಾ ಪ್ರತೀತಿ"ಯನ್ನು ಪಡೆದಿದ್ದರು ಎಂಬಲ್ಲಿ ಆ "ನಾಗಾರ್ಜುನ" ನೆಂಬವನಾದರೂ ಬೌದ್ಧಧರ್ಮಕ್ಕೆ ಸೇರಿದ ಒಬ್ಬ ಕನ್ನಡ ಕವಿಯಾಗಲಾರನೇನು ಎಂಬುದೊಂದು ಅತ್ಯಾಸೆ!

ಆದರೇನು ಹತ್ತನೇ ಶತಮಾನದ ನಮ್ಮ ಮಹಾಕವಿ ಪಂಪನು ಬರೆದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯವೆಂಬ ಎರಡು ಕಾವ್ಯಗಳು ಅಂದಿನ ಕನ್ನಡ ಸಹೃದಯರಿಗೆ ಅದೆಷ್ಟು ರಸತೃಪ್ತಿಯನ್ನು ತಂದವೆಂದರೆ - ಆ ಹಿಂದಿನ ಕನ್ನಡ ಕವಿಗಳ ಯಾವ ಕಾವ್ಯವಾಗಲಿ ನಾಮಾವಶೇಷವಾದ ಹಳಗನ್ನಡ ಗ್ರಂಥಗಳ ಪಟ್ಟಿಯಲ್ಲಿ ತಂತಮ್ಮ ಹೆಸರನ್ನು ಬರೆಸಿ ಹಾಗೇ ಮಂಗಮಾಯವಾಗಿ ಹೋದವು - ಅಸಗ (ಕ್ರಿ. ಶ. ೮೫೩), ಗುಣನಂದಿ (ಕ್ರಿ.ಶ.೯೦೦) ಒಂದನೇ ಗುಣವರ್ಮ ಎಂದು ಮುಂತಾಗಿ ಆ ಪಟ್ಟಿಯೂ ಬೆಳೆಯುತ್ತಲೇ ಹೋದೀತು!

ಇದುವರೆಗೂ ನಾವು ಪ್ರಸ್ತಾಪಿಸಿದ ಕನ್ನಡ ಸಾಹಿತ್ಯವೆಲ್ಲವೂ ಕ್ರಿ. ಶ. ಹತ್ತನೇ ಶತಮಾನದ ವರೆಗಿನ ಮಾರ್ಗ ಅಥವಾ ಆ ಮಾರ್ಗ ಮತ್ತು ದೇಸೀ ಮಿಶ್ರವಾದ ಕನ್ನಡ ವಿದ್ವತ್ ಪ್ರಕಾರದವೇ ಆಗಿವೆ. ಅವನ್ನು ರಾಜಾಸ್ಥಾನದಲ್ಲಿ ಮತ್ತು ವಿದ್ವತ್ ಗೋಷ್ಠಿಗಳಲ್ಲಿ ಪಂಡಿತರು ಮಾತ್ರವೇ ಓದಲು ಅಥವಾ ಓದಿ ಹೇಳಲು ಸಾಧ್ಯವಿತ್ತು - ಅಂದರೆ ಅವು ಜನಸಾಮಾನ್ಯರ ಮತ್ತು ನತದೃಷ್ಟ ದಲಿತರ ಸರಳ ವಲಯದಿಂದ ದೂರವೇ ಉಳಿದಿದ್ದವು.

ಇಷ್ಟೆಲ್ಲ ಸಾರಸ್ವತ ನಷ್ಟವಾದಾಗಲೂ ಕನ್ನಡ ಜನಸಾಮಾನ್ಯರು-ಅದರಲ್ಲೂ ಮುಖ್ಯವಾಗಿ ದಲಿತ ಜನ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುವ ದುರದೃಷ್ಟದ ಪ್ರಮೇಯವಿರಲಿಲ್ಲ! ಯಾಕೆಂದರೆ - ಆ ಜನಸಾಮಾನ್ಯರಿಗೆ ಮತ್ತು ದಲಿತರಿಗೆ - 'ಬೆದಂಡೆ' ಎಂಬ ಒಂದು ದೇಸೀ ಕಾವ್ಯ ಪ್ರಕಾರವು - ಆತ್ಮೀಯವಾಗಿ ಒಗ್ಗಿ ಬಂದಿತ್ತು.

ಈ ಜನಪದ ಸಾಹಿತ್ಯ ಪ್ರಕಾರದ ಈ 'ಬೆದಂಡೆ'ಯು ಕ್ರಿಸ್ತ ಪೂರ್ವ ಕಾಲದಲ್ಲಿ - ಆಮೇಲೆ ಕ್ರಿಸ್ತಶಕಾರಂಭದಿಂದ ಹಿಡಿದು ಆ ೭-೮ನೇ ಶತಮಾನದವರೆಗಾಗಲೇ ಇರಲಿಲ್ಲವೆಂಬುದು - ಆಗ ಕನ್ನಡದಲ್ಲಿ ಮಾತಾಡುವ ಹಾಡುವ ಜನರೇ ಇರಲಿಲ್ಲ - ಇದ್ದರೆಂಬುದಾದರೂ ಅವರು ಕಾವ್ಯಾಸ್ವಾದನೆಯನ್ನೇ ಅರಿಯದವರಾಗಿ ತೀರ ಕಾಡು ಜನರಾಗಿದ್ದರೆಂದು ಹೇಳುವಂತಾಗುವುದು. ಇದು ಇಡಿಯಾಗಿ ನಮ್ಮ ಭಾರತೀಯ ಸಂಸ್ಕೃತಿ ಚರಿತ್ರೆಯನ್ನೇ ಅರಿಯದವರು ಎಗ್ಗು ಸಿಗ್ಗಿಲ್ಲದ ಮಾತಾದೀತು! ಅದ್ದರಿಂದಲೇ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಕನ್ನಡ ಜನಕ್ಕೇ ವಿಶಿಷ್ಟವಾದ (ಅಂದರೆ ಅವರ ಮನವನ್ನು ಸಾಂಸ್ಕೃತವಾಗಿ ಸೂರೆಗೊಂಡಿದ್ದ) ಕಾವ್ಯ ಪ್ರಕಾರವೊಂದು "ಬೆದಂಡೆ' ಎಂಬ ಹೆಸರಿನಲ್ಲಿ ಕಾಲದಿಂದಲೂ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು.

ಅದರ ಲಕ್ಷಣ ಆ ಕವಿರಾಜಮಾರ್ಗದ ಪ್ರಕಾರವೇ ಈ ಮುಂದಿನಂತಿದೆ :

"ನುಡಿಗೆಲ್ಲಂ ಸಲ್ಲದ ಕನ್ನಡದೊಳ್
ಚತ್ತಾಣಮುಂ ಬೆದಂಡೆಯುಮೆಂದು
ಈಗಡಿನ ನೆಗಳ್ತೆಯ ಕಬ್ಬದೊಳ್
ಒಡಂಬಡಂ ಮಾಡಿದರ್ ಪುರಾತನ ಕವಿಗಳ್"

(ಕವಿರಾಜಮಾರ್ಗ -೧-೩೨)

"ಕಂದಂಗಳ್ ಅಲ್ಪಮಾಗಿರೆ
ಸುಂದರ ವೃತ್ತಂಗಳ್ ಅಕ್ಕರಂ ಚೌಪದಿ
ಮತ್ತಂ ದಲ್ ಗೀತಿಕೆ ತಿಪದಿಗಳ್
ಅಂದಂಬೆತ್ತಿರೆಯೆ ಪೇಟ್ಲೊಡೆ
ಅದು ಚತ್ತಾಣಂ"

(ಕವಿರಾಜಮಾರ್ಗ -೧-೩೫)

"ಕಂದಮುಂ ಅಮಳಿನ ವೃತ್ತಮುಮ್
ಒಂದೊಂದು
ಎಡೆಗೊಂಡು ಜಾತಿ
ಜಾಣೆಸೆಯೆ ಬೆಡಂಗೊಂದಿ ಅವಟ್ಳಮರೆ
ಪೇಎಲ್ ಸುಂದರ ರೂಪಿಂ
ಬೆದಂಡೆಗಬ್ಬಮದಕ್ಕುಂ!"

(ಕವಿರಾಜಮಾರ್ಗ -೧-೩೪)

ಕವಿರಾಜಮಾರ್ಗದ ಮೇಲಿನ ಉಲ್ಲೇಖದಲ್ಲಿ ಅಸ್ಪಷ್ಟ ವಾದ ಭಾಗವೆಂದರೆ- ಇಡಿಯಾಗಿ ಚತ್ತಾಣ ಮತ್ತು ಬೆದಂಡೆಗಳನ್ನು ಕುರಿತುದು.

ಅದರೊಳಗೂ ಅಸ್ಪಷ್ಟತಮವಾದುದೆಂದರೆ ಈ 'ಬೆದಂಡೆ' ಎಂಬುದನ್ನು ಕುರಿತ ೩೪ನೇ ಪದ್ಯ.

ಅದರೊಳಗೂ ಅಸ್ಪಷ್ಟತಮವಾದುದೆಂದರೆ ಕಗ್ಗಂಟಿನಂತಹ ಅರ್ಥಗ್ರಂಥಿಯನ್ನು ಒಳಗೊಂಡಿರುವ 'ಜಾತಿ' ಎಂಬ ಶಬ್ದ! ಆದುದರಿಂದಲೇ ಈ ೩೪ನೇ ಕಂದಪದ್ಯ

* ಮೇಲಿನ ಮೂರೂ ಪದ್ಯಗಳಿಗೆ ಕ್ರಮವಾಗಿ ಅರ್ಥ: ಈ ಪದ್ಯ ಕಾವ್ಯ ಪ್ರಕಾರದಲ್ಲೇ ನಮ್ಮ ಪುರಾತನ ಕವಿಗಳು ಕನ್ನಡಕ್ಕೆ ವಿಶಿಷ್ಟವಾದ ಚತ್ತಾಣ ಮತ್ತು ಬೆದಂಡೆ ಎಂಬ ಎರಡು ಕಾವ್ಯ ಪ್ರಕಾರಗಳನ್ನು ಅಂತರ್ಗತಗೊಳಿಸಿದರು (೩೨)
ಕೆಲವೇ ಕಂದಗಳಿದ್ದು ವೃತ್ತ - ಅಕ್ಕರ - ಚೌಪದಿ - ಗೀತಿಕೆ ಮತ್ತು ತ್ರಿಪದಿಗಳು ಸಮರಸವಾಗಿ ಕೂಡಿಬಂದರೆ ಅದೇ 'ಚತ್ತಾಣ'. (೩೫)
ಒಂದೊಂದು ಕಂದ ಮತ್ತು ವೃತ್ತವೂ - ಆ ಎರಡರ ನಡುವೆ ಒಂದು 'ಜಾತಿ'ಯೂ ಸೇರಿ ಬಂದರೆ (ಅಥವಾ ಕಂದವೂ ವೃತ್ತವೂ ಒಂದೊಂದೆಡೆಗೆ ಒಂ(ದೊಂ)ದೂ - ಇವುಗಳ ಜೊತೆಗೆ 'ಜಾತಿ'ಯೂ ಹೊಂದಿಕೊಂಡು ಬಂದರೆ -ಅದೇ ಸುಂದರ ರೂಪಿನ ಬೆದಂಡೆ ಆಗುವುದು (೩೪)

ಪುತ್ತದೊಳಗಣ ವೃತ್ತದಂತಿದ್ದು ನೆಲೆಗಾಣುವ ಪ್ರಯತ್ನ(ದಲ್ಲಿ) ಇದು ಸರ್ಪಕ್ಕೇ ಸವಾಲೆಸೆಯುತ್ತಿದೆ. ಈ ಬಗ್ಗೆ ತೀ.ನಂ.ಶ್ರೀ ಯವರು ಈ ಸಂಬಂಧವಾಗಿ ಮಾಡಿರುವ ಸಂಶೋಧಿತ ನಿರ್ಣಯ ಈ ಮುಂದಿನಂತಿದೆ:

"ಈ ಜಾತಿ(ಬೆದಂಡೆ)ಯ ಕಾವ್ಯದಲ್ಲಿ ಸಂಖ್ಯಾವಿಭೇದಗಳನ್ನು ಬಿಟ್ಟರೆ ಒಂದು ಮುಖ್ಯಾಂಶ ಎದ್ದು ಕಾಣುತ್ತದೆ. ಇದರಲ್ಲಿ ಬರುವ ಛಂದಸ್ಸು ಎರಡೇ ಬಗೆಯದು - ಕಂದ, ಜೊತೆಗೆ ಯಾವುದಾದರೂ ಒಂದು ಪ್ರಸಿದ್ಧ ವೃತ್ತ. ಹೆಚ್ಚಿನ ವೈವಿಧ್ಯಕ್ಕೆ ಇಲ್ಲಿ ಅವಕಾಶವಿಲ್ಲ. ಅಂತೂ ಕವಿರಾಜಮಾರ್ಗ-ಕಾವ್ಯಾಲೋಕನ ಈ ಎರಡರ ಮತದಂತೆಯೂ **ಬೆದಂಡೆ**ಯಲ್ಲಿ **ಕಂದ**ಗಳೂ ನಡುನಡುವೆ ಒಂದೇ **ಜಾತಿಯ** ವೃತ್ತಗಳೂ ಸೇರಿ ಬಂದಿರಬೇಕೆಂದು ನಿರ್ಣಯಿಸ ಬಹುದು." (ಪ್ರಬುದ್ಧ ಕರ್ನಾಟಕ, ಸಂಪುಟ ೪೪, ಸಂಚಿಕೆ ೪, ಪುಟ ೮೭-೮೮) ಎಂದಿರುವುದಾಗಿ ಪೂಜ್ಯ ತೀ.ನಂ. ಶ್ರೀಯವರು ಕವಿರಾಜಮಾರ್ಗದ ಆ ೩೪ನೇ ಕಂದ ಪದ್ಯದೊಳಗಣ ಜಾತಿ ಎಂಬ ಪದವು ವಿಧ ಎಂಬ ಸಾಮಾನ್ಯಾರ್ಥವಾಚಿಯಾಗಿರದೆ - ಸಂಗೀತ ಶಾಸ್ತ್ರದ ಒಂದು ಪರಿಭಾಷೆಯಾಗಿದೆ ಎಂಬುದನ್ನು ಗುರುತಿಸಲಿಲ್ಲ. ಅವರು "ಜಾತಿ' ಎಂಬುದರ ಅರ್ಥಗ್ರಂಥಿಯನ್ನು ದೃಷ್ಟಿಸದೆ - ಅದು ಬಿಡುವತ್ತ ಬಿಡಿಸದೆ - ಮನ ಬಂದತ್ತ ಎಳೆಯನ್ನು ತುಯ್ದೆಳೆದರು - ಫಲಿತಾಂಶ: ಅದು ಕಗ್ಗಂಟಾಯಿತು.

ಪ್ರಸ್ತುತ ೩೪ನೇ ಕಂದಪದ್ಯದ ಪ್ರಕಾರ "ಬೆದಂಡೆಯಲ್ಲಿ ಕಂದಗಳ ಜೊತೆಗೆ ಬಳಸುವ ವೃತ್ತಗಳಲ್ಲಿ ವೈವಿಧ್ಯವಿರಬೇಕೇ ಬೇಡವೇ ಎಂಬುದಲ್ಲ ವಿಚಾರಣೀಯ ಅಂಶ! ಬೆದಂಡೆಗಬ್ಬದಲ್ಲಿ ಇರಬೇಕಾದುದು ಕಂದ ಮತ್ತು ವೃತ್ತಗಳು ಮಾತ್ರವೋ? ಜೊತೆಗೆ ಮೂರನೇಯದಾಗಿ (ಆ ನಡುವೆ) 'ಜಾತಿ' ಎಂಬುದೂ ಇರಬೇಡವೋ? ಇರುವುದಾದರೆ ಆ 'ಜಾತಿ' ಎಂಬುದರ ಪರಿಭಾಷೆ (=ಸ್ವರೂಪ) ಏನು ಎಂಬುದು!

ಕವಿರಾಜ ಮಾರ್ಗದ ಪ್ರಕಾರ -ಚತ್ತಾಣ ಬೆದಂಡೆ ಎಂಬ ಎರಡು ಪದ್ಯಕಾವ್ಯಪ್ರಕಾರಗಳಲ್ಲೂ ಕಂದ -ವೃತ್ತಗಳಿರಬೇಕೆನ್ನುವುದು ಸಮಾನಾಂಶ. ಹೀಗಿರುವಲ್ಲಿ ಕಂದ ವೃತ್ತಗಳ ಜೊತೆಗೆ ಅಕ್ಕರ ಚೌಪದಿ ಗೀತಿಕೆ ತ್ರಿಪದಿಗಳಿಗೆ ಬದಲಾಗಿ 'ಜಾತಿ' ಎಂಬುದು ಸೇರ್ಪಡೆಯಾಗಿದ್ದರೆ 'ಬೆದಂಡೆ' ಎನಿಸಿಕೊಳ್ಳುವುದೆಂಬುವುದು ಕವಿರಾಜಮಾರ್ಗಕಾರನ ೧-೩೪ನೇ ಮಾತಿನ ಮುಖ್ಯಾರ್ಥ!

ಹಾಗಾದರೆ ಚತ್ತಾಣದಿಂದ ಬೆದಂಡೆಯನ್ನು ಬೇರ್ಪಡಿಸುವ ವಿಶಿಷ್ಟಾಂಶವಾದ 'ಜಾತಿ' ಎಂದರೇನು ? ಈಗ ಅದರತ್ತ ನಮ್ಮ ವಿಚಾರವನ್ನು ಹೊರಳಿಸಬಹುದು:

ನೇಮಿಚಂದ್ರನ ಒಂದು ಪದ್ಯವನ್ನು ನೋಡಿರಿ - ಲೀಲಾವತಿಯು ಬಳಿಗೆ ಅವಳ ಪ್ರಿಯತಮನಾದ ಕಂದರ್ಪನನ್ನು ಕರೆತಂದ ಪರಿಯನ್ನು ವರ್ಣಿಸಿರುವ ಸಂದರ್ಭವದು :

ರತಿಗಳ್ ಶೃಂಗಾರಮಂ ಶೋಭೆಗಳತಿಶಯಮಂ ಜಾತಿಗಳ್ ರಾಗಮಂ ದೇ
ವತೆಗಳ್ ಕಾಮಾರ್ಥಮಂ, ನೀತಿಗಳುದಯಮನಾಕ್ಷೇಪದಿಂತರ್ಪವೋಲು ।

ದ್ವಿತೆಯರ್ ತತ್‌ಕಾಂತೆಯರ್ಕಳ್ ತರೆ- ಮಧು ಸಹಿತಂ ಕಂತು ಬರ್ಪಂತೆ ಬಂದಂ
ಚತುರಾಮಾತ್ಯ ಪ್ರಯುಕ್ತಂ ಸರಸಕೃತಿ ಕಲಾ ನರ್ತಕೀ ನೃತ್ಯರಂಗಂ ॥

(ಲೀಲಾವತಿ ೧೧.೯೫)

ರತಿಯು ಶೃಂಗಾರವನ್ನೂ ಶೋಭೆಗಳು ಅತಿಶಯವನ್ನೂ, ಜಾತಿಯು ರಾಗವನ್ನೂ.... ಒಡಗೊಂಡು ಬರುವಂತೆ ಸಖೀನಿವಹವು ಕಂದರ್ಪನನ್ನು ಕರೆತಂದಿತೆಂಬುದೇ ಈ ಮೇಲಣ ಪದ್ಯದ ತಾತ್ಪರ್ಯ.

ಇಲ್ಲಿ 'ಜಾತಿ' ಎಂದರೆ - ಬೇರೆ ಬೇರೆ ರಾಗದೊಡಗೂಡಿದ ವಾಗ್ಗೇಯದ ಒಂದು ಬಂಧವಿರಬಹುದೆಂದು ಊಹಿಸುವುದು ಅಸಂಗತವಾಗಲಾರದು. ಬದಲಾಗಿ ಸಮಂಜಸ ವೆನಿಸಿ - 'ಜಾತಿ' ಎಂಬುದರ ಅರ್ಥವಿವರ ದೊರೆತು ಬೆದಂಡೆಯ ಸ್ವರೂಪವು ಇನ್ನೂ ನಿಚ್ಚಳ ವಾಗಬೇಕಾದರೆ - ಅದೇ ಬೆದಂಡೆಯನ್ನು ಕುರಿತು ಪ್ರಸ್ತಾಪಿಸಿರುವ ನಾಗವರ್ಮನ ಕಾವ್ಯಾವಲೋಕನದ ಮುಂದಿನ ಮೂರು ಪದ್ಯಗಳನ್ನು ನೋಡಬಹುದು:

ಸಂದಿಸಿರೆ ಕಂದಮುಂ ಪೆಱ
ತೊಂದಱಿಕೆಯ ವೃತ್ತ ಜಾತಿಯುಂ, ಪದಮವು ತ
ಳ್ತೊಂದಿರೆ ಪನ್ನೆರಡುವರಂ -
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ (೯೫೨)

ಪದಿನಯ್ದುಮಿರ್ಪತಯ್ದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್
ಪುದಿದೊದವಿ ನೆಗೞ್ದುದಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ (೯೫೩)

ಪಾಡುಗಳಿಂದಂ ತಱಿಸಲಿ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರಿನ್ನದು ದಲ್ ಮೆ
ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ (೯೫೪)

ಅರ್ಥ ಸ್ಪಷ್ಟತೆಗಾಗಿ ಮೇಲಣ ಮೂರೂ ಪದ್ಯಗಳ ಗದ್ಯಾನುವಾದ ಈ ಮುಂದಿನಂತಿದೆ ನೋಡಿ :

ಕಂದವೂ ಇನ್ನೊಂದು ಪ್ರಸಿದ್ಧ ವೃತ್ತವೂ (ಮತ್ತು ಆ ಎರಡರ ನಡುವೆ) 'ಪದ'ಗಳು ಸಂಖ್ಯೆಯಲ್ಲಿ ಹನ್ನೆರಡರವರೆಗೆ ಸೇರಿಕೊಂಡಿದ್ದರೆ - ಅದು ಕನ್ನಡದದಲ್ಲಿ ಮೇಲ್ವಾಡು ಎನಿಸಿಕೊಳ್ಳುವುದು. (೯೫೨)

ಆ ಕಂದ ಮತ್ತು ವೃತ್ತದ ನಡುವೆ - 'ಪದ'ಗಳು ಸಂಖ್ಯೆಯಲ್ಲಿ ಹದಿನೈದು - ಇಪ್ಪತ್ತೈದರವರೆಗೆ ಸೇರಿಕೊಂಡಿದ್ದರೆ (ಅದು ಕನ್ನಡದಲ್ಲಿ) ಪಾಡು -ಪದ ಅಥವಾ ಹಾಡು ಎನಿಸುವುದು. (೯೫೩)

ಪಾಡುಗಳಿಂದ ರಚಿತವಾದುದನ್ನು ವಿದ್ವಾಂಸರು 'ಪಾಡುಗಬ್ಬ' ವೆಂದು ಕೊಂಡಾಡುವರು. ಈ ಪಾಡು ಅಥವಾ ಪಾಡುಗಳಿಂದಲೇ ಅಲ್ಲವೇ ಮೇಲ್ವಾಡು ಅಥವಾ "ಬೆದಂಡೆಗಬ್ಬ' ವಾಗುವುದು! (೯೫೪)

ನಾಗವರ್ಮನ ಈ ಮೇಲಣ ವಿವರಣೆಯು ಕವಿರಾಜಮಾರ್ಗದಲ್ಲಿನ ಬೆದಂಡೆಯ ಲಕ್ಷಣವನ್ನು ಹೇಳುವ ಪದ್ಯಕ್ಕೆ ಬರೆದ ವ್ಯಾಖ್ಯಾನದಂತಿದೆ. ಬೆದಂಡೆಯೆನಿಸಬೇಕಾದರೆ ಕಂದ ವೃತ್ತಗಳ ಜೊತೆಗೆ "ಜಾತಿ' ಕೂಡಿಕೊಂಡು ಬರಬೇಕೆಂದು ಕವಿರಾಜಮಾರ್ಗಕಾರನು ಹೇಳಿದ್ದರೆ - ಪದ ಕೂಡಿಕೊಂಡು ಬರಬೇಕೆಂದು ಕಾವ್ಯಾವಲೋಕನಕಾರನು ಹೇಳಿರುವನಾದ್ದರಿಂದ - 'ಜಾತಿ'ಗೆ 'ಪದ'ವು ಪರ್ಯಾಯವಾಚಿಯೆಂಬುದು ಸ್ವತಸ್ಸಿದ್ಧ ವಾಗಿದೆ.

ಪದವೆಂಬುದು ಹಾಡು ಅಥವಾ ಹಾಡಲೆಂದೇ ರಚಿತವಾದ ಅದಕ್ಕನುಸಾರವಾಗಿ ಛಂದಸ್ಸಹಿತವಾದ ಒಂದು ಸಾಹಿತ್ಯಬಂಧವೆಂಬುದಕ್ಕೆ ನಡುಗನ್ನಡದಲ್ಲಿ ಪ್ರಯೋಗಗಳು ಹೇರಳವಾಗಿವೆ. ಆದರೆ ಇದೇ ಅರ್ಥದಲ್ಲಿ 'ಪದ' ಎಂಬ ಶಬ್ದವು ಕವಿರಾಜಮಾರ್ಗದ ಕಾಲಕ್ಕೂ (ಅದಕ್ಕಿಂತ ಹಿಂದಕ್ಕೂ) ಪ್ರಯೋಗವಾಗುತ್ತಿತ್ತೇ ಎಂಬ ಸಂದೇಹ ಬರುವುದು ಸಹಜ. ಆದರೆ ಈ ಸಂದೇಹವು ಸ್ಥಾಯಿಯಾಗುವಷ್ಟು ಪ್ರಬಲವಾದುದಲ್ಲ - ಕಾಳಿದಾಸನ ಮೇಘಸಂದೇಶದ ಉತ್ತರ ಭಾಗದಲ್ಲಿ ಬರುವ ಈ ಮುಂದಿನ ಪದ್ಯವೊಂದೇ ಅದನ್ನು ನಿವಾರಿಸುವುದು :

ಉತ್ಸಂಗೇ ವಾ ಮಲಿನ ವಸನೇ ಸೌಮ್ಯ ನಿಕ್ಷಿಪ್ಯ ವೀಣಾಂ
ಮದ್ಗೋತ್ರಾಂಕಂ ವಿರಚಿತ ಪದಂ ಗೇಯ ಮುದ್ಗಾತುಕಾಮಾ
ತಂತ್ರಿಮಾರ್ದ್ರಾಂ ನಯನ ಸಲಿಲೈಃ ಸಾರಯಿತ್ವಾ ಕಥಂಚಿತ್
ಭೂಯೋ ಭೂಯಃ ಸ್ವಯಮಪಿ ಕೃತಾಂ ಮೂರ್ಛನಾಂ ವಿಸ್ಮರಂತೀ!

ಇಲ್ಲಿಯಕ್ಷಿ (ವಿರಹಿಣಿ)ಯು ತನ್ನ ಪ್ರಿಯತಮನ ಗೋತ್ರಾಂಕಿತ ಸಹಿತವಾದ 'ಪದ'ವೊಂದನ್ನು ರಚಿಸಿ ತಂತ್ರೀವಾದ್ಯದೊಡನೆ ಹಾಡಬೇಕೆಂದಿದ್ದ ವಿಚಾರ ಸ್ಪಷ್ಟವಿದೆ. (ಇದೇ ಸಂದರ್ಭದಲ್ಲಿ ಶಿವದಾಸರ ಹರಿದಾಸರ ಮತ್ತು ೧೭ನೇ ಶತಮಾನದ ವೈಷ್ಣವ ಭಕ್ತರ ಹಾಡುಗಳನ್ನು 'ಪದ'ವೆಂದು ವ್ಯವಹರಿಸುತ್ತಿದ್ದುದನ್ನೂ ನೆನೆಯಬೇಕು.)

ನಿರ್ಧರಿಸಿ ಹೇಳುವುದಾದರೆ - ಮುಖ್ಯವಾಗಿ ಹಾಡುಗಳಿಂದ ರಚಿತವಾದ ಕಾವ್ಯಕ್ಕೆ ಅಥವಾ ಗೇಯ ಕೃತಿಗೆ 'ಬೆದಂಡೆ' ಎನ್ನುತ್ತಿದ್ದರು.

ತಿರುಮಲಾರ್ಯನು ತನ್ನ ಚಿಕ್ಕದೇವರಾಜ ವಿಜಯದ ವೇಶ್ಯಾವಾಟಿಕಾ ಪ್ರಸಂಗದಲ್ಲಿ ಪ್ರಸ್ತಾಪಿಸಿರುವ ಬಣ್ಣವಾಡು ಸಿಂಗರವಾಡು ಅಥವಾ ಶೃಂಗಾರ ಪದ ಎಂಬುದನ್ನು ಗಮನಿಸಿದರೆ - ಅವು ಬೇರೇನೂ ಅಲ್ಲದೆ ಸೂಳೆಯರು ಹಾಡುತ್ತಿದ್ದ ಗೀತಾ ಪ್ರಬಂಧಗಳೇ ಆಗಿದ್ದವೆಂದೂ - ಅವು ಬೆದಂಡೆಯ ಅವಶೇಷಗಳೋ ಅಪಭ್ರಂಶಗಳೋ ಆಗಿದ್ದುವೆಂದೂ ಅನ್ನಿಸದಿರದು.

ಈ ಬೆದಂಡೆಗಬ್ಬವು ಹೀಗೆ ಶೃಂಗಾರ ಪ್ರಧಾನವಾದ ಗೇಯ ಕೃತಿಯಾಗಿದ್ದದರಿಂದಲೂ ಅದನ್ನು ಹೆಚ್ಚಾಗಿ ವೇಶ್ಯಾವಾಟಿಕೆಗಳಲ್ಲೇ ಹಾಡುತ್ತಿದ್ದುದರಿಂದಲೂ - ಗರತಿಯರೂ ಗೌರವರೂ ಬೆದಂಡೆಗೆ ಕಿವಿಗೊಡಬಾರದೆಂಬ ನೀತಿವಾಕ್ಯ ಪ್ರಚುರವಾಯಿತು. ಮದನತಿಲಕ ವೆಂಬ ಶೃಂಗಾರ ಕಾವ್ಯದಲ್ಲಿಯೇ - ಬೆದಂಡೆಯನ್ನು ಹಾಡುವ ಕಡೆ ಹೆಂಡಿರನ್ನು ಸುಳಿಯಲೂ ಬಿಡಬಾರದೆಂದು ಎಚ್ಚರಿಸಲಾಗಿದೆ - "ಬೆದಂಡೆಯ ದೆಸೆ ಬೊಗಲೀಯಲಾಗದು" ಎಂದು (ಮ.ತಿಲಕ. ೮-೨೯)

ಒಟ್ಟಿನ ಮೇಲೆ ಕವಿರಾಜಮಾರ್ಗದ ಪ್ರಕಾರ ೯ನೇ ಶತಮಾನಕ್ಕಿಂತ ಹಿಂದಿನಿಂದಲೂ ಕರ್ನಾಟಕದಲ್ಲಿ ಮೆಲ್ವಾಡೆಂದೋ ಬೆದಂಡೆಯೆಂದೋ ಪ್ರಚುರವಾಗಿದ್ದ ಗೀತಾ ಸಾಹಿತ್ಯ ಪ್ರಕಾರವನ್ನು ವಸ್ತು ದೃಷ್ಟಿಯಿಂದ ಕಾಮದಿಂದ ದೈವಭಕ್ತಿಗೋ ಧರ್ಮಸಿದ್ಧಾಂತಕ್ಕೋ ತಿರುಗಿಸಿ ಕಡೆಯ ಪಕ್ಷ ಕ್ರಿ.ಶ. ೮-೯ನೇ ಶತಮಾನದಿಂದ ಹಿಡಿದು ೧೮ - ೧೯ ನೇ ಶತಮಾನದ ವರೆಗೆ ಸುಮಾರು ಒಂದು ಸಾವಿರ ವರ್ಷಗಳ ಕಾಲ ಸ್ವರವಚನವೆಂದೋ ವಚನವೆಂದೋ ಶಿವಶರಣರೂ, ಕೀರ್ತನೆಯೆಂದೋ, ಉಗಾಭೋಗವೆಂದೋ, ಹರಿದಾಸರೂ-ಕರ್ನಾಟಕ ಮಾತ್ರವಲ್ಲ ಆಸೇತು ಹಿಮಾಚಲ ಭಾರತವು ಪರಕೀಯ ಧಾಳಿಗಳಿಂದ ಕಂಗೆಟ್ಟಿದ್ದ ಕಾಲದಲ್ಲಿ ನಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಬೇಕಾದ ಆತ್ಮಸ್ಥೈರ್ಯವನ್ನೂ ಶೌರ್ಯವನ್ನೂ ಜನತೆಗೆ ಕೊಟ್ಟಿತು - ಈ ಶರಣ ಮತ್ತು ಹರಿದಾಸ ಪರಂಪರೆ.

ಇದೇ ರೀತಿ ಬರುವ ನೂರಾರಲ್ಲ ಸಾವಿರಾರು ವರ್ಷಗಳ ಕಾಲವೂ ನಮ್ಮ ದೇಶವನ್ನು, ನಮ್ಮ ದೇಶೀಯ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಭಾಷೆ-ಸಾಹಿತ್ಯ-ಕಲೆ ಎಂದು ಮುಂತಾದ ಉಪಕರಣಗಳ ಕಡೆ ನಾವು ಸರಿದಾರಿಯಲ್ಲಿ ಗಮನ ಹರಿಸಬೇಕಾಗಿದೆ:

*

ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘಗಳು ಆಧುನಿಕ ಕನ್ನಡ ನಾಡು ನುಡಿ ಸಾಹಿತ್ಯ ಪರಂಪರೆಯ ಎರಡು ಕಣ್ಣುಗಳು. ಇವುಗಳ ಮುಖ್ಯ ದೃಷ್ಟಿ ಕರ್ನಾಟಕದ ಏಕೀಕರಣವೆಂಬುದೂ - ಅದು ಸಾಧಿತವಾಗಿರುವುದೂ ಈಗ ಇತಿಹಾಸ. ಆ ಕಾಲದ ಒತ್ತಾಸೆಯಿಂದ ನಾಡಿನ ಮಹನೀಯರು ಕಟ್ಟಿದ ಮಹತ್ವದ ಸಂಸ್ಥೆಗಳಿವು. ಶತಮಾನದ ಸಂಭ್ರಮದ ಅಂಚಿನಲ್ಲಿರುವ ಈ ಮಹಾನ್ ಸಂಸ್ಥೆಗಳು ಈ ವೇಳೆಗಾಗಲೇ ನಾಡಿನ ಸಾರ್ವಭೌಮ ಸಂಸ್ಥೆಗಳಾಗಿ ಬೆಳೆಯಬೇಕಾಗಿತ್ತು; ಆದರೆ ಜನತೆ - ಮುಖ್ಯವಾಗಿ ಸರಕಾರ ವ್ಯವಸ್ಥಿತವಾಗಿ ಅವನ್ನು ಬೆಳೆಸುವ ಬದಲು ಕಾಲಕ್ರಮೇಣ ಕಡೆಗಣಿಸುತ್ತ ಬಂದದ್ದು ಬಹಳ ಆಶ್ಚರ್ಯಕರವಾದ ಮತ್ತು ದುರದೃಷ್ಟಕರವಾದ ಸಂಗತಿ!

ಬದಲಾದ ಸನ್ನಿವೇಶಗಳಿಗನುಗುಣವಾಗಿ ಅವನ್ನು ಬಲಪಡಿಸುತ್ತ ಬಂದಿದ್ದರೆ - ಇಂದು ಅವು ಮೂಲೆಗುಂಪಾಗುವ ಸ್ಥಿತಿಗೆ ಬರುತ್ತಿರಲಿಲ್ಲ. ಅಲ್ಲಿ ಕಾರ್ಯಗತಗೊಳಿಸಬಹುದಾಗಿದ್ದ ಯೋಜನೆಗಳನ್ನು ಸರಕಾರ ಒಂದೊಂದಾಗಿ ತನ್ನ ಕಡೆಗೆ ವರ್ಗಾಯಿಸಿಕೊಳ್ಳುತ್ತ ಬಂದಿದ್ದರಿಂದ - ಹೊಸ ಹೊಸ ಹೆಸರಿನ ಸರಕಾರಿ ಸಂಸ್ಥೆಗಳು ಹುಟ್ಟಿಕೊಂಡಂತಾಯಿತೇ ಹೊರತು - ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳ ವಿಕಾಸ ಸಾಧ್ಯವಾಗಲಿಲ್ಲ. ಅಂದರೆ - ಸರಕಾರ ಹೊಸದಾಗಿ ಹುಟ್ಟುಹಾಕಿದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದ ಸಂಸ್ಥೆಗಳಲ್ಲಿ ಚಟುವಟಿಕೆಗಳು ಸರಕಾರೀಕರಣಗೊಂಡು ಜನದೂರವಾಗಿ ಕನ್ನಡ ಸಂಬಂಧವಾದ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯಲಾರದೆ ಹೋದವು. ಕೆಲವೇ ಆಯ್ದ ಲೇಖಕರ ಕೃತಿಗಳ ಪ್ರಕಟಣೆ, ಕೆಲವೇ ಬಗೆಯ ವಿಚಾರ ಸಂಕಿರಣ, ಅಪೂರ್ಣ ಗಡಿವೀಕ್ಷಣೆ, ಕನ್ನಡ ಆಡಳಿತ ಭಾಷಾ ನೀತಿಯ ಅಸಮರ್ಪಕ ನಿರ್ವಹಣೆ, ಅನಿಯಂತ್ರಿತ ಪ್ರಶಸ್ತಿ- ಪುರಸ್ಕಾರ ಪ್ರಧಾನ -ಇವಿಷ್ಟೇ ತಾನೆ ಅಲ್ಲಿ ನಡೆಯುತ್ತಿರುವ ಕೆಲಸಗಳು? ಈ ಯೋಜನೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ಹಂಚಿಕೊಟ್ಟು ಕನ್ನಡ ಜನತೆಯ ಕೈಗಳನ್ನು ಬಲಪಡಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಈಗಲೂ ಕಾಲ ಮಿಂಚಿಲ್ಲ. ಕನ್ನಡದ ಪರಿಚಾರಿಕೆಯನ್ನು ಕೈಗೊಂಡಿರುವ ಸರಕಾರದ ಸಂಸ್ಥೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ತಂದರೆ ಹೇಗೆ ಎಂಬುದು ಚರ್ಚಾಸ್ಪದವಾಗುವ ಪ್ರಮೇಯವೇ ಇರುವುದಿಲ್ಲ. ಈ ವಿಲೀನ ಪ್ರಕ್ರಿಯೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ತನ್ನ ತಾನೇ ಹೊಸ ಶಕ್ತಿ ಬಂದಂತಾಗುತ್ತದೆ. ಯೋಜನೆಗಳ ನಿರ್ಬಲೀಕರಣವೂ ತಪ್ಪುತ್ತದೆ.

ಅಧಿಕೃತ-ಸಂಸ್ಥೆಗಳು ಮಾಡಬಹುದಾದ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಸಂಬಂಧವಾದ ಸುಧಾರಣೆಯ ಕೆಲಸ ಕಾರ್ಯಗಳನ್ನು ಸಾರ್ವಜನಿಕ ಕ್ರಿಯಾಶಕ್ತಿಗೆ ಒಳಪಡಿಸದೆ, ಸರಕಾರೀಕರಣ ಮಾಡುವುದು ಪ್ರಜಾಪ್ರಭುತ್ವಕ್ಕೇ ವಿರುದ್ಧವಾದ ರೀತಿ-ನೀತಿ. ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳಂತಹ ಶುದ್ಧ ಜನಪರ ಸಂಸ್ಥೆಗಳು ತಮ್ಮ ಜಾಯಮಾನದಿಂದಲೇ ಕನ್ನಡ ಪರ ಕಾರ್ಯಗಳನ್ನು ಎಷ್ಟು ಸಮ್ಮೋನವ ಉತ್ಸಾಹದಿಂದಲೂ ಜನಸಮ್ಮತಿಯಿಂದಲೂ ನಡೆಸಬಹುದಾಗಿತ್ತೋ ಅದಕ್ಕೆ ಬದಲಾಗಿ ಅನಿರೀಕ್ಷಿತ ಬದಲಾವಣೆ ತಾಳಿ ಜನದೂರ ಕಾರ್ಯವೈಖರಿಗಳಿಗೆ ಒಳಗಾಗುವ ಅಪಾಯದಿಂದ ಪಾರಾಗಬಹುದಾಗಿತ್ತು.

ಸಾಹಿತ್ಯವನ್ನು ಭಾಷೆಯನ್ನು ಕುರಿತಂತೆ, ಗಡಿನಾಡಿನ ಜನಗಳ ದಿಕ್ಕುದೆಸೆ ಕುರಿತಂತೆ, ಇಡಿಯಾಗಿ ಅಕ್ಕಪಕ್ಕದ ಭಾಷೆ ಪ್ರಾಂತ್ಯ ಸಂಬಂಧವಾಗಿ ಮಾಡಬಹುದಾದ ಪರಸ್ಪರ ಕಾರ್ಯಗಳು ಕಾಲಕಾಲಕ್ಕೆ ನಿರೀಕ್ಷಿತ ರೀತಿಯಲ್ಲಿ, ಪ್ರಮಾಣದಲ್ಲಿ ನಡೆಯದೆ ಹೋಗಿವೆ. ಈ ಎಲ್ಲಾ ಕೊರತೆಗಳಿಗೆ, ಅಪಾಯಗಳಿಗೆ ಇನ್ನಾದರೂ ಆಸ್ಪದ ಕೊಡದೆ, ಮೇಲೆ ಹೇಳಿದ

ಸಂಘ ಸಂಸ್ಥೆಗಳಿಗೆ ಈ ಕಾರ್ಯಭಾರವನ್ನು ಧಾರೆಯೆರೆದು ಕೊಡುವುದು ಶುಭಕಾರ್ಯವೇ ಆಗಿದೆ.

ವಾಸ್ತವವಾಗಿ ನಾವು ಈ ವಿಷಯಗಳ ಸಂಬಂಧವಾಗಿಯೇ ಖಾಸಗೀಕರಣ ಮತ್ತು ಉದಾರೀಕರಣ ತತ್ವಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಆಗ ಕನ್ನಡಿಗರು ಅಧಿಕೃತವಾಗಿ ತಮ್ಮ ಕನಸಿನ ಸಂಸ್ಥೆಗಳಾದ ಪರಿಷತ್ತು, ವಿದ್ಯಾವರ್ಧಕ ಸಂಘಗಳ ಮೂಲಕ ತಮ್ಮ ಕನ್ನಡ ನುಡಿ ಮತ್ತು ಕನ್ನಡ ಜವಾಬ್ದಾರಿಗಳನ್ನು ತಾವೇ ನೇರವಾಗಿ ನಿರ್ವಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರಕಾರ ವ್ಯವಸಾಯ, ಕಂದಾಯ, ಅಬಕಾರಿ, ಲೋಕೋಪಯೋಗಿ ಮತ್ತಿತರ ವ್ಯವಹಾರಿಕ - ಅವಶ್ಯಕ ಕರ್ತವ್ಯಗಳಲ್ಲಿ ತೊಡಗಿರಲಿ. ಹೀಗಾದರೆ ಜನರ ಆಶೋತ್ತರಗಳನ್ನು , ಆವೇಶಗಳನ್ನು, ಕನಸು ಮನಸುಗಳನ್ನು ನೋಯಿಸದೆ ನೆರವೇರಿಸಲು ಅನುವಾಗುತ್ತದೆ. ಸರಕಾರ ಪ್ರವೇಶ ಮಾಡಬಾರದಂತಹ, ದೂರನಿಂತು ಗೌರವದಿಂದ ಪ್ರೋತ್ಸಾಹ ನೀಡಬೇಕಾದಂತಹ ರೀತಿ ಇದಾಗುವುದಿಲ್ಲವೆ? ಸಾಹಿತ್ಯವೆನ್ನುವುದು ಸರಕಾರದಿಂದ ನಿರ್ಣಯವಾಗುವಂಥದ್ದಲ್ಲ. ಅದು ತೀರ ಭಾವನಾತ್ಮಕವಾದ ವಿಚಾರ. ಇವನ್ನೆಲ್ಲ ನೇರವಾಗಿ ಜನತೆ ತನ್ನ ಸಂಘಸಂಸ್ಥೆಗಳ ಮೂಲಕ ತಾನೇ ನಿರ್ವಹಿಸಿಕೊಳ್ಳ ಬೇಕಾದ್ದು. ಪಲವು ಧಾರ್ಮಿಕ ವಿಚಾರಗಳಿಗೆ ಇಂದೂ ಕೂಡ ಸರಕಾರ ಪ್ರವೇಶ ಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆ! ಆದ್ದರಿಂದ ಇಂತಹ ಭಾವನಾತ್ಮಕ, ಆವೇಶ ಭರಿತ ವಿಷಯಗಳ ಗೊಡವೆಗೆ ಹೋಗದಿರುವುದು ಜನಕ್ಕೂ, ಜನಪರ ಅಭಿವೃದ್ಧಿಗಾಗಿ ನಡೆಯುತ್ತಿರುವ ಸರಕಾರಗಳಿಗೂ ಶೋಭೆ ತರುವಂಥದ್ದು. ಈ ಕೆಲಸ ಅಂದರೆ - ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ ಮತ್ತು ಸಂಸ್ಕೃತಿ ಇಲಾಖೆ - ಇವನ್ನೆಲ್ಲಾ ಸರಕಾರ ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳಿಗೆ ವರ್ಗಾಯಿಸುವುದು ಅಗತ್ಯ. ಈ ಸಂಸ್ಥೆಗಳನ್ನು ಎರಡು ಸ್ವಾಯುತ್ತ ವಿಶ್ವವಿದ್ಯಾನಿಲಯಗಳನ್ನಾಗಿ ಪರಿವರ್ತಿಲಿ. ಆಗ ಕನ್ನಡ ಭಾಷೆ -ಸಾಹಿತ್ಯ - ಸಂಸ್ಕೃತಿಗಳ ಅಭಿವೃದ್ಧಿ ಇತೋಪ್ಯತಿಶಯವಾಗಿ ನಡೆಯುತ್ತದೆ. ಕಾಲಕ್ರಮದಲ್ಲಿ ಅವು ಸ್ವತಂತ್ರ ಜನತಾ ಸಂಸ್ಥೆಗಳಾಗಿ ಬೆಳೆದು ದೇಶ-ವಿದೇಶ, ಇಡಿಯಾಗಿ ವಿಶ್ವದಲ್ಲಿ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿ ಪ್ರಸಾರ ಕಾರ್ಯಗಳನ್ನು ಕೈಗೊಳ್ಳಲು ಸಮರ್ಥವಾಗುತ್ತವೆ.

ನಾನು ಈ ವೇದಿಕೆಯಿಂದ ನನಗೆ ಅತ್ಯಂತ ಗೌರವ ಪಾತ್ರರಾದ ಕನ್ನಡ ಜನತೆಯನ್ನು ಈ ಸಂಬಂಧವಾಗಿ ಪ್ರಚೋದಿಸುತ್ತಿದ್ದೇನೆ. ಇರುವ, ಬರುವ ಸರಕಾರಗಳನ್ನು ಪ್ರೀತಿಯಿಂದಲೇ ಎಚ್ಚರಿಸುತ್ತಲೂ ಇದ್ದೇನೆ. ಪ್ರೀತಿಯ ಮಕ್ಕಳು ತಮ್ಮ ಖಾಸಾ ಜವಾಬ್ದಾರಿಗಳನ್ನು ನಿರ್ವಹಿಸಿಕೊಳ್ಳಲು ಉತ್ಸುಕರೂ ಸಮರ್ಥರೂ ಆಗಿರುವರು ಎಂದಾಗ ಯಜಮಾನರಂತಹ ಸರಕಾರಗಳು ಮೆಚ್ಚಿ ಅದಕ್ಕೆ ಪ್ರೋತ್ಸಾಹ ಕೊಡದಿದ್ದರೆ ಹೇಗೆ ?

*

ನಾನು ಓಂದೆ ಹೇಳಿದಂತೆ ಶಿವಶರಣರು ಹರಿದಾಸರು ತಮ್ಮ ಸಾಹಿತ್ಯದಿಂದ ಒಂದು ಸಾವಿರ ವರ್ಷಗಳ ಉದ್ದಕ್ಕೂ ಮಾಡಿಕೊಂಡು ಬಂದ ಸುಧಾರಣೆಯ ಕೆಲಸವನ್ನು ಒಟ್ಟಾರೆಯಾಗಿ

ಈಗ ಸಾಹಿತಿಗಳು ಸಾಧಿಸಲಾಗದಿರುವುದಕ್ಕೆ ಕಾರಣವೇನು? ನಮಗೆ ಬಹಳ ಪೂಜ್ಯನಾದ ಸಂತನಾದ ಜೀವಿತಾದರ್ಶದ ಪ್ರತೀಕರೂಪವಾದ ಸಾಹಿತಿ ಯಾರು ಎಂದರೆ - ಕುವೆಂಪು ಅವರೆಂದೂ, ಬೇಂದ್ರೆಯವರೆಂದೂ ಬೆಳರಳೆಣಿಕೆಯಷ್ಟು ಜನ ಸಿಗಬಹುದು. ಆದರೆ ಈ ಕಲಿಗಾಲಕ್ಕೆ ಅದೂ ಸಾಲದು. ಮತ್ತು ಆಧುನಿಕ ಪಂಥಗಳು ಶರಣ-ಹರಿದಾಸ ಪಂಥಗಳಷ್ಟು ಸಾಮಾನ್ಯ ಜನತೆಯ ಮನಃಪರಿಪಾಕವನ್ನು ಕಾಲಾನುಗುಣವಾಗಿ ತಿದ್ದಬಲ್ಲಂಥ ಪಂಥಗಳಾಗಲಿಲ್ಲ. ಧರ್ಮದ ಹೆಸರಿನಲ್ಲಿ ಅಂದಿನ ಶರಣ-ದಾಸ ಪಂಥಗಳು ವೈರಾಗ್ಯದ ಹೆಸರಿನಲ್ಲಿ ಕಾಯಕದ ಹೆಸರಿನಲ್ಲಿ ಭಕ್ತಿಯ ಹೆಸರಿನಲ್ಲಿ ಏನೆಲ್ಲ ತ್ಯಾಗ ಮಾಡಿ ನಿಷ್ಠೆಯಿಂದ ಜನಸೇವೆಯಲ್ಲಿ ತೊಡಗಿದವೋ ಅಂತಹ ಸಾಹಿತ್ಯ ಸಮೂಹಗಳನ್ನೇ ಇಂದು ನಾವು ಕಾಣಲಾರೆವು. ಆದ್ದರಿಂದಲೇ ಇವತ್ತಿನವರ ಸಾಹಿತ್ಯ ರಚನೆಗಳು ಕೇವಲ ಶಬ್ದಾಡಂಬರವೆನಿಸಿ ಜನ ಅವುಗಳಿಂದ ಪ್ರೇರಿತರಾಗಲಿಲ್ಲ. ಅಂಥಹ ಪ್ರೇರಣೆ ಉಂಟು ಮಾಡಲು ಇಂದು ಹೊಸದೊಂದು ಸಾಹಿತ್ಯ ಪಂಥ ಜಾತ್ಯತೀತವಾಗಿ ಸರ್ವಜನಪ್ರಿಯವಾಗಿ ಜಾಗತಿಕ ಆಗು ಹೋಗುಗಳ ಹಿನ್ನಲೆಯಲ್ಲಿ ಸಂಭಾವಿತವೂ ಆಗಿ ಮೆರೆಯಬೇಕಾಗಿದೆ. ಮತ್ತು ಅದಕ್ಕೆ ಕೆಲವು ಸೃಜನಶೀಲ ಜೀವಗಳು ನಿಷ್ಠೆಯಿಂದ ಸಂಪೂರ್ಣವಾಗಿ ಕಾಯಾ-ವಾಚಾ-ಮನಸಾ ತೆತ್ತುಕೊಳ್ಳಬೇಕು. ಮನೆಯೊಳಗೆ ಒಳ್ಳೆಯ ಮಾತನಾಡಿ ಹೊರಗೆ ಹೋಗಿ ಹೆಂಡ ಕುಡಿದು ಬಂದರೆ ಏನಾಗುತ್ತದೆ? ಸೃಜನಾತ್ಮಕ ಶಕ್ತಿಯ ಜನ ತಮ್ಮ ವಾಣಿಯಿಂದ ಅಂದರೆ ಸಾಹಿತ್ಯದಿಂದ ಜನತೆಯ ಗಮನ ಸೆಳೆಯುವ, ಅದಕ್ಕೂ ಹೆಚ್ಚಾಗಿ ತಮ್ಮಂತೆಯೇ ಪ್ರಗತಿಪರ ಕಾರ್ಯಕಲಾಪಗಳಲ್ಲಿ ತೊಡಗುವ ಸಂಕಲ್ಪವನ್ನೂ ಓದುಗರಲ್ಲಿ ಉಂಟು ಮಾಡಬೇಕು. ಮುಖ್ಯವಾಗಿ ಸಾಹಿತ್ಯ ಎನ್ನುವುದು ಒಂದು ಮಾನಸಿಕ ಸುಧಾರಣೆ. ಆ ಸುಧಾರಣೆ ಸಮಾಜದ ದೇಶದ ಉತ್ತಮಿಕೆಗೆ ಬೇಕಾದ ಕಾರ್ಯಕಲಾಪಗಳಲ್ಲಿ ಪ್ರಜೆಯನ್ನು ಪ್ರಕರ್ಷಕವಾಗಿ ತೊಡಗಿಸುವಂತಾಗಬೇಕು.

*

ಕನ್ನಡ ದೇಶ-ಭಾಷೆ-ಸಂಸ್ಕೃತಿ-ಸಾಹಿತ್ಯ ಎಂದು ಕೊಚ್ಚಿಕೊಳ್ಳುತ್ತಿರುವ ಈ ಜನ - ಕನ್ನಡವನ್ನು ಮಾತನಾಡುವ ನಾವೆಲ್ಲ ಒಂದು ಜನಾಂಗ; ಎಲ್ಲಾ ನಮ್ಮವರು; ನಮ್ಮಿಂದ ಎಲ್ಲರಿಗೂ ಮರ್ಯಾದೆ ಸಲ್ಲಬೇಕೆಂಬ ಪ್ರಾಥಮಿಕ ಪಾಠವನ್ನೇ ಕಲಿತಿಲ್ಲ. ಕನ್ನಡ ಮಾತನಾಡುವ ಜನರನ್ನು- ಅದು , ಇದು ಎಂದು ಹೆಸರಿಟ್ಟು ಬಹಿಷ್ಕರಿಸಿ, ಅವರನ್ನು ಊರಿಂದ ಹೊರಗಿಟ್ಟು, ಅವರಿಗೆ ಮನೆಯಿಲ್ಲದೆ ಅನ್ನವಿಲ್ಲದೆ ವಿದ್ಯೆಯಿಲ್ಲದೆ ಉದ್ಯೋಗವಿಲ್ಲದೆ ಅತ್ಯಂತ ಶೋಚನೀಯ ಸ್ಥಿತಿಯಲ್ಲಿಟ್ಟಿರುವ ಈ ಕನ್ನಡಿಗರೆಂಬ ನಾವು ಕನ್ನಡಾಂಬೆಗೆ ಕನ್ನಡ ಸರಸ್ವತಿಗೆ ಕನ್ನಡ ಭುವನೇಶ್ವರಿಗೆ ಅವಮಾನ ಮಾಡುತ್ತಿರುವಂತಾಗಿಲ್ಲವೇನು? ಇದು ಯಾರ ಮನಸ್ಸಿಗೂ ಬರುತ್ತಿಲ್ಲವೇನು? ತಮ್ಮಷ್ಟಕ್ಕೆ ತಾವು ಚಳಿಗಾಲದಲ್ಲಿ ಕಂಬಳಿ ಹೊದ್ದು ಕೊಂಡವರಂತೆ ಬೆಚ್ಚಗೆ ಕುಳಿತಿರುವರಲ್ಲ? ಹೊಟ್ಟೆಗಿಲ್ಲದವನು ಸಾಯುತ್ತಿರುವಾಗ ಔತಣವನ್ನು ಉಂಡ ಉಂಡಾಡಿಯಂತೆ ದಲಿತರಲ್ಲದ ಜನ ನಿರಪರಾಧಿಗಳೆಂಬಂತೆ ಎಗ್ಗು-ಸಿಗ್ಗಿಲ್ಲದೆ

ತಿರುಗುತ್ತಿರುವುದು ಒಂದು ಸಾಮಾಜಿಕ ಅಪಹಾಸ್ಯವಾಗಿದೆ. ಇದರಿಂದ ಪಾರಾಗುವ ಇಚ್ಛೆ ಮೇಲ್ವರ್ಗದವರಿಗೆ ಇರುವುದೇ ಆದರೆ ಅವರು ಈ ಅವಮಾನಕರವಾದ ಸಂದರ್ಭದಿಂದ ಮೊದಲು ಹೊರಬರಬೇಕು. ಈ ಸಂಬಂಧವಾಗಿಯೇ ನಾವು ಮಾಡಬಹುದಾದ ಮೊಟ್ಟಮೊದಲ ಅಡಿಪಾಯದ ರೀತಿಯ ಕಾರ್ಯಭಾರವೆಂದರೆ - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಶಿಶುವಿಹಾರದಿಂದ ಮೊದಲುಗೊಂಡು ರಾಜ್ಯಾಂಗದತ್ತವಾಗಿ ಒತ್ತಾಯ ಮಾಡಿರುವ ಹತ್ತನೆಯ ತರಗತಿಯವರೆಗೆ ಉಚಿತ-ಕಡ್ಡಾಯ-ಅತ್ಯುತ್ತಮ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈ ನಿರ್ಗತಿಕ ವರ್ಗದ ತಂದೆ-ತಾಯಿಯರು ಸ್ವತಃ ವಿದ್ಯಾವಂತರಾಗಿರುವುದಿಲ್ಲವಾಗಿ ವಾಸಿಸಲು ಯೋಗ್ಯವಾದ ಮನೆಗಳೂ ಇಲ್ಲದೆ, ಶುಚಿಯಾದ ಕೇರಿಯೂ ಇರದೆ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಅವರು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಯಾವುದಾದರೂ ಶಾಲೆಗೆ ಕಳಿಸುತ್ತಾರೆ ಎಂದರೆ, ಅದು ಆಗದ ಮಾತು. ಅವರನ್ನು ಒತ್ತಾಯ ಮಾಡುವುದೆಂದರೆ -ತಿನ್ನಲು ಹುಲ್ಲು ಇಲ್ಲದ ಬಡಕಲು ಕುದುರೆಯನ್ನು ಗಾಡಿಗೆ ಕಟ್ಟಿ ಚಾಟಿಯಲ್ಲಿ ಹೊಡೆದಂತೆ ಅವಿವೇಕ, ಅನಾಗರೀಕ. ಆದ್ದರಿಂದ ಸರಕಾರ ಪ್ರತಿವರ್ಷ ಅಲ್ಲ, ಪ್ರತಿನಿತ್ಯ ಹೆಸರಿಸಲು ನಾಚುವ ಎಷ್ಟೋ 'ಯೋಜನೆ'ಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಅಪವ್ಯಯ ಎನ್ನುವುದು ಬೇಡ-ವ್ಯಯ ಮಾಡುತ್ತಿದೆ. ಅದಷ್ಟನ್ನೂ ವಿವೇಕದಿಂದ ಇದೇ ಸರಕಾರ ಆ ವರ್ಗದ ಜನರ ಮಕ್ಕಳೆಲ್ಲ ಸುಸೂತ್ರವಾಗಿ ವಸತಿ-ಅನ್ನ-ಬಟ್ಟೆ- ವಿದ್ಯೆ - ಈ ಒಂದರಿಂದಲೂ ವಂಚಿತರಾಗದಂತೆ ಬೆಳೆಸಲು ಇರುವ ಮಾರ್ಗ ಒಂದೇ- ಅದು ಪ್ರತಿ ತಾಲ್ಲೂಕು ಮಟ್ಟದಲ್ಲಿ ಅವರಿಗೆ ಪ್ರತ್ಯೇಕವಾದ ಸುಸಜ್ಜಿತ ವಸತಿ ಶಾಲೆಗಳನ್ನು ತೆರೆದು ತರಬೇತಿ ಪಡೆದ ಉಪಾಧ್ಯಾಯರನ್ನು ನೇಮಿಸಿ - ಶಿಶುವಿಹಾರ, ಪ್ರಾಥಮಿಕ, ಪ್ರೌಢ ಎಂಬ ಮೂರೂ ಹಂತಗಳಲ್ಲಿ ಆ ಮಗುವಿಗೆ ಶಿಕ್ಷಣ ಕೊಡುವಂತಾಗಬೇಕು.

ಈ ಕೆಲಸವನ್ನು ಮೊದಲು ಐದು ವರ್ಷ ಈ ಸರಕಾರ ಮಾಡಲಿ. ಅನಂತರ ಇದೇ ಸರಕಾರ ಆಡಳಿತಕ್ಕೆ ಬರುವುದು ಖಚಿತ. ಆ ಐದು ವರ್ಷವೂ ಆ ಸರ್ಕಾರ ಇದೇ ರೀತಿ ಅನಾಥ ರಕ್ಷಕವಾಗಿ ಮುಂದುವರಿದರೆ ಆಚಂದ್ರಾರ್ಕವಾಗಿ ಆ ಸರಕಾರವೇ ಆಡಳಿತದಲ್ಲಿರುತ್ತದೆ. ಈ ಮಾತು ಸರಕಾರಕ್ಕೂ ಇರಲಿ, ಜನರ ಬುದ್ಧಿಗೂ ಬರುವಂತಾಗಲಿ. ಈ ಭಾಗ್ಯೋದಯದ ಸಾರಥ್ಯವನ್ನು ನಮ್ಮ ಶ್ರೀ ಯಡಿಯೂಪ್ಪನವರೆ ನಿರ್ವಹಿಸುವಂತಾದರೆ ನನಗಷ್ಟೇ ಅಲ್ಲ , ಇಲ್ಲಿರುವವರಿಗಷ್ಟೇ ಅಲ್ಲ, ಕರ್ನಾಟಕದಲ್ಲಿರುವ, ಹೊರನಾಡಿನಲ್ಲಿರುವ ಕೋಟ್ಯಂತರ ಕನ್ನಡಿಗರಿಗೆ ಆನಂದವಾದೀತು.

ಜೈ ಕರ್ನಾಟಕ, ಜೈ ಹಿಂದ್

■

ದೆಹಲಿಯ ತುಣುಕುಗಳು

● ಬಾಲಕೃಷ್ಣ ನಾಯ್ಕ ಡಿ.

ಇಂಡಿಯಾ ಗೇಟ್

ಸತ್ತ ಸೈನಿಕರ ಹೆಸರು ಕೆತ್ತಿದ
ಭಾರತದ ಬಾಗಿಲೆದುರು
ಸಂಜೆಯೆಲ್ಲಾ ಪ್ರೇಮಿಗಳ ಮಿಲನ

ಕತ್ತಲಿಟ್ಟಂತೆ
ಬೆಳದಿಂಗಳೂಟದ ಸಡಗರ

ಕಾಯುತಿದೆ ಸೈನಿಕರ ಆತ್ಮ
ಬೊಗಸೆ ನೀರಿಗೆ

ಕೆಂಪು ಕೋಟೆ

ರಕ್ತ ಚೆಲ್ಲಿ
ಅಂದೂ
ಇಂದೂ
ಕೋಟೆ ಕೆಂಪಾಗಿದೆ
ಆತಂಕದ ಕ್ಷಣಗಳನ್ನು ಅದುಮಿಟ್ಟು
ಹಾರುತಿದೆ ಭಾರತದ ಬಾವುಟ

ಸಿಪ್ಪೆ ಬಿಸುಟು
ಕಡಲೆ ತಿಂದಿದ್ದಾರೆ
ಇಲ್ಲಿ ಬಂದವರು

ಗಾಂಧಿ ಸಮಾಧಿ

ಬೆಳಕು ಉರಿಯುತಿದೆ
ನಿರಂತರ ಅನಿಲದಿಂದ

ಕಪ್ಪು ಕಲ್ಲಿನೊಳಗೆ
ಬಂದಿಯಾಗಿದೆ
ಎಲ್ಲಾ ತತ್ವ, ಆದರ್ಶ

ಚಾಂದನಿ ಚೌಕ್

ಬೆಳ್ಳಿಯ ಚೌಕದಲ್ಲಿ
ಬಂಗಾರದ ಸಂತೆ
ಸಂದಿಗೊಂದಿ ಸುತ್ತಿದವರು
ಸುತ್ತಿ ಸುತ್ತಿ
ಮತ್ತೊಮ್ಮೆ ಬರಲೇ
ಬೇಕೆಂದಿದ್ದಾರೆ.

ಕುತುಬ್ ಮಿನಾರ್

ಎದ್ದು ನಿಂತಿದೆ
ಇತಿಹಾಸದ ಕುರುಹು
ಕುಬ್ಜವಾಗಿದೆ
ಇತಿಹಾಸ ಬೆಳೆದಂತೆ

ಮೊಘಲ್ ಗಾರ್ಡನ್

ತೋಟ ತುಂಬಾ
ಬಣ್ಣ ಬಣ್ಣದ ಹೂವು
ಕೆಂಪು ಗುಲಾಬಿಯೂ ನಾಚಿ
ಮತ್ತೂ ಕೆಂಪಾಗುವುದು
ಅಪರೂಪಕ್ಕೆ ಕಂಡ
ಪ್ರೇಮಿಗಳನ್ನು

ಪ್ರೇಮಿಗಳು
ಬದುಕಿನ ಬಣ್ಣ ಹುಡುಕಲು
ಪ್ರತಿ ವರ್ಷ
ಬಂದೇ ಬರುತ್ತಾರೆ

ಮೆಟ್ರೋ ರೈಲು

ಎತ್ತಿ ಹಿಡಿದ ಕಂಬಗಳಿಗೆ
ಸಾಕೋ ಸಾಕು
ಮಹಾನಗರದ ಓಟ

ಇನ್ನೂ ತನ್ನ ಪರವು
ಚೆಲ್ಲಿ ಬಿಡಬೇಕು
ಉದ್ದುದ್ದ

ಎಟುಕದ ಹಾವು
ಏಣಿ ಆಟ

ಸುರಂಗದೊಳಗೂ
ಎತ್ತಿ ಹಿಡಿದಿವೆ
ಮೇಲಿರುವುದು
ಕೆಳಗೆ
ಜಾರದಂತೆ

ಮುಂಡಿ ಹೌಸ್

ರಂಗ ಶಾಲೆಯಲ್ಲಿ
ಹುಡುಕ ಹೊರಟಿವೆ
ಮುಖವಾಡಗಳು
ಮನದೊಳಗಿನ
ಭರವಸೆಗಳನು

ಭಾರತದ ಬೇರುಗಳು
ರೆಂಬೆಗಳಾಗಿವೆ ಟಿಸಿಲೊಡೆದು

ಮುಸ್ಸಂಜೆಯ
ಕೋಗಿಲೆ ಕೂಗು
ಎಲ್ಲವನ್ನೂ
ಮರೆಸಿ ಬಿಡುವುದು

ಕಲೆಯ ಬಲೆಯನ್ನೇ
ನೇಯ್ದು ಜೇಡರು
ನೊಣಗಳಿಗೆ ಕಾದಿದ್ದಾರೆ

ರಸ್ತೆಗಳು

ರಸ್ತೆಗಳು ವಿಸ್ತಾರ, ನೇರ
ನಡುವೆ ವೃತ್ತ

ವೃತ್ತದೊಳಗೆ ಸುತ್ತಿದರೂ
ಸಿಗದು
ಹೋಗಬೇಕಾದ ದಾರಿ
ನೇರ ರಸ್ತೆಯಲ್ಲೂ
ಅಡ್ಡ ದಾರಿ

ಪಾರ್ಲಿಮೆಂಟ್ ಹೌಸ್

ದೇಶ ನಡೆಸುವವರಿಗೆ
ಒಂದು ಅರಮನೆ
ಸುತ್ತಾ ಕಾವಲು
ಒಂಥರಾ ಸೆರೆಮನೆ

ತಿಹಾರ್ ಜೈಲು

ಇಲ್ಲಿಗೆ ಬರುವುದೇ
ಅದೃಷ್ಟ ಎಂದು
ನಂಬಿದವರಿದ್ದಾರೆ

ಇನ್ನೆಲ್ಲಿ ಸಿಗಬಹುದು
ಇಷ್ಟೊಂದು ಮಂದಿ
ಘನತೆ ಗೌರವ ಹೊತ್ತವರು

ಬಸ್ಸು

ನಗರವನ್ನೆಲ್ಲ ಬಸಿರೊಳಗಿಟ್ಟ
ಬಸ್ಸು
ಸಾಕು ಸಾಕೆಂದರೂ
ಸಾಲುವುದಿಲ್ಲ

ಗರ್ಭವಿಳಿಸಲು
ನಡುರಸ್ತೆಯೇ
ಸಾಲುವುದಿಲ್ಲ
ರಸ್ತೆ ತುಂಬಾ
ಚೆಲ್ಲಲು ರಕ್ತ

ಚಳಿಗೆ

ದೀಪಾವಳಿಗೆ ಬೆಳಕು ಹಚ್ಚಿ
ಕಂಬಳಿ ಹೊದ್ದರೆ
ಕಾಮನ ಹಬ್ಬಕ್ಕೆ
ಬಟ್ಟೆ ಬಿಸುಟು
ಒದ್ದೆಯಾಗಲೇ ಬೇಕು
ಬಣ್ಣ ನೀರಿನಲ್ಲಿ

ನಡುವೆ ಮಂಜು ಮುಸುಕು
ಬಿಸಿಯಪ್ಪುಗೆಗೆ
ಚೆಲ್ಲಿ ಹೋದ
ಮದಿರೆಯ ಬಾಟಲಿಗಳು

ಹಾರಲಾಗದ ಹಕ್ಕಿಗಳು
ಓಡಲಾಗದ ಗಾಡಿಗಳು

ಹಿಡಿದುಕೊಂಡೇ ಹೊರಟಿದ್ದಾರೆ
ವಯೋವೃದ್ಧ ದಂಪತಿಗಳು.

ಡಿಡಿಎ ಫ್ಲ್ಯಾಟ್

ಲಾಟರಿಯಲ್ಲಿ ಸಿಕ್ಕ
ಅಭಿವೃದ್ಧಿಯ ಮನೆಗಳು
ಉಳಿಯಬೇಕಾದರೆ
ಕಾಯಬೇಕು
ಕಬ್ಬಿಣದ
ಬಾಗಿಲುಗಳನ್ನು ಜೋಡಿಸಿ

ಯಮುನೆ

ಪರ್ವತಗಳಲಿ
ಮಳೆ ಬಂದರೆ ಒಮ್ಮೆ
ಜೋರಾಗಿ ಅತ್ತು ಬಿಡುತ್ತಾಳೆ

ಕೊಳೆತು ನಾರುವ
ಕಣ್ಣೀರು
ಜಾರಲಿ ಎಂದು

ಸುಪ್ರೀಂ ಕೋರ್ಟ್

ಕಾಗೆಗಳನ್ನು ನೋಡಲು
ಇಲ್ಲಿಗೇ ಬರಬೇಕು

ಸತ್ತ ನ್ಯಾಯಕ್ಕಾಗಿ
ಸಂಬಂಧಿಕರನ್ನು
ಕೂಗಿ ಕೂಗಿ ಕರೆಯುತ್ತವೆ

ಕೆಳಗಿನಿಂದ ಮೇಲೇರಿದ
ಕಾನೂನಿನ ಕಟ್ಟಲೆಗಳಲ್ಲೂ
ಎಂಜಲು ಉಳಿದಿದೆ ಎಂದು

ರೈಲು ನಿಲ್ದಾಣ

ಹೊತ್ತು ನಿಲ್ಲುವುದಿಲ್ಲ
ಇಲ್ಲಿ

ಮೂಟೆಗಳನ್ನು
ಕೂಲಿ
ಹೊತ್ತು ಓಡುತ್ತಾನೆ

ಕೆಂಪು ಅಂಗಿಯ ಅವನೊಳಗೆಲ್ಲಾ
ಅಪಾಯದ ಸಂಕೇತ

ಬೇಸಿಗೆ

ಸುಡುವ ಮರುಭೂಮಿಯೇ
ವಲಸೆ ಬಂದಿದೆ
ಹುದುಗಿ ಹೋದ ಬವಣೆಗಳನ್ನು
ಬೇಯಿಸಲು

ಲೋದಿ ಗಾರ್ಡನ್

ನಡೆಯುವುದೇ ಪ್ರತಿಷ್ಠೆ
ಈ ತೋಟ ತುಂಬಾ

ದೇಶ ನಡೆಸುವವರೂ
ಮುಂಜಾನೆ ಸಂಜೆ
ನಡೆದೇ ನಡೆಯುತ್ತಾರೆ

ಎಡವದಂತೆ
ತಮ್ಮ ಹೆಜ್ಜೆ ಇಡುತ್ತಾ

ಟ್ರಾಫಿಕ್

ರಸ್ತೆ ಮೇಲೆ ಕುಳಿತಿದ್ದಾರೆ
ದಾರಿಯ ಬಣ್ಣ
ಬದಲಾಗುವುದನ್ನು ಕಾಯುತ್ತಾ

ಮುಂದುವರಿಯುವುದು ಹೇಗೆ
ಚಕ್ರ ಉರುಳಲು
ದಾರಿಯೆಲ್ಲಾ
ಕೆಂಪು ದೀಪ

ಪ್ಯಾಷನ್ ಷೋ

ಬಟ್ಟೆಯ ವ್ಯಾಪಾರ
ತೋರಿಸಲು ವ್ಯಯ್ಯಾರಿಯರು
ಉಡಲು ಮರೆತು
ಬಂದವರಂತೆ
ನಡೆಯುತ್ತಾರೆ
ಕಣ್ಣುಗಳ ಬೆಳಕಿನಲ್ಲೇ

ತರಕಾರಿ

ಆಲೂ ಇಲ್ಲದಿದ್ದರೆ
ತರಕಾರಿ ಅಂಗಡಿಯಲ್ಲ
ಅಡುಗೆ ಊಟವಲ್ಲ
ನಡುವೆ ಮಾತೂ ಇಲ್ಲ

ಮಕ್ಕಳು

ಪುಸ್ತಕ ಹೊರಲು
ಗಾಡಿಯಿದೆ
ಮಕ್ಕಳು ಬೊಜ್ಜು ಹೊತ್ತು
ಸಾಗುತ್ತಾರೆ
ಅಂಗಳವಿಲ್ಲದ ಮನೆಯಿಂದ
ಅಂಗಳವಿಲ್ಲದ ಶಾಲೆಗೆ

ಪತ್ರಿಕೆ

ಮುಖಪುಟವೇ
ಮಾರುಕಟ್ಟೆಯಾಗುತ್ತದೆ
ರಾತ್ರಿ ಪಾಳಿಯಲ್ಲಿ ಹೋದ
ಬಾಲೆಯರು
ಮೂರನೆ ಪುಟದೊಳಗಿನಿಂದ
ಮನೆಗೆ ಬರುತ್ತಾರೆ
ಗೆಳೆಯರ ಮುದ್ರೆ
ಹೊತ್ತುಕೊಂಡು

■

ಮಹಿಷಿ ವರದಿ: ಅಂದು-ಇಂದು

● ಮನೋಜ ಪಾಟೀಲ

ಎರಡು ದಶಕಗಳಷ್ಟು ಹಳೆಯದಾಗಿರುವ ಡಾ. ಸರೋಜಿನಿ ಮಹಿಷಿ ವರದಿ ಇಡಿಯಾಗಿ ಇನ್ನುವರೆಗೂ ಜಾರಿಯಾಗದೇ ಇರುವದರಿಂದಾಗಿ ಅದು ಸಮಗ್ರ ಬದಲಾವಣೆಗೊಂಡು ಇಂದಿನ ಅವಶ್ಯಕತೆಗಳಿಗೆ ತಕ್ಕ ಹಾಗೆ ಮಾರ್ಪಾಡುಗೊಳ್ಳುವ ಅನಿವಾರ್ಯತೆ ಉಂಟಾಗಿದೆ.

ಕರ್ನಾಟಕದಲ್ಲಿ ಕನ್ನಡಿಗರಿಗೆ ಸಬಲೀಕರಣದ ತಕ್ಕ 'ಟಾನಿಕ್' ನಂತಾಗಿದ್ದ ಡಾ. ಮಹಿಷಿ ವರದಿ ಶಿಫಾರಸುಗಳು ಜಾರಿಗೊಳ್ಳದೆ ಇದ್ದಿದ್ದರಿಂದ ಕನ್ನಡಿಗರ ಇಪ್ಪತ್ತು ವರ್ಷಗಳಷ್ಟು 'ಸಿನ್ನೆಗಳು' ನಷ್ಟಗೊಂಡಿವೆ. ಸುಭದ್ರದ ನಾಳೆಗಳ ಬಗ್ಗೆ ೧೯೮೬ರಷ್ಟು ಹಿಂದೆಯೇ ಆಲೋಚಿಸಿದ್ದ ಡಾ. ಮಹಿಷಿ ವರದಿ ಆಗ ಜಾರಿಗೆ ಬಂದಿದ್ದರೆ, ಲಕ್ಷಾಂತರ ಕನ್ನಡಿಗ ಕುಟುಂಬಗಳು ಉದ್ಯೋಗದ ಭದ್ರ ನೆಲೆಯಲ್ಲಿ ತಮ್ಮ ಭವಿಷ್ಯವನ್ನು ಸುಭದ್ರಗೊಳಿಸಿ ಕೊಳ್ಳುತ್ತಿದ್ದವು.

ಕನ್ನಡಿಗರಿಗೇ ಉದ್ಯೋಗಾವಕಾಶಗಳಲ್ಲಿ ಶೇ. ೮೦ರಷ್ಟು ಆದ್ಯತೆ ಎಂಬುದೇ ಡಾ. ಸರೋಜಿನಿ ಮಹಿಷಿ ವರದಿಯ ಮೂಲ ಆಶಯ. ಇದಕ್ಕೆ ತಾಯಿ ಬೇರು ಎಂತಲೂ ಕರೆದರೆ ನಡೆದೀತು. ೧೯೮೩ರಲ್ಲಿ ರಾಮಕೃಷ್ಣ ಹೆಗಡೆ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ನೇಮಕಗೊಂಡಿದ್ದ ಆಯೋಗ ಇದು. ಧಾರವಾಡ ಉತ್ತರ ಲೋಕಸಭಾ ಮತಕ್ಷೇತ್ರದಿಂದ ಕಾಂಗ್ರೆಸ್ಸಿನಿಂದ ಆಯ್ಕೆಗೊಂಡು ಇಂದಿರಾಗಾಂಧಿ ಸಂಪುಟದಲ್ಲಿ ಕೇಂದ್ರ ಸಚಿವೆಯೂ ಆಗಿದ್ದ ಡಾ. ಸರೋಜಿನಿ ಮಹಿಷಿ ಬಹುಮುಖ ಪ್ರತಿಭೆಯ ತಜ್ಞೆ; ಅವರ ಹೆಸರಿನ ಹಿಂದಿರುವ ಡಾಕ್ಟರ ಎಂಬ ಪದವಿ ಅವರಿಗೆ ಎರಡು ಬಾರಿ ದೊರೆತ 'ಡಾಕ್ಟರೇಟು' ಪ್ರಶಸ್ತಿಯ ಗೌರವದ ಸಂಕೇತ. ೧೯೮೦ರಲ್ಲಿ ಕಾಂಗ್ರೆಸ್ ಬಿಟ್ಟು ಆಗಿನ ಜನತಾ ಪಕ್ಷವನ್ನು ಡಾ. ಮಹಿಷಿ ಸೇರಿದ್ದರು. ರಾಮಕೃಷ್ಣ ಹೆಗಡೆ ಸಹ ಒಂದು ಕಾಲದ ಕಾಂಗ್ರೆಸ್ಸಿಗರೇ.

೪-೮-೧೯೮೩ರಲ್ಲಿ ಡಾ. ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ದೊರೆಯುವ ಬಗ್ಗೆ ಸಮಿತಿಯೊಂದು ಸ್ಥಾಪಿಸಲ್ಪಟ್ಟಿತು. ಸಮಿತಿಯಲ್ಲಿ ಪ್ರೊ. ಗೋಪಾಲಕೃಷ್ಣ ಅಡಿಗ, ಜಿ.ಕೆ. ಸತ್ಯ, ಜಿ. ನಾರಾಯಣಕುಮಾರ, ಕೆ. ಪ್ರಭಾಕರ ರೆಡ್ಡಿ, ನಿವೃತ್ತ ಐ.ಎ.ಎಸ್. ಅಧಿಕಾರಿ ಬಿ.ಎಸ್. ಹನುಮಾನ, ನಿವೃತ್ತ ಐ.ಎ.ಎಸ್. ಅಧಿಕಾರಿ ಹಾಗೂ ಖ್ಯಾತ ಸಾಹಿತಿ ಸಿದ್ದಯ್ಯ ಪುರಾಣಿಕ ಅವರಿದ್ದರು. ಈ ಸಮಿತಿ ೧೩-೬-೧೯೮೪ರಂದು ಮಧ್ಯಂತರ ವರದಿಯನ್ನು ಹಾಗೂ ೩೦-೧೨-೧೯೮೬ ರಂದು ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಒಟ್ಟು ೫೮ ಶಿಫಾರಸುಗಳನ್ನು ಸಮಿತಿ ಮಾಡಿತ್ತು. ಸುಮಾರು ಎರಡೂವರೆ ವರ್ಷ ಕಾಲ ಶ್ರಮ ವಹಿಸಿ ಹಲವೆಡೆ ಸಂಚರಿಸಿ ಅಮೂಲ್ಯ ಅಂಕಿ ಅಂಶಗಳನ್ನೆಲ್ಲಾ ಸಂಗ್ರಹಿಸಿ ಸಮಿತಿ ಸರ್ಕಾರಕ್ಕೆ ಸಲ್ಲಿಸಿತು.

ರಾಷ್ಟ್ರೀಯ ಐಕ್ಯತಾ ಪರಿಷತ್ತಿನಿಂದ ರಚಿಸಲಾದ ಉಪಸಮಿತಿಯೊಂದು ಸರ್ಕಾರಿ ಮತ್ತು ಕಂಪನಿ ವಲಯಗಳ ಉದ್ಯಮಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ದೊರೆಯುತ್ತಿರುವ ಉದ್ಯೋಗಾವಕಾಶಗಳ ಬಗ್ಗೆ ಪರಿಶೀಲನೆ ನಡೆಸಿತ್ತು. ಈ ಉಪಸಮಿತಿಯು ರಾಜ್ಯಗಳಲ್ಲಿ ಸ್ಥಳೀಯ ಅಭ್ಯರ್ಥಿಗಳು ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಾವಕಾಶ ದೊರೆಯದೆ ಇದ್ದುದರಿಂದ ಉಂಟಾದ ಅತೃಪ್ತಿಯನ್ನು ಗಮನಿಸಿ ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರಕಿಸುವಂತೆ ಶಿಫಾರಸು ಮಾಡಿತ್ತು. ಈ ಶಿಫಾರಸನ್ನು ರಾಷ್ಟ್ರೀಯ ಐಕ್ಯತಾ ಪರಿಷತ್ತು ೨೨-೬-೧೯೬೮ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತ್ತು. ಡಾ. ಮಹಿಷಿ ಸಮಿತಿಯ ಶಿಫಾರಸುಗಳು ಪರಿಷತ್ತಿನ ಶಿಫಾರಸುಗಳಿಗೆ ಅನುಗುಣವಾಗಿರುವವು. ಆದ್ದರಿಂದ ಈ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವದರ ಮೂಲಕ ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರ್ಕಾರ ನೋಡಿ ಕೊಳ್ಳಬೇಕು ಹಾಗೂ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕೆಂದು ಡಾ. ಸರೋಜಿನಿ ಮಹಿಷಿ ಅವರು ತಮ್ಮ ವರದಿಯ ಮೊದಲನೇ ಶಿಫಾರಸಿನಲ್ಲೇ ಹೇಳಿದ್ದರು.

ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗ ಪ್ರಮಾಣದಲ್ಲಿ ನಾಲ್ಕನೇ ಅಥವಾ ಡಿ ಗ್ರುಪ್ ಹುದ್ದೆಗಳಲ್ಲಿ ನೂರಕ್ಕೆ ನೂರರಷ್ಟು ಹುದ್ದೆಗಳು ಕನ್ನಡಿಗರಿಗೆ ಮೀಸಲಾಗಿರಬೇಕೆಂದು ಸಮಿತಿ ತನ್ನ ಎರಡನೇ ಶಿಫಾರಸಿನಲ್ಲಿ ಹೇಳಿತ್ತು. ವೇತನ ಶ್ರೇಣಿ ೧೨೫೦ ರೂ. (೧೯೮೧ರ ಪ್ರಮಾಣ) ತನಕ ಇರುವ ಹುದ್ದೆಗಳಲ್ಲಿ ಶೇ. ೮೦ರಷ್ಟು ಹಾಗೂ ಉಳಿದ ಮೆಲ್ಪಟ್ಟದ ನೇರ ನೇಮಕಾತಿಗಳಲ್ಲಿ ಶೇ. ೬೫ರಷ್ಟು ಹುದ್ದೆ ಮೀಸಲಾಗಿ ಇರಬೇಕೆಂದು ಸೂಚಿಸಿತ್ತು. ಯಾವ ಹುದ್ದೆಗಳಲ್ಲಿ ಈಗ ಇರುವ ಕನ್ನಡಿಗರ ಪ್ರಮಾಣ ಕಡಿಮೆ ಇದೆಯೋ ಅಂಥ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕೆಂದು ಸೂಚಿಸಿತ್ತು.

ರಾಜ್ಯ ಸರಕಾರಿ ವಲಯದ ಉದ್ಯಮಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಈ ನೀತಿಯ ಪರಿಶೀಲನೆ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಎಚ್ಚರ ವಹಿಸಬೇಕು. ಖಾಸಗಿ ಉದ್ಯಮಗಳು ರಾಜ್ಯ ಸರ್ಕಾರದಿಂದ ನೆಲ, ಜಲ ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವದರಿಂದ ಅವುಗಳ ಮೇಲೆ ಒತ್ತಡ ತರುವದು ಸಾಧ್ಯವಿದೆ. ಇಂಥ ಉದ್ಯಮಗಳಲ್ಲಿ ಉನ್ನತ ಮಟ್ಟದ ಆಡಳಿತ ಹುದ್ದೆಗಳನ್ನು ಅವಶ್ಯ ಬಿದ್ದಲ್ಲಿ ಬಿಟ್ಟು ಉಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸುವಂತೆ ಕಡ್ಡಾಯ ಮಾಡಬೇಕು. ಉದ್ಯಮಗಳಲ್ಲಿ ಅಪ್ರೆಂಟಿಸುಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆದೇಶಗಳನ್ನು ಹೊರಡಿಸಬೇಕು. ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಕೂಡಾ ಇದೇ ಪದ್ಧತಿ ಅನುಸರಿಸಬೇಕು.

ಹೀಗೆ ಮಹಿಷಿ ಸಮಿತಿ ತಮ್ಮ ಮೊದಲ ಆರು ಶಿಫಾರಸುಗಳಲ್ಲಿ ವರದಿಯ ಸಮಗ್ರ ಅಂಶವನ್ನೇ ಪ್ರತಿಪಾದಿಸಿದೆ.

ಈ ಶಿಫಾರಸುಗಳೆಲ್ಲಾ ಕರ್ಣಾನಂದಕರವಾದವುಗಳು. ಹರ್ಷೋಲ್ಲಾಸಗಳನ್ನು ಉಂಟು ಮಾಡಬಲ್ಲವು. ಸಂತೃಪ್ತಿಯ ಅಲೆಗಳನ್ನು ಹರಿಯಬಿಡಬಲ್ಲವಾಗಿದ್ದವು. ಇದು ಒಂದು ವೇಳೆ ಅನುಷ್ಠಾನಗೊಂಡಿದ್ದಲ್ಲಿ ಕೇಂದ್ರ ಹಾಗೂ ರಾಜ್ಯ ವಲಯಗಳಲ್ಲಿ ಕನ್ನಡಿಗರ ಸಾಮ್ರಾಜ್ಯವೇ ಜಾರಿಗೊಳ್ಳುತ್ತಿತ್ತು. ಮತ್ತೊಂದು ವಿಜಯನಗರ ಸಾಮ್ರಾಜ್ಯವೇ ನೆಲೆಗೊಂಡಂತಾಗುತ್ತಿತ್ತು. ಆದರೆ ಕನ್ನಡಿಗರ ಕರ್ಮಕಥೆ: ಇಂಥ ವ್ಯವಸ್ಥೆ ಜಾರಿಗೆ ಬರಲೇ ಇಲ್ಲ.

ಡಾ. ಮಹಿಷಿ ಸಮಿತಿ ಶಿಫಾರಸುಗಳನ್ನು ಜಾರಿಗೊಳಿಸದೇ ಇದ್ದಿದ್ದಕ್ಕೆ ಈವರೆಗಿನ ಎಲ್ಲ ಮುಖ್ಯಮಂತ್ರಿಗಳು ಹೊಣೆಗಾರರು. ಪಕ್ಷಾತೀತವಾಗಿ ನೋಡಿದಾಗ ಮಹಾನ್ ಮುಖ್ಯಮಂತ್ರಿಗಳೇ ಈ ಅವಧಿಯಲ್ಲಿ ಆಗಿ ಹೋಗಿದ್ದಾರೆ. ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ವೀರೇಂದ್ರ ಪಾಟೀಲ, ಬಂಗಾರಪ್ಪ, ವೀರಪ್ಪ ಮೊಯಿಲಿ, ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್, ಧರ್ಮಸಿಂಗ್ ಹಾಗೂ ಸುವರ್ಣ ಕರ್ನಾಟಕ ವರ್ಷದ ಕುಮಾರಸ್ವಾಮಿ ಸೇರಿದಂತೆ ಎಲ್ಲಾರೂ ಘಟಾನುಘಟಿಗಳೇ. ಕನ್ನಡಿಗರೇ. ಇವರೆಲ್ಲರ 'ಕರ್ನಾಟಕತ್ವ'ವನ್ನು ಪ್ರಶ್ನಿಸುವದು ನನ್ನ ಉದ್ದೇಶವಲ್ಲ.

ಆದರೆ ಮಹಿಷಿ ವರದಿ ಜಾರಿಗೊಳಿಸುವಲ್ಲಿ ಇವರಾರೂ ತಮ್ಮ ರಾಜಕೀಯ ಇಚ್ಛಾ ಶಕ್ತಿಯನ್ನೇಕೆ ಪ್ರದರ್ಶಿಸಲಿಲ್ಲ? ಎಂಬುದೆ ನಿಜಕ್ಕೂ ಖೇದಕರ ಅಂಶ. ಇಂಥ ದೌರ್ಬಲ್ಯ ನೆರೆ ರಾಜ್ಯಗಳ ಮುಖ್ಯಮಂತ್ರಿಗಳಲ್ಲಿ ಕಂಡು ಬರುತ್ತಿಲ್ಲ ಎಂಬುದೇ ಹೆಚ್ಚಿನ ದುಃಖಕ್ಕೆ ಈಡು ಮಾಡುತ್ತಿದೆ.

ಆರ್ಥಿಕ ನೀತಿ:

೧೯೯೨ರಿಂದ ಮುಕ್ತ ಆರ್ಥಿಕ ನೀತಿ ದೇಶದಲ್ಲಿ ಜಾರಿಗೆ ಬಂದಾಗಿನಿಂದ ಕೇಂದ್ರ ಸರ್ಕಾರ ನೇತೃತ್ವದ ಉದ್ಯಮಗಳಲ್ಲಿ ಹೆಚ್ಚಿನ ಸ್ಥಿತ್ಯಂತರ ಆಗತೊಡಗಿತು. ನಷ್ಟದಲ್ಲಿರುವ ಉದ್ಯಮಗಳನ್ನು ಬಂದು ಮಾಡುವ ಇಲ್ಲವೇ ತನ್ನ ಹಣವನ್ನು ವಾಪಸು ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ಕ್ರಮದಿಂದಾಗಿ ಕೇಂದ್ರ ಉದ್ದಿಮೆಗಳಲ್ಲಿ ಸ್ಥಿತಿ ಡೋಲಾಯಮಾನವಾಗ ತೊಡಗಿತು. ಇದರ ಪರಿಣಾಮ ನೇಮಕಾತಿಗಳ ಮೇಲೂ ಆಯಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಸಹ ಅವಶ್ಯಕ ಹುದ್ದೆಗಳನ್ನು ಬಿಟ್ಟು ಉಳಿದ ಎಲ್ಲಾ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮಗಳನ್ನು ಬಂದು ಮಾಡಿತು ಇಲ್ಲವೆ ಮುಂದೆ ಹಾಕತೊಡಗಿತು. ಇಂಥ ಸ್ಥಿತಿಯಲ್ಲಿ ಒಂದು ವೇಳೆ ಮಹಿಷಿ ಸಮಿತಿ ಶಿಫಾರಸುಗಳೆಲ್ಲಾ ಜಾರಿ ಯಾಗಿದ್ದರೂ ಸಹ ಹುದ್ದೆ ಅವಕಾಶಗಳೆ ಸ್ಥೂಲವಾಗಿ ಇಲ್ಲದೆ ಇದ್ದಿದ್ದರಿಂದ ಕನ್ನಡಿಗರಿಗೆ ಪ್ರಯೋಜನ ಸರಿಯಾಗಿ ಆಗುತ್ತಿತ್ತೇ? ಎಂಬುದು ಪ್ರಶ್ನಾರ್ಹ ಆಗುತ್ತದೆ.

ಮೂಗುದಾರ ಎಲ್ಲಿದೆ?

ಇದೆಲ್ಲಾ ತಾತ್ವಿಕ ನೋಟದ ಪ್ರಶ್ನೆ. ಆದರೆ ವ್ಯಾವಹಾರಿಕವಾಗಿ ನಡೆದಿದ್ದೇ ಬೇರೆ. ಕನ್ನಡಿಗರನ್ನು ಹತ್ತಿಕ್ಕುವ ಕ್ರಮ ಎಗ್ಗಿಲ್ಲದೇ ಮುಂದುವರೆಯಿತು. ಅದು ಇಂದಿಗೂ ಸಹ ಯಾವದೇ ಮೂಗುದಾರ ಇಲ್ಲದೇ ಮುನ್ನಡೆದಿದೆ. ರೇಲ್ವೆ, ಸಾರ್ವಜನಿಕ ಉದ್ಯಮದಲ್ಲಿ ಅಗ್ರಪಟ್ಟ

ಗಳಿಸಿರುವ ಇಲಾಖೆ ಕನ್ನಡಿಗರನ್ನು ಕಡೆಗಿಸುತ್ತ ಬಂದಿರುವದಕ್ಕೆ ಇತಿಹಾಸವೇ ಇದೆ. ಬಹುಶಃ ಭಾರತದಲ್ಲಿ ಇಷ್ಟೊಂದು ಕನಿಷ್ಠ ಮಟ್ಟದ ಸೌಲಭ್ಯ ಹೊಂದಿದ ಮತ್ತೊಂದು ರಾಜ್ಯ ಇರಲಾರದು. ಇತ್ತೀಚೆಗಷ್ಟೇ ರೇಲ್ವೆ ಇಲಾಖೆ ತಮಿಳು ಬೆಳೆಸಿ ಕನ್ನಡ ಅಳಿಸಿ ಎನ್ನುವ ಧೋರಣೆ ಮೂಲಕ ಕನ್ನಡ ಭಾಷೆ ಮತ್ತು ಬರಹಕ್ಕೆ ಕಂಟಕಪ್ರಾಯವಾಗಿದೆ. ದಕ್ಷಿಣ ಭಾರತದ ರೇಲ್ವೆ ವಲಯ ಇಡಿಯಾಗಿ ತಮಿಳು ಹಾಗೂ ತೆಲುಗು ಕಪಿ ಮುಷ್ಠಿಯಲ್ಲಿಯೇ ಇದೆ. ನೈಋತ್ಯ ವಲಯ ಸಿಕ್ಕಿತೆಂದು ಸಂಭ್ರಮದಲ್ಲಿ ಕರ್ನಾಟಕ ಇದ್ದಾಗ ಹುಬ್ಬಳ್ಳಿ ವಿಭಾಗದಿಂದ ಅಚ್ಚ ಕನ್ನಡಿಗ ಪ್ರದೇಶಗಳಾದ ತೋರಣಗಲ್ಲು ಹಾಗೂ ಬಳ್ಳಾರಿ ಭಾಗಗಳ್ನು ಬೇರ್ಪಡಿಸುವ ಕುತಂತ್ರ ರೂಪಿಸಲಾಯಿತು. ಆಗ ಬಳ್ಳಾರಿ ಭಾಗದ ಕನ್ನಡ ಧುರೀಣರೆಲ್ಲ ಸತ್ಯಾಗ್ರಹ ಮಾಡುವ ಮೂಲಕ ಆ ಭಾಗಗಳನ್ನು ಪುನಃ ಹುಬ್ಬಳ್ಳಿ ವಿಭಾಗಕ್ಕೆ ಉಳಿಸಿಕೊಳ್ಳಲಾಯಿತು. ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಒಂದು ಗಾದೆ ಮಾತು ಇದೆ. 'ಬಿಲ್ಲಿ ಮಂಗ್ಯಾ ಎರಡು ಬಿಲ್ಲಿ ಬೆಲ್ಲಾ ತಿಂತು'. ಇದರಂತೆಯೇ ಕನ್ನಡಿಗರ ಹಕ್ಕುಗಳು ರೇಲ್ವೆಯಿಂದ ಪಡೆಯುವಾಗ ಆಗ ತೊಡಗಿದೆ.

ನೈಋತ್ಯ ರೇಲ್ವೆ ವಲಯದ ಪ್ರಧಾನ ಕಚೇರಿ ಹುಬ್ಬಳ್ಳಿಗೆ ಬಂದರೂ ರೇಲ್ವೆ ನೇಮಕಾತಿ ಮಂಡಳಿ (ಆರ್.ಆರ್.ಬಿ.) ಕಚೇರಿ ಇನ್ನು ಬೆಂಗಳೂರಿನಲ್ಲಿ ಇದೆ. ಇದು ನ್ಯಾಯವಾಗಿ ವಲಯದ ಪ್ರಧಾನ ಕಚೇರಿ ಇರುವ ಹುಬ್ಬಳ್ಳಿಯಲ್ಲೇ ಇರಬೇಕು. ಇನ್ನು ಮಹಿಷಿ ವರದಿಯ ಶಿಫಾರಸು ನಂ. ೬ರ ಪ್ರಕಾರ ಆರ್.ಆರ್.ಬಿ.ಯ ಮುಖ್ಯಸ್ಥರು ಕನ್ನಡಿಗರೇ ಇರಬೇಕೆಂದು ಹೇಳುತ್ತಿದೆ. ಆದರೆ ಇತ್ತೀಚಿನ ಆಡಳಿತದಲ್ಲಿ ಆರ್.ಆರ್.ಬಿ.ಗೆ ಕನ್ನಡಿಗರು ಮುಖ್ಯಸ್ಥರಾದ ಉದಾಹರಣೆಗಳೇ ಕ್ವಚಿತ್ತು!

ಈಗೀಗ ಹಿರಿಯ ಅಧಿಕಾರಿಗಳನ್ನೇ ಆರ್.ಆರ್.ಬಿ.ಗೆ ಮುಖ್ಯಸ್ಥರನ್ನಾಗಿ ಮಾಡಲಾಗುತ್ತಿದೆ. ದುರಂತವೆಂದರೆ ರೇಲ್ವೆ ಇಲಾಖೆಯ ಹಿರಿಯ ಹುದ್ದೆಗಳು ಸೇರಿದಂತೆ ಎಲ್ಲ ವರ್ಗಗಳ ನೌಕರರಲ್ಲಿ ಕನ್ನಡಿಗರ ಪ್ರಮಾಣ ಉಳಿದ ರಾಜ್ಯಗಳಿಗಿಂತಲೂ ಕಡಿಮೆ ಇದೆ. ಇದರಿಂದಾಗಿ ಆರ್.ಆರ್.ಬಿ.ಗೆ ಕನ್ನಡೇತರರೇ ಮುಖ್ಯಸ್ಥರಾಗುವದರಿಂದ ಕನ್ನಡಿಗರ ಆಯ್ಕೆಯನ್ನು ವ್ಯವಸ್ಥಿತ ವಾಗಿ ಹತ್ತಿಕ್ಕಲಾಗುತ್ತಿದೆ. ಹಲವಾರು ದಶಕಗಳಿಂದಲೂ ಇದೇ ಪದ್ಧತಿ ಬಳಸಲಾಗುತ್ತದೆ. ಪೂಣಚ್ಚ, ಕೆ. ಹನುಮಂತಯ್ಯ, ಸಿ.ಕೆ. ಜಾಫರ ಶರೀಫ, ಬಸನಗೌಡ ಪಾಟೀಲ ಯತ್ನಾಳ ಅವರಂತ ಘಟಾನುಘಟಿಗಳು ರೇಲ್ವೆ ಸಚಿವರಾಗಿದ್ದರೂ ಸಹ ಕನ್ನಡಿಗರ ಆಯ್ಕೆಯಲ್ಲೇನು ಗಮನಾರ್ಹ ಪ್ರಗತಿ ಆಗಲಿಲ್ಲ. ಅದರ ಬದಲು ರಾಮ ವಿಲಾಸ ಪಾಸ್ವಾನ್, ನಿತೀಶಕುಮಾರ, ಈಗಿನ ಲಾಲೂ ಪ್ರಸಾದ ಯಾದವ ಅವರಂಥ ಬಿಹಾರಿ ಬಾಬುಗಳು ರೇಲ್ವೆ ಸಚಿವರಾದಾಗ ಬಿಹಾರಿಗಳ ಆಯ್ಕೆ ಸಲೀಸಾಗಿ ನಡೆದು ಬಿಟ್ಟಿತು. ರೇಲ್ವೆ ಇಲಾಖೆ ಅಂದರೆ ಬಿಹಾರಿಗಳದ್ದೇ ಆಗಿಬಿಟ್ಟಿತು. ರೇಲ್ವೆಯಲ್ಲಿ ಡಿ ಗ್ರುಪ್ (ಕಲಾಸಿ) ಮತ್ತು ಸಿ ಗ್ರುಪ್ ಅಂತಹ ಕೆಳ ದರ್ಜೆ ಹುದ್ದೆಗಳಿಗೂ ದೂರದ ಬಿಹಾರಿಗಳು ಹುಬ್ಬಳ್ಳಿ ಮತ್ತು ಬೆಂಗಳೂರಿಗೆ ಬರತೊಡಗಿದರು. ಈ ಬಗ್ಗೆ ಪ್ರಶ್ನಿಸಿದಾಗ ಭಾವೈಕ್ಯತೆ ಭಾಷಣ ಮಾಡಿ ಬಾಯಿ ಮುಚ್ಚಿಸಲಾಗುತ್ತಿತ್ತು. ಇದು ಎಲ್ಲಿಯವರೆಗೆ ಮುಂದುವರೆಯಿತೆಂದರೆ ನೈಋತ್ಯ ರೇಲ್ವೆ ವಿಭಾಗದ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆಗೆ ಬಿಹಾರಿಗಳು ಹುಬ್ಬಳ್ಳಿಗೆ ಬಂದಾಗ ಸ್ಥಳೀಯರು ಗಲಾಟೆ ಮಾಡಿದ್ದರಿಂದ ಪರೀಕ್ಷೆಗಳನ್ನು ಮುಂದೂಡಲಾಗಿತ್ತು.

ಕನ್ನಡಿಗರಾರು?

ಇಂಥ ಪ್ರಶ್ನೆ ವಿಚಿತ್ರ ಎಂಬಂತೆ ಕರ್ನಾಟಕಕ್ಕೇ ಮಾತ್ರ ಸೀಮಿತವಾಗುತ್ತಿದೆ. ಕನ್ನಡಿಗರು ಕಲಾಸಿ ಅಂತಹ ಡಿ ಗ್ರುಪ್ ಹುದ್ದೆಗಳಿಗೆ ದೂರದ ಸಿಕಂದರಾಬಾದ ಇಲ್ಲವೇ ಚೆನ್ನೈಗೆ ಪರೀಕ್ಷೆಗೆ ತೆರಳಿದರೆ ಅಲ್ಲಿಯ ಸ್ಥಳಿಕರೇ ಥಳಿಸಿ ಹೊರಗಟ್ಟಿದ ಉದಾಹರಣೆಗಳಿವೆ. ಕನ್ನಡಿಗರ ಅಪಾರ ಸಂಯಮ ತಾಳ್ಮೆಯ ದುರ್ಲಾಭವನ್ನು ಮೊದಲಿನಿಂದಲೂ ತೆಲುಗರು, ತಮಿಳರು ಪಡದಂತೆ ಈಗ ಬಿಹಾರಿಗಳು ಪಡೆಯುತ್ತಿದ್ದಾರೆ. ಇದಕ್ಕೆ ಕೊನೆ ಎಂಬುದೇ ಇಲ್ಲ. ಮಹಿಷಿ ಆಯೋಗದ ಶಿಫಾರಸುಗಳ ಪ್ರಕಾರ ಶೇ. ೮೦ರಷ್ಟು ಹುದ್ದೆಗಳು ನೈಋತ್ಯ ರೇಲ್ವೆಯ ವಲಯದಲ್ಲಿ ಬರಬೇಕು. ಆದರೆ ಈಗ ಅಲ್ಲಿ ಅರ್ಧದಷ್ಟಾದರೂ ಜನ ಕನ್ನಡಿಗರು ಇರುವರೇ ಎಂಬುದು ಸಂಶಯಾಸ್ಪದ. ವಿವಿಧ ಕೇಂದ್ರ ವಲಯ, ಉದ್ದಿಮೆಗಳಲ್ಲಿಯ ಹುದ್ದೆಗಳಿಗೆ ಈವರೆಗೆ ಕನ್ನಡಿಗರ ನೇಮಕಾತಿ ವಿಷಯದಲ್ಲಿ ಆದ ಅನ್ಯಾಯ ಅಪಾರ. ಕನ್ನಡಿಗರ ಎರಡು ತಲೆಮಾರುಗಳೇ ಏಕೀಕರಣದ ನಂತರ ಇಂಥ ವಂಚನೆಗೆ ಗುರಿಯಾಗಿವೆ. ನಮ್ಮನ್ನಾಳುವ ನಮ್ಮ ಪ್ರತಿನಿಧಿಗಳು, ವಿಶೇಷತಃ ಸಂಸತ್ ಸದಸ್ಯರು ಸಚಿವರ ಉದಾಸೀನ ಮನೋಭಾವನೆ ಯಿಂದ ಇಂತ ಅನ್ಯಾಯ ಮಾಡುವ ಪ್ರವೃತ್ತಿ ಪರರಾಜ್ಯಗಳಿಗೆ ಸಲೀಸಾಗತೊಡಗಿದೆ. ಬಿಹಾರಿಗಳಂತೆ, ತೆಲುಗರಂತೆ, ತಮಿಳರಂತೆ 'ಬಿಸಿಗೆ ಹಿಡಿದ ಬೆಣ್ಣೆ ಕರಗಿಸಿ ತುಪ್ಪ' ಪಡೆಯುವ ಪ್ರಚಲಿತ ರೀತಿ ನೀತಿಗಳನ್ನು ಕನ್ನಡಿಗರು ಕೊನೆಯ ಪ್ರಯತ್ನ ಎಂಬಂತೆ ಮಾಡಬೇಕಾಗಿದೆ. ತಾಂತ್ರಿಕ ವಿಷಯಗಳ ವಿವೇಚನೆ, ವಿಶ್ಲೇಷಣೆ ಜೊತೆ ಜೊತೆಗೇ 'ಬಿಸಿ ಮುಟ್ಟಿಸುವ' ವರ್ತನೆಯನ್ನು ಕನ್ನಡಿಗರು ಅನಿವಾರ್ಯವಾಗಿ ಕಲಿಯಬೇಕಾಗಿದೆ.

ಕನ್ನಡ ನೆಲ, ಜಲ, ಭಾಷೆಗಳಿಗೆ ಆದ ಅನ್ಯಾಯಗಳಂತೆಯೇ ಕೇಂದ್ರ ಸರ್ಕಾರದ ನಿಯಂತ್ರಣ ದಲ್ಲಿರುವ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಸೈನ್ಯ, ವಾಯುದಳ, ನಾವಿಕಪಡೆ ಮುಂತಾದ ಉದ್ದೆಗಳಲ್ಲಿಯೂ ಕನ್ನಡಿಗರ ಸಂಖ್ಯೆ ಬಹಳ ಕಡಿಮೆ ಇದೆ. ಇದರ ಪ್ರಯೋಜನ ವನ್ನು ಉಳಿದ ಭಾಷಿಕರು ಮಾಡಿಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ನಮ್ಮನ್ನಾಳುವ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಬೇರೆ ರಾಜ್ಯಗಳ ಅದರಲ್ಲೂ ಅಚ್ಚರಿ ಹುಟ್ಟಿಸುವಂತೆ ಉತ್ತರ ಭಾರತೀಯರ ಪಾಲು ಹೆಚ್ಚಿದೆ. ಇದಕ್ಕೆ ಅವರಿಗೆ ದಿಲ್ಲಿ ಬಹಳ ಸಮೀಪ ಇದೆ ಎಂಬ ಅರ್ಥ ಬರುವದಿಲ್ಲವೇ?

ದುರ್ಬಲ ಲಾಬಿ:

ದೇಶದ ರಾಜಧಾನಿ ದಿಲ್ಲಿಯಲ್ಲಿ ಕರ್ನಾಟಕದ ಲಾಬಿ ಬಹಳ ದುರ್ಬಲ ವಾಗಿದೆ. ಇದು ಇಂಥದೆ ಪಕ್ಷಕ್ಕೆ ಅನ್ವಯಿಸುವುದಿಲ್ಲ, ಸಾರಾಸಗಟಾಗಿ ಕರ್ನಾಟಕದ ಯಾವದೇ ವಲಯದ ಧ್ವನಿ ಅಲ್ಲಿ ಕ್ಷೀಣಗೊಂಡಿದೆ. ಓಗಾಗಿ ಕರ್ನಾಟಕ ಸಾಮಂತ ರಾಜ್ಯ ಇಲ್ಲವೆ ವಸಾಹತು ಪ್ರದೇಶವಾಗಿದೆ. ಬೇರೆ ರಾಜ್ಯದ ಅಧಿಕಾರಿಗಳು ಕನ್ನಡಿಗರ ಮೇಲೆ ಸವಾರಿ ಮಾಡಲಿಕ್ಕೆಂದೇ ಬಂದಿರುವವರ ಹಾಗಿದ್ದಾರೆ. ಹೆಚ್ಚಿನವರಲ್ಲಿ ಕರ್ನಾಟಕ ಸಂಗಡ ಯಾವದೇ ಭಾವನಾತ್ಮಕ

ಸಂಬಂಧಗಳಿರುವುದಿಲ್ಲ. ಕಾಟಾಚಾರದ ನೌಕರಿಯ ಹಾಗೆಯೇ ಅವರು ವರ್ತಿಸುವದುಂಟು. ಗಡಿ ಹೋರಾಟ ಇರಲಿ, ಕಾವೇರಿ ಕೃಷ್ಣಾ ವಿವಾದ ಇರಲಿ, ಶಾಸ್ತ್ರೀಯ ಭಾಷೆಯ ಸ್ಥಾನಮಾನ ಇರಲಿ ಕನ್ನಡಿಗರಲ್ಲಿ ಹಕ್ಕಿಸಿಂದ ಹೋರಾಡಿ ಪಡೆಯುವ ಶಕ್ತಿ ಇಲ್ಲವೆಂದು ದಿಲ್ಲಿಯ ಪ್ರಭುಗಳು ಮನಗಂಡಿದ್ದಾರೆ. ಹಾಗಂದೇ ಪದೇ ಪದೇ ಕರ್ನಾಟಕ ದಿಲ್ಲಿ ಪ್ರಭುಗಳಿಂದ ಹಿಂಸೆ ಅನುಭವಿಸುವದು.

ಈ ಎಲ್ಲ ಹಿನ್ನಲೆಯಲ್ಲಿಯೇ ಡಾ. ಮಹಿಷಿ ಆಯೋಗದ ಶಿಫಾರಸುಗಳಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕಿದೆ.

ಕೊನೆಯದಾಗಿ ನಾನು ಕೆಲವು ಸಲಹೆಗಳನ್ನು ಈ ಮೂಲಕ ಕೊಡ ಬಯಸುತ್ತೇನೆ.

೧ ವೈಜ್ಞಾನಿಕವಾಗಿ ಈ ವರೆಗೆ ಕೇಂದ್ರ ರಾಜ್ಯ ವಲಯಗಳಲ್ಲಿ ನೇಮಕಾತಿ ಕನ್ನಡಿಗರಿಗೆ ಆಗಿರುವ ಅನ್ಯಾಯ ನೆರ ರಾಜ್ಯಗಳೊಂದಿಗೆ ಹೋಲಿಕೆ ಮಾಡಬೇಕು, ಹಾಗೂ ಜನಸಂಖ್ಯೆ ಆಧಾರದ ಮೇಲೆ ಎಷ್ಟು ಪ್ರತಿಶತ ಕಡಿಮೆ ಆಗಿದೆಯೋ ಅದರ ಅಂತರ ತುಂಬುವ ಸಲುವಾಗಿ ಸರ್ವ ರಾಜಕೀಯ ಇಚ್ಛಾಶಕ್ತಿ ಬಳಸಿ ಕೇಂದ್ರದ ಮೇಲೆ ಒತ್ತಡ ತರುವದು.

೨ ರೇಲ್ವೆ ನೇಮಕಾತಿ ಮಂಡಳಿ ಅಧ್ಯಕ್ಷರನ್ನಾಗಿ ಕಡ್ಡಾಯವಾಗಿ ಕನ್ನಡಿಗರನ್ನೇ ಮಾಡಬೇಕು. ದೇಶಾದ್ಯಂತ ರೇಲ್ವೆ ನೇಮಕಾತಿ ಪರೀಕ್ಷೆಗಳು ಒಂದೇ ದಿನ ನಡೆಯುವಂತೆ ಮಾಡಬೇಕು. ಇದರಿಂದ ಒಂದು ರಾಜ್ಯ ವಲಯ ಇನ್ನೊಂದೆಡೆ ಲಗ್ಗೆ ಹಾಕುವ ಕ್ರಮ ಎಷ್ಟೋ ತಪ್ಪಿದಂತಾಗುತ್ತದೆ.

೩ ನೈಋತ್ಯ ರೇಲ್ವೆ ವಲಯದ ಹಿರಿಯ ಹುದ್ದೆಗಳಿಗೆ ಕಡ್ಡಾಯವಾಗಿ ಕನ್ನಡಿಗರನ್ನೇ ನೇಮಿಸಬೇಕು. ಈ ಬಗ್ಗೆ ದಿಲ್ಲಿ ಮಟ್ಟದಲ್ಲಿ ನಮ್ಮ ಸಂಸತ್ ಸದಸ್ಯರ ಒತ್ತಡ ಹೆಚ್ಚಾಗಬೇಕು.

೪ ಸರ್ಕಾರಿ ನೇಮಕಾತಿಗಳು ಕಡಿಮೆ ಆಗುತ್ತಿರುವ ಇಂದಿನ ದಿನಗಳಲ್ಲಿ ಖಾಸಗಿ ವಲಯಗಳಲ್ಲಿ ಕನ್ನಡಿಗರ ನೇಮಕಾತಿ ಬಗ್ಗೆ ಕಡ್ಡಾಯ ಕಾನೂನುಗಳೇ ಇಲ್ಲ. ರಾಜ್ಯದ ನೆಲ ಜಲ ವಿದ್ಯುತ್ ರಿಯಾಯಿತಿ ದರಗಳಲ್ಲಿ ಪಡೆಯುವ ಖಾಸಗಿ ಕಂಪನಿಗಳು ಕನ್ನಡಿಗರ ನೇಮಕಾತಿ ಬಗ್ಗೆ ಉಪೇಕ್ಷೆ ಸಲ್ಲಿಸುವದರ ವಿರುದ್ಧ ಕ್ರಮ ಕೈಗೊಳ್ಳುವದು ಅನಿವಾರ್ಯ. ಇಲ್ಲದಿದ್ದರೆ, 'ಮನೆಗೆ ಮಾರಿ ಪರರಿಗೆ ಉಪಕಾರಿ' ಧೋರಣೆಯನ್ನು ನಮ್ಮದೇ ಸರ್ಕಾರ ಅನುಸರಿಸಿದಂತಾಗ ಬಲ್ಲದು.

೫ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಇರುವ ಐ.ಟಿ. ಉದ್ಯಮಗಳಲ್ಲಿ ಕನ್ನಡಿಗರ ನೇಮಕಾತಿ, ಸಂಬಳ, ಸಾರಿಗೆ ಅವರು ಹೊಂದಿರುವ ಹುದ್ದೆಗಳು, ಪ್ರತಿಶತ ಪ್ರಮಾಣ ಇವುಗಳ ಬಗ್ಗೆ ವೈಜ್ಞಾನಿಕವಾಗಿ ವರದಿ ತಯಾರಿಸಿ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಸರ್ಕಾರ ನಿರ್ದಾಕ್ಷಿಣ್ಯ ನಿರ್ಧಾರ ಕೈಕೊಳ್ಳಬೇಕು.

೬ ರಾಜ್ಯದಲ್ಲಿ ಪ್ರತಿವರ್ಷ ಸುಮಾರು ೪೦ ಸಹಸ್ರ ಎಂಜಿನಿಯರಿಂಗ್ ಪದವೀಧರರು ಹೊರಬರುತ್ತಾರೆ. ಇವರ ಉದ್ಯೋಗವಕಾಶಗಳ ಬಗ್ಗೆ ಐ.ಟಿ. ವಲಯದಲ್ಲಿ ಸರ್ಕಾರ ಮಧ್ಯಸ್ಥ

ಗಾರರೆಂದು ಕಾರ್ಯನಿರ್ವಹಿಸುವದು ಉತ್ತಮ. ಇಲ್ಲವೆ ಹೆಚ್ಚು ಕಡಿಮೆ ನಿಷ್ಕ್ರಿಯಗೊಂಡಿರುವ ಉದ್ಯೋಗ ವಿನಿಮಯ ಕೇಂದ್ರಗಳನ್ನು ಚುರುಕುಗೊಳಿಸಿ ಈ ನಿಟ್ಟಿನಲ್ಲಿ ಸಜ್ಜುಗೊಳಿಸಬೇಕು.

೭ ಐ.ಎ.ಎಸ್., ಐ.ಪಿ.ಎಸ್. ಹುದ್ದೆಗಳಲ್ಲಿ ಕನ್ನಡಿಗರ ಪಾಲು ಇತರ ರಾಜ್ಯಗಳಿಗಿಂತ ಕಡಿಮೆ ಇದೆ. ಈ ನಿಟ್ಟಿನಲ್ಲಿ ಅಧ್ಯಯನ ನಡೆಸಿ ಹೆಚ್ಚೆಚ್ಚು ಕನ್ನಡಿಗರು ಈ ದಿಶೆಯಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು..

೮) ಕೃಷಿ ಕಟ್ಟಡ ನಿರ್ಮಾಣ ನಿರ್ವಹಣೆ ಪೌರಕಾರ್ಮಿಕರು ಮತ್ತಿತರ ವಲಯಗಳಲ್ಲಿ ಪರರಾಜ್ಯದ ಗುತ್ತಿಗೆ ಕಾರ್ಮಿಕರು ರಾಜ್ಯಕ್ಕೆ ಆಗಮಿಸಿ ಕೆಲ ವರ್ಷಗಳ ತರುವಾಯ ಕನ್ನಡಿಗರೇ ಆದ ದಾಖಲೆ ನಿರ್ಮಿಸಿಕೊಳ್ಳುತ್ತಾರೆ. ಇದರಿಂದ ಸ್ಥಳೀಯರಿಗೆ ಸಿಕ್ಕಬೇಕಾದ ನ್ಯಾಯಬದ್ಧ ಹಕ್ಕುಗಳು ನಿರಾಕರಿಸಿದಂತಾಗುತ್ತಿದೆ. ಇದಕ್ಕೂ ಮತ ರಾಜಕೀಯಕ್ಕೂ ನಂಟು ಇರುವುದರಿಂದ ಸುಲಭವಾಗಿ ಇಂಥವರು ರಾಜಕೀಯ ಶಕ್ತಿ ಗಳಿಸಿಕೊಳ್ಳುತ್ತಾರೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಅಗತ್ಯ ಮತ್ತು ಅವಶ್ಯಕ. ಕೋಲಾರ, ಬೆಂಗಳೂರು, ಬಳ್ಳಾರಿ ಹಾಗೆಯೇ ಹುಬ್ಬಳ್ಳಿ ಅಂತಹ ಕನ್ನಡದ ಗಂಡು ಮೆಟ್ಟಿನ ಜಾಗೆಯಲ್ಲೂ ಕನ್ನಡ ಬಾರದವರೂ ಜನ ಪ್ರತಿನಿಧಿಗಳಾಗಿ ಮಹಾಪೌರರಾಗಿ ಕಾರ್ಯನಿರ್ವಹಿಸಿದ್ದಾರೆ. 'ಕನ್ನಡಿಗರು' ಎಂಬ ವ್ಯಾಖ್ಯೆಗೆ ಕನ್ನಡ ಭಾಷೆಯ ಪರೀಕ್ಷೆ ಅವಶ್ಯಕ ಎಂಬ ಕಡ್ಡಾಯದ ಜೊತೆಗೆ ಇನ್ನಷ್ಟು ತೀಕ್ಷ್ಣ ನಿಬಂಧನೆಗಳನ್ನು ಸೇರಿಸುವದು ಉತ್ತಮ.

ಕನ್ನಡಿಗರೆಂದರೆ ಯಾರು?

ಕನ್ನಡ ಮಣ್ಣಲ್ಲೇ ಜನಿಸಿ ಕರ್ನಾಟಕದಲ್ಲೇ ವಾಸಿಸಿ ಕನ್ನಡ ಭಾಷೆಯನ್ನೇ ಮಾತನಾಡುತ್ತ ತಾತ ಮುತ್ತಾತರ ಕಾಲದಲ್ಲೂ ಇಲ್ಲೇ ಇರುವ ಕನ್ನಡಿಗರ ಹಕ್ಕಿನ ತುತ್ತನ್ನು ನೇಮಕಾತಿಗಳಲ್ಲಿ ಕಸಿಯಲಾಗುತ್ತಿದೆ.

ಬೆಂಗಳೂರಿನಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರು. ಕರ್ನಾಟಕ ಏಕೀಕರಣ ನಂತರ ಹಾಗೂ 'ಸಿಲಿಕಾನ್ ವ್ಯಾಲಿ' ಪಟ್ಟ ಸಿಕ್ಕನಂತರ ಕನ್ನಡಿಗರು ಇನ್ನಷ್ಟು ಕಡಿಮೆ ಆಗುತ್ತಿದ್ದಾರೆ. ಕನ್ನಡ ಮಾತಾಡದ ಪರ ರಾಜ್ಯಗಳಿಂದ ಬಂದು ಇಲ್ಲಿ ಉದ್ಯೋಗವಕಾಶ ಪಡೆದವರ ಮಕ್ಕಳೆಲ್ಲಾ ಈಗ ಕನ್ನಡದ ನೆಲದಲ್ಲಿ ಸಲೀಸಾಗಿ ಕನ್ನಡದ ಹೆಸರಲ್ಲಿ ಉದ್ಯೋಗಾವಕಾಶ ಗಿಟ್ಟಿಸಿ ಕೊಳ್ಳುತ್ತಾರೆಂಬ ಆರೋಪ ಇದೆ. ಹಾಗಿದ್ದಲ್ಲಿ ಮೂಲ ಕನ್ನಡಿಗರು ಎಲ್ಲಿ ಹೋಗಬೇಕು?

ನಕಲಿ ಆಭರಣಗಳಿಗೆ ಅಸಲಿಗಿಂತಲೂ ಹೊಳಪು ಹೆಚ್ಚಲ್ಲವೆ? ಈಗ ಕನ್ನಡಿಗರುಂದರೆ ಯಾರು? ಎಂಬುದಕ್ಕೆ ವೈಜ್ಞಾನಿಕ ವ್ಯಾಖ್ಯೆಯೂ ಅಗತ್ಯವಾಗಿದೆ.

ಸೌಜನ್ಯ : ಸಂಯುಕ್ತ ಕರ್ನಾಟಕ
೨೪ ಡಿಸೆಂಬರ್ ೨೦೦೭

■

ಮೆಡೋಸ ಟೇಲರ್: ಪೂರ್ವ-ಪಶ್ಚಿಮ ಸಂಗಮ*

● ಆರ್. ಎಸ್. ಚುಳಕಿ

ಇಂಗ್ಲೆಂಡ್‌ನಿಂದ ನಮ್ಮ ನಾಡಿಗೆ ಸಾವಿರಾರು ಜನರು ವ್ಯಾಪಾರಕ್ಕಾಗಿ ಉದ್ಯೋಗಕ್ಕಾಗಿ, ಆಡಳಿತ ಮಾಡುವುದಕ್ಕಾಗಿ ಬಂದು ಹೋಗಿದ್ದಾರೆ. ಆದರೆ ಅವರ್‍ಯಾರೂ ನಿಜವಾದ ಭಾರತವನ್ನು ಅರಿತುಕೊಳ್ಳಲಿಲ್ಲ, ಪ್ರೀತಿಸಲಿಲ್ಲ. ಆದರೆ ಕ್ರಿ.ಶ. ೧೮೨೪ರಲ್ಲಿ ತರುಣನಾಗಿದ್ದಾಗಲೇ ಭಾರತಕ್ಕೆ ಬಂದ ಟೇಲರನು ಮೂವತ್ತೈದು ವರ್ಷಕ್ಕಿಂತಲೂ ಅಧಿಕ ಅವಧಿಯವರೆಗೆ ಇಲ್ಲಿ ಇದ್ದು, ಪೊಲಿಟಿಕಲ್ ಏಜಂಟನಾಗಿ ಸುರಪುರ ಸಂಸ್ಥಾನಕ್ಕೆ ಅಮೋಘ ಸೇವೆ ಸಲ್ಲಿಸಿ, ಆಡಳಿತದಲ್ಲಿ ಸುಧಾರಣೆ ಮಾಡಿ, ಭಾರತೀಯರೊಡನೆ ಬೆರೆತು ಬಾಳಿ, ಮರಳಿ ಇಂಗ್ಲೆಂಡಿಗೆ ಹೋಗಿ, ಅಲ್ಲಿ ಭಾರತದ ಅನಧಿಕೃತ ರಾಯಭಾರಿಯಂತೆ ಕಾರ್ಯ ಮಾಡಿದನು. ಭಾರತವನ್ನು ಅನಾಗರಿಕ ದೇಶವೆಂದು ಬಗೆದಿದ್ದ ಅವರಿಗೆ ಭಾರತದ ಹಿರಿಮೆಗರಿಮೆಗಳನ್ನು ಧರ್ಮ, ಸಂಸ್ಕೃತಿ, ನಾಗರಿಕತೆ, ಇತಿಹಾಸ, ಕಲೆಗಳನ್ನು ತಿಳಿಸಿಕೊಡಲು ಸುಂದರವಾದ ಐತಿಹಾಸಿಕ ಕಾದಂಬರಿಗಳನ್ನು ಬರೆದನು. ಆತನು ಬರೆದ ಟೀಪೂಸುಲ್ತಾನ, ತಾರಾ, ಚಾಂದಬೇಬಿ ಎಂಬ ಬೃಹತ್ ಕಾದಂಬರಿಗಳಲ್ಲಿ ಸಮಗ್ರ ಕರ್ನಾಟಕದ ಜೀವನವನ್ನು ಚಿತ್ರಿಸಿದ್ದಾನೆ. ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳ ಅಸಿಸ್ಟೆಂಟ್ ಕಮಿಷನರ್ ಆಗಿ ಮಾಡಿದ ಕಾರ್ಯವನ್ನೆಲ್ಲ ತನ್ನ ಆತ್ಮ ಚರಿತ್ರೆಯಲ್ಲಿ ವಿವರಿಸಿ ಹೇಳಿದ್ದಾನೆ, ಹಾಗೂ ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದ ಸುರಪುರ ಸಂಸ್ಥಾನದ ಆಗುಹೋಗುಗಳನ್ನೂ ವಿಸ್ತಾರವಾಗಿ ಬಣ್ಣಿಸಿ ಹೇಳಿದ್ದಾನೆ. ಅವನ ಮಹಾನ್ ಸೇವೆಯನ್ನು ಮನ್ನಿಸಿ, ಸಾಹಿತ್ಯಸೇವೆಯನ್ನು ಪರಿಗಣಿಸಿ ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳು ಅವನಿಗೆ 'Star of India' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದಳು.

*

ಭಾರತದಲ್ಲಿದ್ದಾಗ ಭಾರತೀಯನಂತೆ ಬಾಳಿದ ಫಿಲಿಪ್ ಮೆಡೋಸ ಟೇಲರನು ಸೆಪ್ಟಂಬರ್ ೨೫, ೧೮೦೮ರಲ್ಲಿ ಇಂಗ್ಲೆಂಡದ ಲಿವ್ಹರಪೂಲದಲ್ಲಿ ಜನಿಸಿದನು. ತಂದೆಯ ಹೆಸರು ಫಿಲಿಪ್, ತಾಯಿಯ ಹೆಸರು ಜೇನ. ಧಾರ್ಮಿಕ ಪ್ರವೃತ್ತಿಯ, ವ್ಯಾಪಾರ ವೃತ್ತಿಯ ಕುಟುಂಬದವರು. ಬಾಲಕನಾದ ಫಿಲಿಪ್ ಶಾಲೆಯ ವಿಷಯಗಳಲ್ಲಿ ಬಹಳಷ್ಟು ಬುದ್ಧಿವಂತ ಎಂದೆನಿಸಿಕೊಳ್ಳದಿದ್ದರೂ ಶಾಲೆಯ ವಿದ್ಯಾರ್ಥಿಗಳಲ್ಲಿ ಅತಿ ಚಿಕ್ಕವನಾದ್ದರಿಂದ ಅಚ್ಚುಮೆಚ್ಚಿನವನಾಗಿದ್ದ.

---

* **ಮೆಡೋಸ ಟೇಲರನು ಚಿತ್ರಿಸಿದ ಭಾರತ:** ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಗಾಗಿ ಸಲ್ಲಿಸಿದ ಮಹಾಪ್ರಬಂಧ. ಪುಸ್ತಕ ರೂಪದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಂಶೋಧನಾ ಮಾಲಿಕೆಯಲ್ಲಿ ಪ್ರಕಟಿಸಿದೆ. (೨೦೦೮)

ಇಂಗ್ಲಿಷ್ ಹಾಗೂ ಲ್ಯಾಟಿನ್ ಭಾಷೆಗಳನ್ನು ಅಭ್ಯಾಸ ಮಾಡಿದ. ಆದರ ಅವನ ಗುರುಗಳು ಒಮ್ಮೆ ಅಂಗೈಗೆ ರಕ್ತ ಬರುವಷ್ಟು ಹೊಡೆದುದರಿಂದ ಶಾಲೆಯನ್ನೇ ಬಿಟ್ಟುಬಿಟ್ಟ. ತಾಯಿಯು ಮನೆಯಲ್ಲೇ ಧಾರ್ಮಿಕ ವಿಷಯಗಳನ್ನು ಕಲಿಸಿದಳು. ಅದರಂತೆ ಅವನ ತಂದೆಯು ಅವನಿಗೆ ಜೀವನದಲ್ಲಿ ಧೈರ್ಯದಿಂದ ಹೋರಾಡಿ ಬಾಳುವುದನ್ನು ತಿಳಿಸಿಕೊಟ್ಟರು. ಅವನ ಮಿತ್ರ ಅವನನ್ನೊಮ್ಮೆ ಹೇಡಿ ಎಂದು ಹೀಯಾಳಿಸಿದಾಗ ಅವನೊಡನೆ ಕಾದಾಡಲು ಮುಂದಾಗಿದ್ದ. ಕುಟುಂಬವು ಬಡತನದಲ್ಲಿದ್ದುದರಿಂದ ಚಿಕ್ಕ ವಯಸ್ಸಿನಲ್ಲಿಯೇ ಸಣ್ಣಪುಟ್ಟ ನೌಕರಿ ಮಾಡಬೇಕಾಯಿತು.

ಬಾಲಕನಾಗಿದ್ದಾಗಲೇ ಅವನಿಗೆ ವ್ಯಾಪಾರಸ್ಥನಾಗುವ ಹಂಬಲ ಉಂಟಾಯಿತು. ಒಂದು ದಿನ ಮುಂಬೈನಲ್ಲಿಯ ಬ್ಯಾಕ್ಸ್‌ಟರ್ ಕಂಪನಿಯವರು 'ಕೆಲಸಗಾರರು ಬೇಕಾಗಿದ್ದಾರೆ' ಎಂದು ದಿನಪತ್ರಿಕೆಯಲ್ಲಿ ಕೊಟ್ಟ ಜಾಹೀರಾತನ್ನು ಓದಿ ಅವನಿಗೆ ಭಾರತಕ್ಕೆ, ಮುಂಬೈಗೆ ಹೋಗಬೇಕು ಎಂದೆನಿಸಿತು. ತಂದೆ ತಾಯಿಗಳ ಒಪ್ಪಿಗೆಯೂ ಸಿಕ್ಕಿತು. ಹೀಗಾಗಿ ಭಾರತದಲ್ಲಿದ್ದು ಸಿರಿವಂತನಾಗಿ ತನ್ನ ದೇಶಕ್ಕೆ ಮರಳುವ ಕನಸು ಕಾಣುತ್ತ ಹಡಗನ್ನು ಏರಿದ ಆ ಹುಡುಗ. ಆ ಕಾಲದಲ್ಲಿ ಹಡಗಿನ ಮುಖಾಂತರ ಭಾರತವನ್ನು ತಲುಪಲು ನಾಲ್ಕು ತಿಂಗಳಿಗಿಂತ ಹೆಚ್ಚು ಅವಧಿ ಬೇಕಾಗುತ್ತಿತ್ತು. ಆತ ತನ್ನ ಪ್ರವಾಸ ಕಾಲದಲ್ಲಿ ಭಾರತೀಯ ಭಾಷೆಗಳಾದ ಹಿಂದುಸ್ತಾನಿ ಹಾಗೂ ಮರಾಠಿ ಭಾಷೆಗಳ ಅಭ್ಯಾಸ ಮಾಡಿದ. ಹೀಗೆ ೧೮೨೪ನೇ ಇಸ್ವಿಯ ಸೆಪ್ಟಂಬರ್ ತಿಂಗಳ ಒಂದನೆಯ ತಾರೀಖಿನಂದು ಮುಂಬೈ ಬಂದರಕ್ಕೆ ಆತ ಬಂದಿಳಿದಾಗ ಅವನಿಗೆ ಕೇವಲ ಹದಿನಾರು ವರ್ಷಗಳಾಗಿದ್ದವು.

ಮುಂಬೈಗೆ ಬಂದು ಬ್ಯಾಕ್ಸ್‌ಟರ್ ಕಂಪನಿಯ ವಿಳಾಸವಿದ್ದಲ್ಲಿಗೆ ಆತ ಹೋಗಿ ನೋಡಿದಾಗ ಅದೊಂದು ದೊಡ್ಡ ಕಂಪನಿಯಾಗಿರದೆ ಚಿಕ್ಕ ಅಂಗಡಿ ಆಗಿತ್ತು. ಬಹಳಷ್ಟು ಭ್ರಮನಿರಸನ ವಾಯಿತು ಅವನಿಗೆ. ಆದರೂ ಧೈರ್ಯಗುಂದದೆ ಅನ್ನ ಬಟ್ಟೆ ವಸತಿ ಸಮಸ್ಯೆ ಎದುರಿಸುತ್ತ ತನ್ನ ದೂರದ ಸಂಬಂಧಿಕನಾದ ಮಿ. ನ್ಯೂನಹ್ಯಾಮ ಎಂಬವರನ್ನು ಭೇಟಿ ಆದ. ನ್ಯೂನಹ್ಯಾಮನು ಮುಂಬೈ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯ ಮಾಡುತ್ತಿದ್ದುದರಿಂದ ಆತ ಟೇಲರನಿಗೆ ನಿಝಾಮ ಸರಕಾರದಲ್ಲಿ ಜಮಾ ಖರ್ಚು ಬರೆಯುವ ಕಾರಕೂನಿಕೆಯನ್ನು ಕೊಡಿಸಿದ. ಅದುವೆ ತನ್ನ ಭಾಗ್ಯದ ಬಾಗಿಲು ಎಂದು ಬಗೆದು ಔರಂಗಾಬಾದದಲ್ಲಿಯ ತನ್ನ ಆಫೀಸಿಗೆ ಬಂದು ಕೆಲಸಕ್ಕೆ ಹಾಜರಾದ. ಮುಂದೆ ಕ್ಯಾಪ್ಟನ್ ಅ್ಯಡಜಟಂಟ, ಕರ್ನಲ್ ಹುದ್ದೆಗೇರಿದ.

ಟೇಲರನು ಬಹಳಷ್ಟು ಪರಿಶ್ರಮ ಪಟ್ಟು ಮನಃಪೂರ್ವಕವಾಗಿ ಕಾರ್ಯಮಾಡುವುದನ್ನು ಕಂಡು ಅವನಿಗೆ ಬಡತಿ ಕೊಟ್ಟು 'ಸೂಪರಿಂಡೆಂಟ್ ಆಫ್ ಬಝಾರ್' ಎಂದು ನೇಮಕ ಮಾಡಿದರು. ಈ ಹುದ್ದೆಯಲ್ಲಿದ್ದು ಕಾರ್ಯ ಮಾಡುವಾಗ ಆತನಿಗೆ ಹಿಂದುಗಳ, ಮುಸಲ್ಮಾನರ ಸಂಪರ್ಕ ಬಂದು ಅವರ ಧರ್ಮ, ಸಂಸ್ಕೃತಿ, ಆಚಾರ ವಿಚಾರ ಮೊದಲಾದವುಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಅನುಕೂಲವಾಯಿತು. ಕಾಲಕ್ರಮದಲ್ಲಿ ನಾಲ್ಕು ಭಾಷೆಗಳನ್ನು - ಉರ್ದು, ಪರ್ಶಿಯನ್, ಮರಾಠಿ ಹಾಗೂ ತೆಲುಗು ಚೆನ್ನಾಗಿ ಕಲಿತುಕೊಂಡನು. ಆಯಾ ಭಾಷಿಕರ

ಜೊತೆಗೆ ಅವರವರ ಭಾಷೆಯಲ್ಲಿ ಮಾತನಾಡಿ ನಿಕಟ ಸಂಪರ್ಕ ಹೊಂದಿದನಲ್ಲದೆ ಎಲ್ಲ ಬಗೆಯ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರನಾದನು.

ಪುರಾತನ ಭಾರತದ ಶ್ರೇಷ್ಠ ಆದರ್ಶಗಳನ್ನು ಕಳೆದುಕೊಂಡು ಬಾಳುತ್ತಿದ್ದ ಭಾರತೀಯರನ್ನು ಕಂಡು ಮರುಕಪಟ್ಟನು. ಬಿರ್ಘಾರದ ಇನ್ಸ್‌ಪೆಕ್ಟರ್‌ನಾಗಿ ಕಾರ್ಯ ಮಾಡುತ್ತಿದ್ದಾಗ ಅನೇಕ ಜನ ವ್ಯಾಪಾರಸ್ಥರು ಹಣ ಗಳಿಸುವುದಕ್ಕೋಸ್ಕರ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಮಾಡಿ ಮಾರುವುದನ್ನು ನೋಡಿದನು. ಆತ ತುಳಜಾಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ನಡೆದ ಘಟನೆ ಹೀಗಿದೆ :

ತುಳಜಾಪುರದ ತುಳಜಾಭವಾನಿಗೆ ಅನೇಕ ಜನರು ಯಾತ್ರೆಗೆಂದು ಹೋಗುತ್ತಿದ್ದರು. ದಾರಿಯಲ್ಲಿ ಅವರು ತಂಗಿದ್ದಾಗ ಅಡಿಗೆ ಮಾಡಿಕೊಂಡು ಉಣ್ಣಲು ಅಕ್ಕಿ ಹಿಟ್ಟನ್ನು ಕೊಂಡರೆ ಅದರಲ್ಲಿ ಉಸುಕು, ಹಳ್ಳ ಇರುತ್ತಿತ್ತು. ಅನೇಕ ಜನ ಭಕ್ತರು ಇಂಥ ಆಹಾರವುಂಡು ಸಾಕುಸಾಕಾಗಿ ಇನ್ಸ್‌ಪೆಕ್ಟರ್‌ನಾದ ಟೇಲರನಿಗೆ ತಮ್ಮ ತಕರಾರನ್ನು ತೋಡಿಕೊಂಡರು. ಅದನ್ನು ಕೇಳಿದ ಆತನು, ಅವರು ಯಾವ ಯಾವ ಅಂಗಡಿಯಲ್ಲಿ ಹಿಟ್ಟು ಕೊಂಡರೋ ಆ ಎಲ್ಲ ಅಂಗಡಿಗಳ ಮಾಲೀಕರನ್ನು ಕರೆಸಿ, ಅವರು ಬರುವಾಗ ಅವರಿಂದಲೇ ತಮ್ಮ ಅಂಗಡಿಯಲ್ಲಿಯ ಹಿಟ್ಟನ್ನು ತರಿಸಿದನು. ಅಮೇಲೆ ಅವರೆಲ್ಲರಿಗೂ ತಮ್ಮ ಹಿಟ್ಟಿನಿಂದ ಅಡಿಗೆ ಮಾಡಿ ಉಣ್ಣಲು ಹೇಳಿದಾಗ ನಿರಾಕರಿಸಿದರು. ಆಗವನು 'ಯಾವ ಹಿಟ್ಟಿನ ಆಹಾರವನ್ನು ನೀವು ತಿನ್ನುವುದಿಲ್ಲವೋ ಅದನ್ನು ಉಳಿದವರು ಹೇಗೆ ತಿನ್ನುವರು ?' ಎಂದು ಗದರಿಸಿದಾಗ ವರ್ತಕರೆಲ್ಲರೂ ಅವನ ಕ್ಷಮೆ ಯಾಚಿಸಿದರಲ್ಲದೆ ಇನ್ನು ಮುಂದೆ ಇಂಥ ಹಿಟ್ಟನ್ನು ಮಾರುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಅಂದಿನಿಂದ ಟೇಲರನು ನ್ಯಾಯ ನಿಷ್ಠುರಿಯಾಗಿ ಬಾಳಿ ಭಾರತೀಯರ ಜನ ಜೀವನವನ್ನು ಸುಧಾರಿಸುವ ಪಣ ತೊಟ್ಟನು.

ನಂತರ ದಕ್ಷನಾದ, ಪ್ರಾಮಾಣಿಕನಾದ ಅವನಿಗೆ ಮತ್ತೊಂದು ಬಡತಿ ಸಿಕ್ಕಿತು. ಅವನಿಗೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಎಂಬ ಹುದ್ದೆ ದೊರಕಿತು. ಆ ಕಾಲದಲ್ಲಿ ಭಾರತದ ಕೆಲವು ಕಡೆಗಳಲ್ಲಿ ಥಗ್ಗರು ವಾಸಿಸುತ್ತಿದ್ದು, ಅವರು ವ್ಯಾಪಾರಕ್ಕಾಗಿ ಹೋಗುತ್ತಿದ್ದ ಸಿರಿವಂತರನ್ನು ಮರಮಾತಿಗ ಬೀಳಿಸಿ ಕೇವಲ ತಮ್ಮ ಕರವಸ್ತ್ರದಿಂದ ಕುತ್ತಿಗೆಗೆ ಬಿಗಿದು, ಕೊಂದು ಹಣ ದೋಚಿ ಪರಾರಿ ಆಗುತ್ತಿದ್ದರು. ತನ್ನ ಆಡಳಿತ ಪ್ರದೇಶದಲ್ಲಿ ಶಾಂತಿ, ಕಾನೂನು, ಕಾಯಿದೆ ಪಾಲನೆಗಾಗಿ, ಗುಪ್ತರೀತಿಯಲ್ಲಿ ಕೊಲೆಮಾಡುತ್ತಿದ್ದ ಅಂಥ ಥಗ್ಗರನ್ನು ಹಿಡಿಯಲೇ ಬೇಕಾಯಿತು. ಒಮ್ಮೆ ಅಮೀರ ಅಲಿ ಎಂಬ ಥಗ್ಗನನ್ನು ಹಿಡಿದು ಅವನ ಬಾಯಿಯಿಂದಲೇ ಎಲ್ಲ ವಿಷಯಗಳನ್ನು ತಿಳಿದುಕೊಂಡು, ಆತ ಹೇಳಿದಂತೆಯೇ ಬರೆದುಕೊಂಡು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿದನು. ಅದುವೆ 'ಕನ್ಫೆಶನ್ಸ್ ಆಫ ಎ ಥಗ್' ಎಂಬ ಭೀಕರ, ಭಯಾನಕ ಕೊಲೆಗಡುಕರ ಪುಸ್ತಕವಾಗಿ ಹೊರಬಂತು.

ಇದೇ ವೇಳೆಗೆ ಸುರಪುರದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿತ್ತು. ಸುರಪುರದ ದೊರೆ ಮೃತನಾದ ಬಳಿಕ ಅವನ ಹೆಂಡತಿ ರಾಣಿಯಾಗಿ ರಾಜ್ಯಭಾರ ಮಾಡಹತ್ತಿದಳು. ಅವಳಿಗೆ

ವೆಂಕಟಪ್ಪನಾಯಕನೆಂಬ ಮಗನಿದ್ದ. ವಯಸ್ಸಿನಿಂದ ಚಿಕ್ಕವನಾಗಿದ್ದ. ಬ್ರಿಟಿಷರು ಸುರಪುರವನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಸಾಕಷ್ಟು ಪ್ರಯತ್ನಿಸಿ ವಿಫಲರಾಗಿದ್ದರು. ಆ ಕಾರ್ಯವನ್ನು ನಿಪುಣತೆಯಿಂದ, ಜಾಣತನದಿಂದ ಸೈನಿಕ ಬಲವನ್ನು ಉಪಯೋಗಿಸದೆ ಮಾಡಬೇಕೆಂದು ಹೇಳಿ ಟೇಲರನನ್ನು ಸುರಪುರಕ್ಕೆ ಪೊಲಿಟಿಕಲ್ ಏಜೆಂಟನನ್ನಾಗಿ ಕಳುಹಿಸಿದರು. ಆತ ಸುರಪುರಕ್ಕೆ ಬಂದು ಸಂಧಾನ ಮಾರ್ಗ ಹಿಡಿದು, ಕಾರ್ಯ ಮಾಡಿ, ಪ್ರಬಲರಾದ ಬೇಡರ ಮನಸ್ಸನ್ನು ಗೆದ್ದುಕೊಂಡ. ಸೌಜನ್ಯತೆಯ ವರ್ತನೆಯಿಂದ, ಸೌಮ್ಯ ಮಾತುಗಳಿಂದ ಜನರ, ರಾಣಿಯ ಮನಸೂರೆಗೊಂಡನು. ಸಮಸ್ಯೆಯನ್ನು ಬಗೆಹರಿಸಿದನು. ಇವನ ಕುಶಾಗ್ರ ಬುದ್ಧಿಯನ್ನು ಮೆಚ್ಚಿಕೊಂಡ ರೆಸಿಡೆಂಟ ಫ್ರೇಸರ ಹಾಗೂ ಕ್ಯಾಪ್ಟನ್ ಗ್ರೀಸ್ಲೆ ಅವರು ಮನಸಾ ಮೆಚ್ಚಿಕೊಳ್ಳುವದಲ್ಲದೆ ಹೊಗಳಿದರು. ಆ ದಾಖಲಾತಿ ಪತ್ರದಲ್ಲಿ "ಸುರಪುರದ ರಾಜಕುಮಾರನ ಸಂಪತ್ತನ್ನು ಹೆಚ್ಚಿಸುವಲ್ಲಿ, ಜನರ ಜೀವನದಲ್ಲಿ ಶಾಂತಿ, ಸಮಾಧಾನ ಉಂಟುಮಾಡುವಲ್ಲಿ, ಮೆಡೋಸ ಟೇಲರನು ಮಾಡಿದ ಗುರುತರ ಕಾರ್ಯವು ಪ್ರಶಂಸಿಲ್ಪಟ್ಟಿದೆ. ೧೫ ಜನವರಿ ೧೮೫೨."

ಟೇಲರನು ಯುವರಾಜನಾದ ವೆಂಕಟಪ್ಪನಾಯಕನನ್ನು ಸಿಂಹಾಸನದ ಮೇಲೆ ಕೂಡ್ರಿಸಿದನು. ಯುವರಾಜನು ಟೇಲರನನ್ನು 'ಅಪ್ಪಾ' ಎಂದೇ ಕರೆಯುತ್ತಿದ್ದನು. ವೆಂಕಟಪ್ಪ ನಾಯಕನು ವಯಸ್ಕನಾಗುವವರೆಗೆ ಅವನ ಪಾಲಕನಾಗಿ ತಾನು ಆಡಳಿತ ನಿರ್ವಹಿಸುವುದಾಗಿ ಹೇಳಿದನು. ಅಲ್ಲದೆ ರಾಜ್ಯದಲ್ಲಿ ಹಲವಾರು ಸಾಮಾಜಿಕ, ಆರ್ಥಿಕ ಸುಧಾರಣೆಗಳನ್ನು ತಂದನು. ನಾನಾ ಬಗೆಯ ಸುಧಾರಣೆಗಳಲ್ಲಿ ಆಡಳಿತ ಸುಧಾರಣೆ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗಳು ಒಳಗೊಂಡಿದ್ದವು. ತನ್ನ ಅಧೀನದಲ್ಲಿದ್ದ ಜಮೀನನ್ನು ಮೋಜಣಿ ಮಾಡಿ, ಜನರಿಗೆ ಹಂಚಿಕೊಟ್ಟು ಒಕ್ಕಲುತನ ಮಾಡಿ ಬಾಳಲು ಪ್ರೇರೇಪಿಸಿದನು. ದನಕರುಗಳನ್ನು ಓಡಿಸಿಕೊಂಡು ಹೋಗುವದು, ಬೇಟೆಯಾಡುವದು ಬಿಟ್ಟು ಅವರೆಲ್ಲ ರೈತರಾದರು. ತಮಗೆ ದೊರೆತ ಜಮೀನಿಗೆ ತಾವೇ ಮಾಲೀಕರೆಂದು ತಿಳಿದ ಬಳಿಕ ಒಕ್ಕಲುತನ ಮಾಡಿ ಸಿರಿವಂತರಾದರು. ಈ ರೀತಿಯಾಗಿ ಟೇಲರನು ಅವರಿಗೆ ಗೌರವಾನ್ವಿತವಾಗಿ ಬಾಳುವುದನ್ನು ತಿಳಿಸಿಕೊಟ್ಟನಲ್ಲದೆ ಪರಿಶ್ರಮಪಟ್ಟು ದುಡಿದು ಸಿರಿವಂತರಾಗಿ, ನಾಗರಿಕರಾಗಿ ಬಾಳಲು ಪ್ರೇರೇಪಿಸಿದನು.

ಅವನು ತನ್ನ ಆತ್ಮ ಚರಿತ್ರೆಯಲ್ಲಿ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ.

"ಹಳ್ಳಿಯ ಪಟೇಲ ಅಥವಾ ಮುಖ್ಯಸ್ಥನೊಬ್ಬ ಕಂಗಾಲಾಗಿದ್ದನು. ಅವನ ಸದ್ಗುಣಿಯಾದ ಹೆಂಡತಿ, ಅವನನ್ನು ಸುಧಾರಿಸಲು ಯತ್ನಿಸಿ ವಿಫಲಳಾಗಿದ್ದಳು. 'ನಾನು ನನ್ನಲ್ಲಿರುವ ಎಲ್ಲ ಆಭರಣಗಳನ್ನು ಒತ್ತೆ ಇಟ್ಟು ಅವನಿಗೆ ಸಹಾಯ ಮಾಡಬಲ್ಲೆ, ಎಂದಳು. ನಾನು ಅವನಿಗೆ ಖಜಾನೆಯಿಂದ ಸಹಾಯ ನೀಡಿದೆ. ಆ ವರುಷ ಅವರಿಬ್ಬರೂ ಒಳ್ಳೆ ಒಕ್ಕಲುತನ ಮಾಡಿ, ಸಿರಿವಂತರಾಗಿ ನನ್ನ ಬಳಿಗೆ ಬಂದು, "ದೇವರು ನಮಗೆ ಈಗ ಸಾಕಷ್ಟು ಸಿರಿವಂತಿಕೆ ಕೊಟ್ಟಿದ್ದಾನೆ. ಈಗ ನಮ್ಮ ಬಳಿ ೩೨ ಆಕಳು ಎಮ್ಮೆಗಳಿವೆ. ನಾವು ಪ್ರತಿ ವರ್ಷ ೩೨ ರೂಪಾಯಿ ಘೂಕಂದಾಯ ಕೊಡುತ್ತಿದ್ದರೆ ಇನ್ನು ಮುಂದೆ ೩೩೨ ರೂಪಾಯಿ ಕೊಡುತ್ತೇವೆ" ಎಂದು ಅಂದಳು. ಈ ರೀತಿಯಾಗಿ ನೂರಾರು ಜನರು ಸಿರಿವಂತರಾಗಿ, ಸಮೃದ್ಧಿ ಹೊಂದಿ ಟೇಲರನಿಗೆ ಕೃತಜ್ಞತೆ ಸಲ್ಲಿಸಿದರು.

ಹಣದ ಅಧಿಕಾರಿಯಾಗಿ ಟೇಲರನು ಬೊಕ್ಕಸದ ಆಯವ್ಯಯವನ್ನು ಸರಿಯಾಗಿ ಇಟ್ಟನು. ವರ್ಷದ ಕೊನೆಗೆ ನಿಝಾಮನಿಗೆ ಒಪ್ಪಿಸಬೇಕಾದ ಕಪ್ಪಕಾಣಿಕೆ ಸಲ್ಲಿಸಿ ೭೦,೦೦೦/- ರೂಪಾಯಿಗಳನ್ನು ಉಳಿಸಿದನು. ಅವನ ಈ ಕಾರ್ಯವನ್ನು ನೋಡಿ ಹೈದರಾಬಾದನ ರೆಸಿಡೆಂಟರು ಹೀಗೆ ಬರೆದರು :

"ಲೆಕ್ಕ ಪತ್ರವಿಡುವಲ್ಲಿ ನೀವು ಆಯ್ದುಕೊಂಡ ವಿಧಾನವು ಸರಿ ಇದೆ. ಸುರಪುರದ ರಾಜ್ಯ ಭಾರವನ್ನು ಸರಿಯಾಗಿ ನಿರ್ವಹಿಸಿದ್ದೀರಿ. ...... ಯಾವ ಪ್ರದೇಶದಲ್ಲಿ ಆಡಳಿತ ಎಂಬುದೇ ಇರಲಿಲ್ಲವೋ ಅಲ್ಲಿ ನೀವು ಎಲ್ಲ ಬಗೆಯ ಶಾಂತಿ, ಸುವ್ಯವಸ್ಥೆಯನ್ನು ತಂದಿರುವಿರಿ. ಈ ಸಾಧನೆಯು ಸಾಮಾನ್ಯವಾದುದಲ್ಲ."

ಈ ಅವಧಿಯಲ್ಲಿ ಆತ ಮಿಸ್ ಪಾಮರ ಎಂಬವಳನ್ನು ಮದುವೆಯಾಗಿದ್ದ. ಮಕ್ಕಳೂ ಆದವು. ಆದರೆ ಮೊದಲಿನ ಮಕ್ಕಳು ತೀರಿಕೊಂಡಾಗ ಮನೆಯಲ್ಲಿ ದುಃಖವು ಆವರಿಸಿತು. ತನ್ನದೇ ಆದ ವಿನ್ಯಾಸದಲ್ಲಿ ಒಂದು ಬಂಗಲೆಯನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಿಸಿಕೊಂಡ. ದುರ್ದೈವವೆಂದರೆ ಯಾವಾಗ ಆ ಭವ್ಯ ಬಂಗಲೆಯಲ್ಲಿ ಬಂದು ಇರಬೇಕೆಂದಿದ್ದನೋ ಆಗ ಅವನ ಹೆಂಡತಿ ಮಡಿದಳು. ಈ ರೀತಿ ತನ್ನ ವೈಯಕ್ತಿಕ ಜೀವನದಲ್ಲಿ ದುಃಖವನ್ನು ಅನುಭವಿಸಿದ. ಇಂಥ ದುಃಖದಲ್ಲಿಯೂ ಕೂಡ ಭಾರತೀಯ ಜನರ ಜೀವನ ಮಟ್ಟವನ್ನು ಉನ್ನತ ಹಾಗೂ ಉದಾತ್ತಗೊಳಿಸುವ ಕಾರ್ಯವನ್ನು ಬಿಡಲಿಲ್ಲ. ಯಾಕೆಂದರೆ ಆತ ಭಾರತೀಯರನ್ನು ಅಷ್ಟೊಂದು ಗಾಢವಾಗಿ ಪ್ರೀತಿಸಹತ್ತಿದ್ದ.

ಹತ್ತು ವರ್ಷಗಳಿಗಿಂತಲೂ ಅಧಿಕ ಸಮಯದವರೆಗೆ ಟೈಮ್ಸ್ ಪತ್ರಿಕೆಗೆ ವರದಿಗಾರನಾಗಿ ಕಾರ್ಯಮಾಡುತ್ತ ಬಂದಿದ್ದ. ಭಾರತೀಯರ ಜೀವನ, ಅವರ ಸಮಸ್ಯೆಯನ್ನು ವಿಶ್ಲೇಷಿಸುತ್ತಾ ಅನೇಕ ಪತ್ರಗಳನ್ನು ಬರೆದು ಕಳಿಸಿದ. ಭಾರತದ ಸರ್ವವಿಧದ ಸುಧಾರಣೆಯ ಬಗ್ಗೆ ಯಾವ ವಿದೇಶಿಯನೂ ಟೇಲರನಷ್ಟು ಆಸಕ್ತಿ ಹೊಂದಿರಲಿಲ್ಲ.

ಆತನು ಕರ್ನಾಟಕದಲ್ಲಿ ಮೂವತ್ತೈದು ವರ್ಷಗಳಿಗಿಂತಲೂ ಅಧಿಕ ಕಾಲ ಕಾರ್ಯ ನಿರ್ವಹಿಸಿದ. ನಳದುರ್ಗದ ಹಾಗೂ ಸುರಪುರದ ಜನರು ಅವನಿಗೆ ಮಾನಪತ್ರ ಕೊಟ್ಟು ಗೌರವಿಸಿ ಅವನ ಅಮೂಲ್ಯ ಸೇವೆಯ ಗುಣಗಾನ ಮಾಡಿದರು.

ಇಲ್ಲಿ ಸೇವಾವಧಿ ಮುಗಿದ ನಂತರ ಟೇಲರನು ಸ್ವದೇಶಕ್ಕೆ ಮರಳಿದ. ನಿವೃತ್ತಿಯ ನಂತರ ಇಂಗ್ಲೆಂಡಿನಲ್ಲಿ ತನ್ನ ಎಲ್ಲ ಮಹತ್ವದ ಸಾಹಿತ್ಯ ಕೃತಿಗಳನ್ನು ರಚಿಸಿದ. ಏನೆಲ್ಲವನ್ನು ಆತ ಬರೆದಿದ್ದಾನೆಯೋ ಅದರಲ್ಲಿ ಸಂಪೂರ್ಣ ಸತ್ಯಾಂಶವಿದೆ, ಪ್ರಾಮಾಣಿಕತೆ ಇದೆ. ಹಾಗೂ ಭಾರತದ ಇತಿಹಾಸವನ್ನು ತನ್ನ ಕಾದಂಬರಿಗಳಿಗೆ ವಿಷಯವನ್ನಾಗಿ ಮಾಡಿಕೊಂಡು ಭಾರತದ ಸಂಸ್ಕೃತಿ ಹಾಗೂ ನಾಗರಿಕತೆಯನ್ನು ತನ್ನ ದೇಶ ಬಾಂಧವರಿಗೆ ತಿಳಿಯಪಡಿಸಲು ಪ್ರಯತ್ನಿಸಿದ. ತನ್ನ ಕಕ್ಕನ ಮಗನಾದ ಹೆನ್ರಿ ರೀವ್ಹನಿಗೆ ಆತ ಬರೆದ: "ಪ್ರಕಟವಾಗಲಿ, ಬಿಡಲಿ...... ನಾನು ಬರೆದರೆ ಪ್ರಾಮಾಣಿಕವಾಗಿ ಬರೆಯುವೆ. ಇಲ್ಲವಾದರೆ ಬರೆಯುವುದೇ ಇಲ್ಲ". ಈ ಗುರಿ ಇಟ್ಟುಕೊಂಡು ಆತ ಭಾರತದ ಅನಾಗರಿಕ, ಅರೆ ನಾಗರಿಕ ಜೀವನವನ್ನು ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ.

ಅವನ ಸಾಹಿತ್ಯ ಕೃತಿಗಳು ಇವು : ೧) ಕನ್ಫೆಶನ್ಸ ಆಫ್ ಎ ಥಗ್ ೧೮೩೯ ೨) ಟಿಪ್ಪೂ ಸುಲ್ತಾನ ೧೮೪೦, ೩) ತಾರಾ ೧೮೬೩, ೪) ರಾಲ್ಫ ಡಾರ್ನೆಲ್ ೧೮೬೩, ೫) ದಿ ಸ್ಟೂಡೆಂಟ್ಸ್ ಮ್ಯಾನ್ಯುವೆಲ್ ಆಫ್ ಇಂಡಿಯನ್ ಹಿಸ್ಟರಿ ೧೮೭೦, ೬) ಸೀತಾ ೧೮೭೨, ೭) ದ ಸ್ಟೋರಿ ಆಫ್ ಮೈ ಲೈಫ್ ೧೮೭೪, ೮) ಎ ನೋಬಲ್ ಕ್ವೀನ್ ೧೮೭೪

ಆತ ಪದೇ ಪದೇ ಭಾರತದ ಬಗ್ಗೆ ಬರೆಯುವುದರಲ್ಲಿ ಸಂತೋಷ ಹಾಗೂ ಅಭಿಮಾನ ಪಡುವದಾಗಿ ಹೇಳುತ್ತಿದ್ದ.

"ನನ್ನ ಸಾಹಿತ್ಯ ಕಾರ್ಯ ನನಗೆ ಬಹಳಷ್ಟು ಆನಂದವನ್ನು ಕೊಡುತ್ತಿದೆ. ಯಾರ ಮಧ್ಯದಲ್ಲಿ ನಾನು ಬಾಳಿದೆನೋ, ಯಾರನ್ನು ನಾನು ಪ್ರೀತಿಸಿದೆನೊ, ಮತ್ತು ಯಾರನ್ನು ಜೀವನದ ಕೊನೆಯವರೆಗೆ ಪ್ರೀತಿಸುತ್ತೇನೆಯೋ ಅಂಥವರ ಬಗ್ಗೆ ನಾನು ಬರೆಯಲು ಸಮರ್ಥನಾಗಿದ್ದೇನೆ."

ಭಾರತವನ್ನು ಇಂಗ್ಲೆಂಡದ ಸಮೀಪಕ್ಕೆ ತರುವದೇ, ಭಾರತೀಯರನ್ನು ತನ್ನ ದೇಶ ಬಾಂಧವರ ಹತ್ತಿರ ಒಯ್ಯುವುದೇ, ಅದರ ಮುಖಾಂತರ ನಿಜವಾದ ಭಾರತವನ್ನು ತೋರಿಸಿಕೊಡುವುದೇ ಅವನ ಆಳವಾದ ಇಚ್ಛೆಯಾಗಿತ್ತು.

ತನ್ನ ಮನಃಪೂರ್ವಕ ಹಾಗೂ ಸಮರ್ಪಣ ಭಾವದಿಂದ ಬರೆದ, ಅಂತರಂಗದ ಆಳದಿಂದ ಬರೆದ ಕೃತಿಗಳಿಂದ ಇಂಗ್ಲಂಡಿನ ಓದುಗರ ಹೃದಯವನ್ನು ಗೆದ್ದುಕೊಂಡನು. ಅವನ ಸೃಜನಶೀಲ ಸಾಹಿತ್ಯವನ್ನು ಅನೇಕರು ಕೊಂಡಾಡಿದರು. ಇಂಗ್ಲೆಂಡಿನ ರಾಣಿ ವಿಕ್ಟೋರಿಯಾ ಸಹ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದಳು. A Companion of the Most Exalted Order of the Star of India` ಎಂಬ ಅಭಿದಾನವನ್ನಿತ್ತು ಸನ್ಮಾನಿಸಿದಳು. ನಿಜವಾಗಿಯೂ ಅದೊಂದು ಅಪೂರ್ವವಾದ ಗೌರವ. ನಂತರ ಅವನನ್ನು ರಾಯಲ್ ಐರಿಷ್ ಅಕ್ಯಾಡಮಿಯ (M.R.I.S) ಸದಸ್ಯನನ್ನಾಗಿ ಹಾಗೂ ರಾಯಲ್ ಏಷಿಯಾಟಿಕ್ ಸೊಸೈಟಿಯ (M.R.A.S) ಸದಸ್ಯನನ್ನಾಗಿಯೂ ಮಾಡಿದರು. ಶ್ರೇಷ್ಠ ಇತಿಹಾಸಕಾರರು, ಲೇಖಕರು ಭಾರತದ ಬಗ್ಗೆ ತಮಗೆ ತಿಳಿದುಕೊಳ್ಳಬೇಕಾದಾಗ ಇವನನ್ನೇ ಕೇಳುತ್ತಿದ್ದರು. ತನ್ನ ದೇಶದಲ್ಲಿ ಆತ ಭಾರತದ ಅನಧಿಕೃತ ರಾಜಪ್ರತಿನಿಧಿಯಾಗಿ ಕಾರ್ಯ ಮಾಡುತ್ತ ಭಾರತದ ಇತಿಹಾಸ, ಕಲೆ, ಶಿಲ್ಪಕಲೆ, ಸಂಸ್ಕೃತಿ ಮತ್ತು ಧರ್ಮಗಳ ಮೇಲೆ ಭಾಷಣಗಳನ್ನೂ ಮಾಡಿದನು. ಲೇಖಕನಾಗಿ ಅವನನ್ನು ಬ್ರಿಟಿಷರು ಹಾಗೂ ಪತ್ರಿಕೆಯವರು ಬಹಳಷ್ಟು ಹೊಗಳಿದರು.

ಶ್ರೇಷ್ಠ ಇತಿಹಾಸಕಾರನೂ, ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾದ ಲೇಖಕನೂ ಆದ ಸರ್. ಡಬ್ಲ್ಯು. ಡಬ್ಲ್ಯು. ಹಂಟರನು ಟೇಲರನಿಗೆ ಭವ್ಯವಾದ ಗೌರವಾರ್ಪಣೆ ಮಾಡಿದ್ದಾನೆ:

-"ನಾನು ಮತ್ತಾರಿಂದಲೂ ಪಡೆಯದ ಭಾರತದ ಜನರ ಸ್ವಭಾವದ ಜ್ಞಾನವನ್ನು ಆಂಗ್ಲೋ ಇಂಡಿಯನ್ ಸಾಹಿತಿಯಾದ ಟೇಲರನಿಂದ ಪಡೆದಿದ್ದೇನೆ. ..... ಅವನೊಬ್ಬ ಉತ್ಕೃಷ್ಟ ಗುಣವುಳ್ಳ, ದುರ್ಮಿಳನಾದ, ಸಾಹಿತಿಯಾಗಿದ್ದಾನೆ. ಆತ ತನ್ನ ಇಡೀ ಜೀವನವನ್ನು

ಭಾರತೀಯ ವಿಷಯಗಳ ಅಧ್ಯಯನಕ್ಕೆ ಮುಡಿಪಾಗಿಟ್ಟಿದ್ದನು. ಅವನ ಒಳ್ಳೆಯ ಪ್ರಭಾವವು ಭಾರತದಲ್ಲಿ ಅಧಿಕಾರಿಯಾಗಿದ್ದ ಎರಡು ಪೀಳಿಗೆಗಳ ಮೇಲೆ ಆಗಿತ್ತು."

ಅದರಂತೆ ಎಡಿನ್‌ಬರ್ಗ ರಿವ್ಯೂ ಪತ್ರಿಕೆಯಲ್ಲಿ ಹೆನ್ರಿ ಅನ್ನುವವನು ಬರೆದದ್ದು ಹೀಗಿದೆ: "...... ಜನತೆಯ ಪ್ರೀತಿಯ ವ್ಯಕ್ತಿಯಾಗಿ, ಭಾರತದ ಜನಜೀವನದ ನಾನಾ ರಂಗಗಳಲ್ಲಿ ಒಳಹೊಕ್ಕು ನೋಡಿ, ದಕ್ಷಿಣ ಭಾರತದ ಭಿನ್ನ ವಿಭಿನ್ನ ಜನರ ಮಧ್ಯದಲ್ಲಿ ಜೀವಿಸುವ ಸೌಭಾಗ್ಯ ಟೇಲರನಿಗೆ ಒದಗಿದ್ದು ಸುದೈವದ ಮಾತಾಗಿದೆ..... ಈ ಕಾರಣದಿಂದಲೇ ಆತನಿಗೆ ಬಹುಶಃ ಭಾರತದ ಬಗ್ಗೆ, ಭಾರತೀಯರ ಬಗ್ಗೆ ಸತ್ವಯುತವಾಗಿ ತಾದಾತ್ಮ್ಯದಿಂದ ಬರೆಯಲು ಸಾಧ್ಯವಾಗಿದೆ. ಈ ಗುಣಗಳು ಉಳಿದ ಯಾವುದೇ ಆಂಗ್ಲ ಲೇಖಕರಲ್ಲಿ ಕಾಣಸಿಗುವುದಿಲ್ಲ." ಮುಂದುವರೆದು, "ಭಾರತವನ್ನು ಆಳಿದರೂ ಸಹ ಇಂಗ್ಲೆಂಡಿನ ಜನರಿಗೆ ಭಾರತದ ಬಗ್ಗೆ ಅಪೂರ್ಣ ಜ್ಞಾನವಿದೆ. ಪುರಾತನ ಭಾರತದ ಬಗ್ಗೆ ಆಂಗ್ಲರಲ್ಲಿ ಅತೀವ ಆಸಕ್ತಿಯನ್ನುಂಟು ಮಾಡುವುದು, ಆತನು ನಮಗೆ ತಿಳಿಸಿದಂತೆ, ಅವನ ಪರಮ ಗುರಿಯಾಗಿತ್ತು. ಆ ಕಾರ್ಯದಲ್ಲಿ ಆತ ಬಹಳಷ್ಟು ಮಟ್ಟಿಗೆ ಯಶಸ್ಸು ಹೊಂದಿದ್ದಾನೆ."

ತನ್ನ ಮನೆಗೆ ಮರಳಿ ಬಂದ ಮೇಲೆ, ಮುಪ್ಪಿನಲ್ಲೂ ಆತ ಮತ್ತೊಮ್ಮೆ ಭಾರತಕ್ಕೆ ಹೋಗಿ ಬರುವ ಹಂಬಲ ಹೊಂದಿದ್ದ. ಅದರಂತೆ ಭಾರತಕ್ಕೆ ಬಂದು ಹೈದರಾಬಾದಿನಲ್ಲಿ ತನ್ನ ಹಳೆಯ ಮಿತ್ರರ ಭೇಟಿಯಾದ. ಅವರೆಲ್ಲರು ಅವನನ್ನು ಅತೀವ ಆತ್ಮೀಯತೆ ಹಾಗೂ ಗೌರವದಿಂದ, ಪ್ರೀತಿಯಿಂದ ಸಂದರ್ಶಿಸಿದರು. ಅವನು ಸರ್ವ ಜನರ ಮಿತ್ರನಾಗಿ ಕಾಣಿಸಿಕೊಂಡನು.

ಭಾರತದಿಂದ ಮರಳಿ ತನ್ನ ತಾಯ್ನಾಡಿಗೆ ಹೋಗುವಾಗ ಯಾವುದೇ ವೇದನೆ ಇಲ್ಲದೆ ಶಾಂತ ಮನಸ್ಕನಾಗಿ, ಮೇ ೧೩, ೧೮೭೬ರಂದು ಜಿನೇವಾದ ಸಮೀಪದ ಮೆನ್‌ಟೋನ್ನಲ್ಲಿ ವಿಧಿವಶನಾದನು. ಆತ ಈ ಭೂತಲದ ಮೇಲಿದ್ದಾಗ ಆಡಿದ ಕೊನೆಯ ಮಾತುಗಳನ್ನು ಅವನ ಸಮಾಧಿಯ ಕಲ್ಲಿನ ಮೇಲೆ ಕೆತ್ತಿದ್ದಾರೆ.... "The Eternal God is thy Refuge and underneath are the everlasting arms``

ಟೇಲರನ ವ್ಯಕ್ತಿತ್ವ

ಟೇಲರನು ಪ್ರಾಮುಖ್ಯವಾಗಿ ಆ ಕಾಲದ ಪ್ರತಿಸಿಧಿಯಾಗಿದ್ದನು. ಆದ್ದರಿಂದ ಆತ ಎಲ್ಲ ಬಗೆಯ ಸುಧಾರಣೆಗಳನ್ನು ಮಾಡುವಲ್ಲಿ ಅತೀವ ಆಸಕ್ತಿ ಹೊಂದಿದ್ದವನಾಗಿದ್ದನು. ಮತ್ತು ಭಾರತವನ್ನು ಆಧುನಿಕತೆಗೆ ತರುವ ಹಂಬಲ ಹೊಂದಿದ್ದನು. ಅವನ ಲೋಲಕದ ವ್ಯಕ್ತಿತ್ವವನ್ನು ಅರಿತುಕೊಳ್ಳಲು ನಾವು ಮೊಟ್ಟ ಮೊದಲು ಆ ಕಾಲದ ಯುಗಧರ್ಮವನ್ನು ತಿಳಿದುಕೊಳ್ಳ ಬೇಕಾಗುವುದು. ಈಸ್ಟ್ ಇಂಡಿಯಾ ಕಂಪನಿಯು ಅವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ವಹಿಸಿದ ಪಾತ್ರದ ಪಕ್ಷಿನೋಟವು ಅವಶ್ಯ. ವಾರನ್ ಹೇಸ್ಟಿಂಗ್ಸ್, ವಿಲಿಯಂ ಬೆಂಟಿಕ್, ಡಾಲಹೌಸಿ ಹಾಗೂ ಇನ್ನಿತರ ಗವರ್ನರ್ ಜನರಲ್ಲರು, ಆಡಳಿತಗಾರರು, ಸುಧಾರಕರು, ಥಗ್ಗರನ್ನು, ಪಿಂಢಾರಿಗಳನ್ನು ನಾಶ ಮಾಡುವಲ್ಲಿ, ಸತಿ ಪದ್ಧತಿಯನ್ನು ತಡೆಯುವಲ್ಲಿ, ಚಿಕ್ಕ ಮಕ್ಕಳ ಮದುವೆ ನಿಲ್ಲಿಸುವಲ್ಲಿ ಹರಸಾಹಸ ಮಾಡಿದರು. ಇಂಗ್ಲಿಷ್ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದ ಮೆಕಾಲೆ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ಜಾರಿಯಲ್ಲಿ

ತಂದನು. ಡಾಲಹೌಸಿಯು ರೈಲ್ವೇ ಹಾಗೂ ಪೋಸ್ಟ್ ಇಲಾಖೆ, ಟೆಲಿಗ್ರಾಫ್‌ಗಳನ್ನು ಆರಂಭಿಸಿದನು. ಭಾರತದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಆರಂಭಿಸಿದನು. ಈ ರೀತಿ ಪಾಶ್ಚಾತ್ಯ ವಿಜ್ಞಾನದ ಫಲಗಳನ್ನು ಭಾರತಕ್ಕೆ ಒದಗಿಸಿ ಸುಧಾರಣೆಗಳನ್ನು ಮಾಡಿದರು. ಭಾರತೀಯರಿಗೆ ಶಿಕ್ಷಣ ನೀಡುವ ಸಲುವಾಗಿ ಶಾಲೆ-ಕಾಲೇಜುಗಳನ್ನು ತೆರೆದರು. ಅದರಂತೆ ಕಾಲರಾ, ಪ್ಲೇಗ್‌ನಂಥ ಭಯಾನಕ ರೋಗ-ರುಜಿನಗಳನ್ನು ನಿಯಂತ್ರಿಸಲು ಔಷಧೋಪಚಾರ ಒದಗಿಸಲು ಆಸ್ಪತ್ರೆಗಳನ್ನು ತೆಗೆದರು. ಮಾನವೀಯ ದೃಷ್ಟಿಯನ್ನಿಟ್ಟುಕೊಂಡು ವಿಧವಾ ಪುನರ್ವಿವಾಹ ಜಾರಿಗೊಳಿಸಿದರು. ದೇಶದಲ್ಲಿ ಶಾಂತಿ, ನ್ಯಾಯ ಉಂಟಾಗಲು, ಕ್ರಿಮಿನಲ್ ಕಾಯಿದೆ ರೂಪಿಸಿ, ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಿದರು. ಈ ರೀತಿ ಸರ್ವತೋಮುಖ ಸುಧಾರಣೆಗಳ ಒಂದು ಹೊಸ ಅಧ್ಯಾಯವೇ ಭಾರತದಲ್ಲಿ ಆರಂಭವಾಯಿತು. ಅಲ್ಲದೆ ಭಾರತದ ಇತಿಹಾಸವೂ ಬದಲಾಯಿತು. ಇಂಥ ಯುಗದ ವ್ಯಕ್ತಿಯಾಗಿದ್ದ ಟೇಲರನಲ್ಲೂ ಸುಧಾರಣೆ ಮಾಡುವ ಮಹತ್ವಾಕಾಂಕ್ಷೆ ಉಂಟಾಯಿತು. ಪರೋಪಕಾರಿ ಆಡಳಿತಗಾರನಾಗಿ, ಸಮಾಜ ಸುಧಾರಕನಾಗಿ, ಬರಗಾಲ ಬಂದಾಗ, ರೋಗ ಪ್ರಸಾರವಾದಾಗ ಅನೇಕ ಪರಿಹಾರೋಪಾಯಗಳನ್ನು ಜಾರಿಗೊಳಿಸಿದನು.

ಸುಪ್ರಸಿದ್ಧ ಆಡಳಿತಗಾರರು, ಅಧಿಕಾರಿಗಳು ವಿದ್ವಾಂಸರೆಂದೆನಿಸಿಕೊಂಡಿದ್ದ ಸರ್ ಥಾಮಸ್ ಮನ್ರೋ, ಲಾರ್ಡ್ ಎಲ್ಫಿನ್‌ಸ್ಟನ್, ಕರ್ನಲ್ ಟಾಡ, ಕರ್ನಲ್ ಸ್ಲೀಮನ್, ಕರ್ನಲ್ ವಿಲ್ಕ್ಸ, ಗ್ರ್ಯಾಂಟಡಫ, ಲಾರ್ಡ್ ಮೆಕಾಲೆ, ವಿಲಿಯಂ ಬೆಂಟಿಕ, ಡಾಲ್ ಹೌಸಿ, ಪ್ರೊಫೆಸರ್ ವಿಲ್ಸನ್ ಮೊದಲಾದವರ ಪ್ರಭಾವಕ್ಕೆ ಒಳಗಾಗಿದ್ದ ಟೇಲರನು ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಅವರ ವಿಚಾರಧಾರೆಯಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡನು. ಆತ ಶೇಕ್ಸ್‌ಪಿಯರ್ ಹಾಗೂ ಸರ್ ವಾಲ್ಟರ್ ಸ್ಕಾಟರಂಥ ಸಾಹಿತಿಗಳಿಗೂ ಋಣಿಯಾಗಿದ್ದಾನೆ. ತನ್ನ ಪ್ರಥಮ ಕೃತಿಯಾದ 'ಎ ಕನ್ಫೆಶನ್ ಆಫ್ ಎ ಥಗ್'ದಲ್ಲಿ ಬಳಸಿದ ಅನೇಕ ಸಾಲುಗಳು ಶೇಕ್ಸ್‌ಪಿಯರ್‌ನಿಂದ ಪಡೆದುಕೊಂಡಂಥವಾಗಿವೆ.

ಭಾರತದ ಪ್ರಭಾವ

ನಿಜವಾಗಿಯೂ ಟೇಲರನ ವ್ಯಕ್ತಿತ್ವವನ್ನು ರೂಪಿಸಿದ್ದು, ದೃಷ್ಟಿಯನ್ನು ವಿಶಾಲಗೊಳಿಸಿದ್ದು ಭಾರತವಾಗಿದೆ. ಭಾರತೀಯ ಧರ್ಮ, ಸಂಸ್ಕೃತಿ, ಕಲೆ, ಶಿಲ್ಪಕಲೆ ಮತ್ತು ನಾಗರೀಕತೆಗಳೆಲ್ಲ ಅವನ ಮೇಲೆ ಬಹಳಷ್ಟು ಪರಿಣಾಮ ಮಾಡಿದವು. ಸಂಪೂರ್ಣ ತಿಳುವಳಿಕೆಯಿಂದಲೇ ಆತ ಹಿಂದುಗಳನ್ನು, ಮುಸಲ್ಮಾನರನ್ನು ಹೊಗಳಿದ ಮತ್ತು ಅದನ್ನು ತನ್ನ ದೇಶಬಾಂಧವರಿಗೆ ತಿಳಿಸಿದ. ಆತ ಮಾನಸಿಕವಾಗಿ ಭಾರತೀಯನೇ ಆಗಿಬಿಟ್ಟಿದ್ದ. ನೋಡಲು ಮಾತ್ರ ಬ್ರಿಟಿಷನಾಗಿ ಕಾಣುತ್ತಿದ್ದ. ಆತ ಭಾರತದ ಭಾಷೆಗಳಾದ ಸಂಸ್ಕೃತ, ತೆಲುಗು, ಮರಾಠಿ ಹಾಗೂ ಹಿಂದೂಸ್ತಾನಿಗಳಲ್ಲಿ ಪರಿಣತನಾಗಿದ್ದ. ಭಾರತದ ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾಭಾರತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ. ಕಾಳಿದಾಸ, ಭವಭೂತಿ ಮೊದಲಾದ ಸಂಸ್ಕೃತ ಕವಿಗಳ ಕಾವ್ಯಗಳ ಭಾಷಾಂತರವನ್ನು ಓದಿ ತಿಳಿದುಕೊಂಡಿದ್ದ. ಶ್ರೀಕೃಷ್ಣನ ಬಗ್ಗೆ ಪಾರಿಜಾತದಂಥ ಬಯಲಾಟಗಳನ್ನು ನೋಡಿಯೂ ಅರಿತುಕೊಂಡಿದ್ದ. ಅದರ ಮುಖಾಂತರ ಭಾಗವತವನ್ನೂ ಬಲ್ಲವನಾಗಿದ್ದ.

ಭಾರತವು ಅವನಿಗೆ ಸೃಜನಶೀಲ ಸಾಹಿತಿಯಾಗಲು ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಅಂದರೆ ಕಥೆ, ಪಾತ್ರ, ಘಟನೆ ಮೊದಲಾದವುಗಳನ್ನು ಒದಗಿಸಿಕೊಟ್ಟಿತು. ಒಂದು ವೇಳೆ ಆತ ಭಾರತೀಯರೊಡನೆ ನಿಕಟ ಸಂಪರ್ಕ ಹೊಂದಿ ಬಾಳಿರದಿದ್ದರೆ ಐತಿಹಾಸಿಕ ಸುಂದರ ಕಾದಂಬರಿಗಳನ್ನು ಬರೆಯುವ ಸಾಹಸವನ್ನು ಮಾಡುತ್ತಿರಲಿಲ್ಲ. ಆತ ನಿಜ ಜೀವನದಲ್ಲಿ ಅಮೀರ ಅಲಿಯಂಥವರನ್ನು, ಚೀತೂ ಮತ್ತು ಗಫರಖಾನರಂತ ದುರುಳರನ್ನು, ಕಾಸಿಂ ಆಲಿ ಪಟೇಲರಂಥ ಪರಾಕ್ರಮಿಗಳನ್ನು, ಸದ್ಗುಣ ಸಂಪನ್ನರಾದ ಅಮೀನಾ, ಝೋರಾ, ತಾರಾ, ಸೀತಾರಂಥ ಮಹಿಳೆಯರನ್ನು ನೋಡಿರಲೇಬೇಕು.

ಪುರಾತನ ವೈಭವಯುತ ಭಾರತದ ನಿಜವಾದ ಪ್ರೇಮಿ ಹಾಗೂ ಹೊಗಳುವವನಾತ ನಾಗಿದ್ದರಿಂದ ಭಾರತವು ಕಲೆ ಹಾಗೂ ವಿಜ್ಞಾನದಲ್ಲಿ ಮಾಡಿದ ಸಾಧನೆಗಳನ್ನು ಮೆಚ್ಚಿಕೊಂಡು ಹೀಗೆ ಬರೆದಿದ್ದಾನೆ: "ಭಾರತವು ಪಾಶ್ಚಿಮಾತ್ಯ ದೇಶಗಳಲ್ಲಿ ಹುಟ್ಟದಂಥ ಶ್ರೇಷ್ಠ ಮತ್ತು ಸ್ಮರಣೀಯ ವ್ಯಕ್ತಿಗಳಿಗೆ ಜನ್ಮ ಕೊಟ್ಟಿದೆ."

ಆತ ಭಾರತದ ಕೇವಲ ಕಲೆ ಹಾಗೂ ವಿಜ್ಞಾನಕ್ಕೆ ಮನಸೋತು ಹೋಗದೆ ಇಲ್ಲಿಯ ಧರ್ಮ ಹಾಗೂ ಆಧ್ಯಾತ್ಮಿಕತೆಗೂ ಮಾರುಹೋಗಿದ್ದಾರೆ. ವಿಜಯನಗರದ ವಿನಾಶವಾದ ಕಲಾಕೃತಿಗಳನ್ನು ವೀಕ್ಷಿಸಿ ಆಶ್ಚರ್ಯಚಕಿತನಾಗಿ ಪುಳಕಿತನಾಗಿದ್ದಾನೆ. ಕನಕಗಿರಿಯಲ್ಲಿಯ ಒಂದೂ ದೇವಾಲಯವನ್ನು ನೋಡಿ ಹರ್ಷಗೊಂಡು- "ನಾನು ಇಲ್ಲಿರುವಂಥ ಹಿಂದು ದೇವಾಲಯವನ್ನು ಈ ಮೊದಲು ಕಂಡಿರಲೇ ಇಲ್ಲ" ಎಂದು ಉದ್ಗಾರ ತೆಗೆದಿದ್ದಾನೆ. ಅದರಂತೇ ಭಾರತೀಯ ಸಂಗೀತವನ್ನು, ಜಾನಪದ ನಾಟಕವನ್ನು ಮೆಚ್ಚಿಕೊಂಡಿದ್ದನು. ಅದನ್ನು ತನ್ನದೆ ಆದ ಶಬ್ದಗಳಲ್ಲಿ ಬಣ್ಣಿಸಿದ್ದಾನೆ: "ಶ್ರೀ ಮದ್ಭಾಗವತ ಗ್ರಂಥದಲ್ಲಿಯ ಕೃಷ್ಣನ ಕಥೆಯ ಮೇಲೆ ಆಧರಿಸಿ ನಾಟಕದಂಥ ನಾಟಕವನ್ನು ನಾನು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ. ಪ್ರಮುಖ ಪಾತ್ರಧಾರಿಯು ಒಬ್ಬ ತರುಣಿಯಾಗಿದ್ದು ಸುಂದರ ಪೋಷಾಕಿನಲ್ಲಿ ಹಾಡಿದಳು. ಆಗಾಗ್ಗೆ ಸಮೂಹಗಾನವೂ ಇರುತ್ತಿತ್ತು. ಕೃಷ್ಣನಿಂದ ಅಗಲಿದ ಅವಳು ವಿರಹವೇದನೆ ವ್ಯಕ್ತಪಡಿಸಿ, ಅಭಿನಯಿಸಿದಳು. ಅದರಂತೆ ಇನ್ನಿತರ ಭಾವನೆಗಳನ್ನು ತೋರಿಸಿ ಮನಸೂರೆ ಗೊಂಡಳು. ಇವೆಲ್ಲ ನಾಟಕ ಮಾಡಿದ ಜನರು ಅಶಿಕ್ಷಿತ ವಡ್ಡರಾಗಿದ್ದರು. ಅವರಿಗೆ ಬರಹವೇ ಬರುತ್ತಿರಲಿಲ್ಲ. ಆ ನಾಟಕ-ಗಾಯನ ಕಲೆಯನ್ನು ಅವರು ಕಂಠಪಾಠ ಮಾಡಿದ್ದು ಅನುವಂಶಿಕವಾಗಿ ಕಲಾರಾಧನೆ ಮಾಡುತ್ತ ಬಂದವರಾಗಿದ್ದರು. ನಾನು ನೋಡಿದ ಈ ನಾಟಕವು ಪವಿತ್ರ ಗ್ರಂಥವೊಂದರಿಂದ ಆಯ್ದುಕೊಂಡ ಭಾಗವಾಗಿತ್ತು. ನಾಟಕದಲ್ಲಿ ಆಗಾಗ್ಗೆ ಹಾಸ್ಯದ ಚುಗ್ಗಿಗಳು ಏಳುತ್ತಿದ್ದವು. ಸ್ತ್ರೀ ಪಾತ್ರಧಾರಿಗಳಿಗೆ ಸ್ವಲ್ಪ ವಿಶ್ರಾಂತಿ ಕೊಡುವದಕ್ಕಾಗಿ ವಿನೋದದ ಮಾತಿನ ಮೋಜು ಇರುತ್ತಿತ್ತು. ಇದನ್ನೆಲ್ಲ ನೋಡಿ ಚಿಕ್ಕ ಮಕ್ಕಳಿಗೆ ಹಾಗೂ ನನಗೆ ಬಹಳಷ್ಟು ಮನರಂಜನೆ ಆಯಿತು.... ಈ ರೀತಿಯ ಬಯಲಾಟಗಳು ಹಿಂದೂ ಧರ್ಮ ತೋರಿಸುತ್ತ ಸುಂದರ ಕಲೆ ಹೊಂದಿದ್ದವು."

ಅದರಂತೆ ಜ್ಯೋತಿಷ್ಯ ಶಾಸ್ತ್ರ ಹಾಗೂ ಖಗೋಲ ಶಾಸ್ತ್ರಗಳಲ್ಲಿ ಭಾರತೀಯರು ನಿಖರ ವಾದುದನ್ನು ತಿಳಿಸಿಕೊಡುವುದನ್ನು ನೋಡಿ ಆತ ಚಕಿತನಾಗಿದ್ದನು. ಸುರಪುರದ ರಾಜಾ ವೆಂಕಟಪ್ಪ ನಾಯಕನು ತನ್ನ ಇಪ್ಪತ್ತಾಲ್ಕನೆಯ ವಯಸ್ಸಿನಲ್ಲಿ ಸಾಯುವನು ಎಂದು ಮೊದಲೇ

ಹೇಳಿದ್ದನ್ನು ತಿಳಿದು ವಿಸ್ಮಿತನಾಗಿ ಹೋಗಿದ್ದನು. ಸ್ವತಃ ತನ್ನ ಬಗ್ಗೆಯೇ ಜ್ಯೋತಿಷಿಯೊಬ್ಬ ಹೇಳಿದಂತೆಯೇ ನಿಜವಾಗಿ ಆದುದ್ದನ್ನು ತಿಳಿದುಕೊಂಡು ಅಚ್ಚರಿಗೊಂಡನು. ಜ್ಯೋತಿಷಿಯೊಬ್ಬ ಆತನಿಗೆ "ನೀವು ಇಲ್ಲಿ ಬಹು ವಿಸ್ತಾರವಾದ ಭೂ ಭಾಗದಲ್ಲಿ ರಾಜನಂತೆ ಆಡಳಿತ ನಡೆಸುವಿರಿ" ಎಂದು ಮೊದಲೇ ಹೇಳಿದ್ದನು.

ಈ ರೀತಿ ಭಾರತದ ಇತಿಹಾಸ ಹಾಗೂ ಪುರಾಣಗಳಲ್ಲಿರುವ ಪ್ರೀತಿ ಧರ್ಮ, ಸಂಸ್ಕೃತಿ, ನಾಗರಿಕತೆ, ಕಲೆ, ವಿಜ್ಞಾನ, ತತ್ವಜ್ಞಾನ, ಮೊದಲಾದವುಗಳ ಅಧ್ಯಯನ ಇವೆಲ್ಲ ಸೇರಿಕೊಂಡು ಅವನ ಬಹುಮುಖಿ ವ್ಯಕ್ತಿತ್ವವನ್ನು ರೂಪಿಸಿದವು.

ಜಾಗತಿಕ ದೃಷ್ಟಿಕೋನ

ಭಾರತವು ಅವನ ಹೃದಯವನ್ನು, ಬುದ್ಧಿಯನ್ನು ಬಹಳಷ್ಟು ಬದಲಾಯಿಸಿಬಿಟ್ಟಿತ್ತು. ಜಗತ್ತಿನ ಎಲ್ಲ ಧರ್ಮಗಳು ಜನರಿಗೆ ಶಾಂತಿಯಿಂದ ಒಂದಾಗಿ ಬಾಳಲು ಪ್ರೇರೇಪಿಸುತ್ತವೆ ಎಂಬುದನ್ನು ಚೆನ್ನಾಗಿ ಅರಿತವನಾಗಿದ್ದನು. ಆದುದರಿಂದಲೇ ಆತ ಇಸ್ಲಾಂ ಧರ್ಮ ಶ್ರೇಷ್ಠತೆಯನ್ನು ಜನರಿಗೆ ತಿಳಿಸಿಕೊಟ್ಟನು. "ಕ್ರಿಶ್ಚಿಯನ್ ಓದುಗರೇ, ನಾನು ಇಲ್ಲಿ ಬರೆದುದನ್ನು ಓದಿ ಸಿಡಿದೇಳಬೇಡಿ. ನೀವು ದ್ವೇಷಿಸುವ ಧರ್ಮ ಗ್ರಂಥವೂ (ಕುರಾನ್) ಅನೇಕ ಒಳ್ಳೆಯ ಬೋಧನೆಯನ್ನು ಮಾಡುತ್ತದೆ." ಅದರಂತೆಯೇ ಹಿಂದೂ ಧರ್ಮದ ಘನತೆಯನ್ನು ಅದರ ಪ್ರತಿಪಾದಕ, ಪ್ರಾತಿನಿಧಿಕ ವ್ಯಕ್ತಿಯಾದ ವ್ಯಾಸಶಾಸ್ತ್ರಿ ಎಂಬ ಪಾತ್ರದ ಮುಖಾಂತರ ತಿಳಿಸುತ್ತಾನೆ. "ಓ ಕ್ರಿಶ್ಚಿಯನ್ ಓದುಗನೇ, ಅವನ ಭಾವನೆಗಳನ್ನು ನಿನ್ನ ಭಾವನೆಗಳ ಆಧಾರದ ಮೇಲೆ ನೋಡಬೇಡ. ನೀನು ಮಾತ್ರ ಪವಿತ್ರವಾದ, ಸುಲಭವಾದ ಧರ್ಮ ಹೊಂದಿರುವಿ... ನಿನ್ನಲ್ಲಿ ಶಾಂತವಾದ, ಪ್ರೇಮದ ಸತ್ಯಯುತವಾದ, ಸಹಜವಾದ, ಜೀವನದ ಗುರಿ ಇದೆ. ಆದರೆ ಅವನೂ ಬಹಳಷ್ಟು ಸುಶಿಕ್ಷಿತರಾದ ಹಿಂದುಗಳಲ್ಲಿ ಇರುವಂಥ ಅದೇ ದೇವರಲ್ಲಿ ವಿಶ್ವಾಸ ಇರಿಸಿದ್ದಾನೆ. ಆದರೆ ಆ ದೇವರು ಭವ್ಯವಾದ ಸುಂದರವಾದ ಪುರಾಣವುಳ್ಳವನಾಗಿದ್ದಾನೆ"

ಇದೆಲ್ಲವೂ ಟೇಲರನು ಎಲ್ಲ ಧರ್ಮಗಳಲ್ಲಿ ಹೊಂದಿದ್ದ ಪ್ರೀತಿಯ, ಗೌರವದ ದ್ಯೋತಕಗಳಾಗಿವೆ. ಆತ ನಿಜವಾದ ಕ್ರಿಶ್ಚಿಯನ್ ಆಗಿದ್ದುಕೊಂಡು ತಾನಿದ್ದಲ್ಲೆಲ್ಲ ದೇವರ ಸಾಮ್ರಾಜ್ಯ ಸ್ಥಾಪಿಸಬಯಸುವ ಆಸೆ ಹೊಂದಿದವನಾಗಿದ್ದ. ಭಾರತದೊಳಗಿನ ಎಲ್ಲ ಜನರ ಬಗ್ಗೆ ಅಪಾರ ಪ್ರೀತಿ ಕಳಕಳಿ, ದಯೆ ಸಹಾನುಭೂತಿ ಹೊಂದಿದವನಾಗಿದ್ದ.

ಬಹುಕಾಲ ಭಾರತದಲ್ಲಿ ಸಕ್ರಿಯವಾಗಿ ಬಾಳಿದ್ದರಿಂದ ಅವನಲ್ಲಿ ತುಲನಾತ್ಮಕ ದೃಷ್ಟಿಕೋನವೂ ಬೆಳೆಯಿತು. ಅದನ್ನು ಅವನು ಆಗಾಗ್ಗೆ ತೋರಿಸಿಕೊಟ್ಟಿದ್ದಾನೆ. ತನ್ನ ದೇಶದ ಜನ ಜೀವನವನ್ನು ಭಾರತೀಯರ ಜನಜೀವನದೊಂದಿಗೆ ಹೋಲಿಸಿ, ವ್ಯತ್ಯಾಸವನ್ನು ಮಾಡಿ ನೋಡಿ, ವಿಚಾರಿಸಿ ತನ್ನ ಅಭಿಪ್ರಾಯವನ್ನು ಬಣ್ಣಿಸುವಾಗ - "ನಮ್ಮ ಮನೆಗಳಲ್ಲಿ ಇರುವಂಥ ಕಪಾಟು, ಖುರ್ಚಿ, ಮೇಜುಗಳು ಆ ಮನೆಯಲ್ಲಿರಲಿಲ್ಲ" ಎಂದೆನ್ನುತ್ತಾನೆ. ಭಾರತೀಯರು ಲಗ್ನದ ಸಮಯದಲ್ಲಿ ತೊಡುವ ಬಟ್ಟೆ ಬರೆಗಳ ಜೊತೆಗೆ ಹೋಲಿಸುತ್ತ - "ಇಂಗ್ಲಿಷ್ ತಾಯಂದಿರೆ, ಭಗಿನಿಯರೇ ವಿವಾಹದ ಸಮಯದಲ್ಲಿ ಸುಂದರ ಬಟ್ಟೆ ತೊಡುವುದು ಕೇವಲ ನಮ್ಮ ದೇಶದಲ್ಲಿ, ನಮ್ಮ

ಸಮಾಜದಲ್ಲಷ್ಟೇ ಇದೆ ಎಂದು ಬಗೆಯದಿರಿ" ಎಂದೆನ್ನುತ್ತಾನೆ. ಭಾರತದ ನಾಟಕವನ್ನು ಇಂಗ್ಲಿಷ್ ನಾಟಕದೊಡನೆ ಹೋಲಿಸಿ ಹೇಳಿದ್ದಾನೆ. ಭಾರತೀಯರು ಪ್ರೇಮಿಸುವ ವಿಧಾನವನ್ನು ಇಂಗ್ಲಿಷಿನವರು ಪ್ರೇಮಿಸುವ ವಿಧಾನವನ್ನು ಹೋಲಿಸಿದ್ದಾನೆ. ಈ ತುಲನಾತ್ಮಕತೆಯ ಒಂದು ಕುತೂಹಲಕಾರಿ ಸನ್ನಿವೇಶವು ಚಾಂದಬೀಬಿಯನ್ನು ತನ್ನ ದೇಶದ ರಾಣಿಯಾದ ಮೊದಲನೆ ಎಲಿಜಬೆಥಳ ಜೊತೆಗೆ ಹೋಲಿಸಿ ಸಾಮ್ಯ, ವೈಷಮ್ಯ ತಿಳಿಸಿದ್ದಾನೆ.

ಯಾವಾಗ ಬ್ರಿಟಿಷರು ತಮ್ಮ ಅಹಂಕಾರ, ದುರಭಿಮಾನಗಳಲ್ಲಿ ಭಾರತೀಯರನ್ನು ದ್ವೇಷಿಸುತ್ತಿದ್ದರೋ ಮತ್ತು ಅವರನ್ನು ಅಯೋಗ್ಯ ಗುಲಾಮರೆಂದು ಬಗೆಯುತ್ತಿದ್ದರೋ, ಅನಾಗರಿಕ ಪಶುಗಳೆಂದು ಹೀಗಳೆಯುತ್ತಿದ್ದರೋ, ಹೊಲಸು ಕರಿಯರೆಂದು ಕರೆಯುತ್ತಿದ್ದರೋ, ಆಗ ಟೇಲರನು ಭಾರತೀಯರ ಬಗ್ಗೆ ತೋರಿದ ಪ್ರೀತಿ ಗೌರವಗಳು ಅವರಿಗೆ ಅಸಹಜವೆಂದೆನಿಸಿದವು. ಅವನು ಭಾರತವನ್ನು ಕುರುಡನಾಗಿ ಪ್ರೀತಿಸಿರಲಿಲ್ಲ. ನಿಜವಾದ ಭಾರತದ ಭವ್ಯತೆ, ಘನತೆಯನ್ನು ತಿಳಿದೇ ಆತ ಹೊಗಳಿ ಹಾಡಿದ. ಹಾಗಿರದಿದ್ದರೆ ಆತ ಭಾರತದಲ್ಲಿಯೇ ಮಡಿಯಬೇಕೆಂಬ ತನ್ನ ಅಂತಿಮ ಇಚ್ಛೆ ಎಂಬುದಾಗಿ ಹೇಳುತ್ತಿರಲಿಲ್ಲ....:

"ನನ್ನ ಆರೋಗ್ಯ ಚೆನ್ನಾಗಿಯೇ ಉಳಿದಿದ್ದರೆ, ಭಾರತವನ್ನು ಬಿಟ್ಟು ತಾಯ್ನಾಡಿಗೆ ಹೋಗುವ ವಿಚಾರವನ್ನು ನಾನು ಮಾಡುತ್ತಿರಲಿಲ್ಲ. ಯಾಕೆಂದರೆ ನಾನು ಭಾರತವನ್ನು, ಭಾರತೀಯರನ್ನು ಅಷ್ಟೊಂದು ಪ್ರೀತಿಸಿದ್ದೇನೆ... ದೇವರು ಇಚ್ಛಿಸಿದರೆ ನಾನು ಭಾರತದಲ್ಲಿಯೇ ಬಾಳಿ ಮಡಿಯ ಬಯಸುವೆ."

ನಮ್ಮ ನಾಡಿನಲ್ಲಿದ್ದಾಗ ಆತ ಜನರ ಮಿತ್ರ, ಮಾರ್ಗದರ್ಶಕ ಹಾಗೂ ಬೋಧಕನಾಗಿ ಜೀವಿಸಿ ಜನರ ವಿತ್ತ - ಜೀವನವನ್ನು ಸಂರಕ್ಷಿಸಿದ. ಅವರನ್ನು ಅನಾಗರೀಕತೆಯಿಂದ ಆಧುನಿಕತೆಯ ಕಡೆಗೆ ನಡೆಸಿಕೊಂಡು ಬಂದ. ಭಾರತಕ್ಕೆ ಆಡಳಿತಾಧಿಕಾರಿಯಾಗಿ ಬರುವ ತನ್ನ ದೇಶ ಬಾಂಧವರಿಗ ಉಪದೇಶಪರ ಮಾತುಗಳನ್ನು ಕಿವಿಯಲ್ಲಿ ಹೇಳಿದ.

"ಭಾರತಕ್ಕೆ ಯಾರೇ, ಯಾವುದೇ ಕಾರ್ಯ ಕಾರಣಗಳಿಗೆ ಹೋಗಲಿ, ಅವರೆಲ್ಲರೂ ಭಾರತೀಯರೊಡನೆ ವಿನಯ ಹಾಗೂ ಸದ್ಭಾವನೆಯಿಂದ ವರ್ತಿಸಬೇಕೆಂದು ಉಪದೇಶಿಸುವೆ. ನನ್ನ ಅನುಭವದಿಂದ ನಾನು ಅರಿತುಕೊಂಡಿದ್ದೇನೆಂದರೆ ವಿನಯ, ಸಹಾನುಭೂತಿ ಹಾಗೂ ದೃಢ ನಿರ್ಧಾರವಿದ್ದರೆ ಯಾವುದೇ ಅಧಿಕಾರಿಯು ಅಸಾಧ್ಯವಾದುದನ್ನು ಸಾಧಿಸಬಲ್ಲ" ಎಂಬುದಾಗಿದೆ. ಮತ್ತೆ ಮುಂದುವರಿಸಿ ಹೇಳುತ್ತಾನೆ-'ನಾನೆಂದಿಗೂ ಪ್ರಸಿದ್ಧಿಯ ಬೆನ್ನು ಹತ್ತಲಿಲ್ಲ. ನಾನು ಎಲ್ಲರಲ್ಲಿ ನ್ಯಾಯವಂತಿಕೆಯಿಂದ ನಡೆದುಕೊಳ್ಳಲು ಯತ್ನಿಸಿದೆ. ಇದೇ ನನ್ನ ಯಶಸ್ಸಿನ ಗುಟ್ಟಾಗಿದೆ.'

ಜನರು ಅವನಿಗೆ ಎಷ್ಟೊಂದು ಋಣಿಯಾಗಿದ್ದರೆಂದರೆ ಅವರು ಅವನನ್ನು ಆರಾಧಿಸಿ, ದೀಪದ ಆರತಿ ಮಾಡುತ್ತಿದ್ದರು. ಮತ್ತು ಅವನ ಗುಣಗಾನವನ್ನು ಕವಿತೆಯಲ್ಲೂ ಮಾಡುತ್ತಿದ್ದರು. ಅತ್ಯಂತ ಪೂಜ್ಯ ಹಾಗೂ ಗೌರವ ಭಾವನೆಯಿಂದ ಅವನನ್ನು ಮಹದೇವ ಬಾಬಾ ಎಂದೂ ಕರೆಯುತ್ತಿದ್ದರು.

ಆ ಕಾಲದಲ್ಲಿ ಅನೇಕ ಜನ ಆಡಳಿತಗಾರರೂ, ವಿಚಾರಶೀಲರೂ, ಪಂಡಿತರೂ, ಸಮಾಜ ಸುಧಾರಕರೂ ಆಗಿ ಹೋದರು. ಆದರೆ ಯಾರೂ ಟೇಲರನಂತೆ ಇರಲಿಲ್ಲ. ಟೇಲರಿನಿಗೂ ಇತರರಿಗೂ ಮುಖ್ಯ ವ್ಯತ್ಯಾಸವೆಲ್ಲಿತ್ತೆಂದರೆ ಉಳಿದವರ್‍ಯಾರೂ ಭಾರತೀಯರೊಂದಿಗೆ ಬೆರೆತು ಕೊಂಡು, ಆಳವಾಗಿ ಒಳಹೊಕ್ಕು ನೋಡಲಿಲ್ಲ, ತಿಳಿದುಕೊಳ್ಳಲಿಲ್ಲ, ತಾದಾತ್ಮ್ಯಭಾವನೆ ತಾಳಲಿಲ್ಲ. ಕ್ಷಣಕಾಲ ಬಾಳಿ ಪಕ್ಕಿಯಂತೆ ಹಾರಿಹೋಗಿಬಿಟ್ಟಿದ್ದರು. ಆದ್ದರಿಂದ ನಿಜವಾದ ಭಾರತದ ದರ್ಶನವೇ ಅವರಿಗಾಗಲಿಲ್ಲ. ಟೇಲರ ಮಾತ್ರ ಬೆರೆತು, ಬದುಕಿ, ನಿಜವಾದ ಭಾರತದ ನಾಡಿಯನ್ನು ಹಿಡಿದು ನೋಡಿದ.

ಟೇಲರನಲ್ಲಿ ಶ್ರೇಷ್ಠ ಆಡಳಿತಗಾರ ಹಾಗೂ ಶ್ರೇಷ್ಠ ಲೇಖಕ ಎಂಬ ಎರಡು ಮುಖಗಳನ್ನು ಕಾಣುತ್ತೇವೆ.

ಮೊದಲನೆಯದಾಗಿ ಆಡಳಿಗಾರನಾಗಿ ಅವನಲ್ಲಿ ಮೆಚ್ಚಿಕೊಳ್ಳುವಂಥ ಮುಖ್ಯಗುಣವೆಂದರೆ ಪ್ರೇಮಪೂರ್ಣ ದಯಾಗುಣ. ಯಾವುದೇ ಧರ್ಮ, ಜಾತಿ, ಮತ ಲೆಕ್ಕಿಸದೆ ಎಲ್ಲರನ್ನೂ ಪ್ರೀತಿಸಿದವನಾತ. ಇದರಿಂದಲೇ ಆತ ನಿಯಂತ್ರಿಸಲಸಾಧ್ಯವಾದ ಬೇಡರ ಮನಸ್ಸನ್ನು ಗೆದ್ದು ಬಿಟ್ಟ. ಸುರಪುರಕ್ಕೆ ಮೊಟ್ಟಮೊದಲು ಆಗಮಿಸಿದಾಗ ರಾಜಕುಮಾರ ವೆಂಕಟಪ್ಪನಾಯಕ ಹಾಗೂ ಅವನ ತಾಯಿಯಾದ ರಾಣಿ ಇಬ್ಬರೂ ಅವನಿಗೆ ಸುಸ್ವಾಗತ ಕೋರಿದರು. ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಟೇಲರನು ಮಂಡಿಸಿದ ಎಲ್ಲ ಕರಾರುಗಳಿಗೆ ರಾಣಿಯು ಒಪ್ಪಿದಳು. ರಾಜಕೀಯ ಬಿಕ್ಕಟ್ಟನ್ನು ಅತ್ಯಂತ ಚಾಣಕ್ಷತನದಿಂದ, ಪ್ರಾಮಾಣಿಕತೆಯಿಂದ ಬಗೆಹರಿಸಿದ್ದನ್ನು ನೋಡಿ ರಾಣಿಯು "ನೋಡಿ ನನ್ನ ಮಗನಂತೂ ನಿಮ್ಮ ಹತ್ತಿರ ಬಂದು ಕುಳಿತಿದ್ದಾನೆ... ಇನ್ನು ನೀವೇ ನಮಗೆಲ್ಲರಿಗೂ ತಂದೆಯಾಗಿರಬೇಕು" ಈ ರೀತಿ ಟೇಲರನು ಕೇವಲ ರಾಜನಿಗೆ 'ಅಪ್ಪ' ಆಗದೆ ಇಡೀ ಬೇಡರ ಜನಾಂಗಕ್ಕೆ ತಂದೆಯಂತಾದನು ಅವರೆಲ್ಲರೂ... "ಇನ್ನು ನೀವು ಹಸ್ತಗಳನ್ನು ನಮ್ಮ ತಲೆಯ ಮೇಲಿಡಿರಿ. ಇಂದಿನಿಂದ ನಾವು ನಿಮ್ಮ ವಿಧೇಯಕ ಮಕ್ಕಳಾಗಿದ್ದೇವೆ." ಎಂದು ಅಂದರು. ಈ ರೀತಿಯಾಗಿ ಟೇಲರನು ಅವರಿಗೆ ದೇವ ಕಳುಹಿಸಿದ ತಂದೆಯಂತಾದ; ಪೋಷಕ, ಸಂರಕ್ಷಕನಾದ.

ಅವನಲ್ಲಿರುವ ಎರಡನೆ ಶ್ರೇಷ್ಠ ಗುಣವೆಂದರೆ ಪರೋಪಕಾರ ಬುದ್ಧಿ. ಆತ ನೂರಾರು ಜನರಿಗೆ ಬೇಸಾಯಕ್ಕೆ ಯೋಗ್ಯವಾದ ಜಮೀನನ್ನು ಹಂಚಿಕೊಟ್ಟು ಒಕ್ಕಲುತನ ಮಾಡಿ ಬಾಳಲು ಪ್ರೇರೇಪಿಸಿದ. ಅಲ್ಲದೆ ರಾಜ್ಯದ ಬೊಕ್ಕಸದಿಂದ ಆರ್ಥಿಕ ನೆರವನ್ನು ನೀಡಿದ. ಇದರ ಪರಿಣಾಮ ವಾಗಿ ಯಾವ ಬೇಡರು ಕೊಲೆ, ಸುಲಿಗೆ, ಧಾನ್ಯ ಲೂಟಿ, ದನ-ಕರು ಓಡಿಸಿಕೊಂಡು ಹೋಗುವುದನ್ನು ಮಾಡುತ್ತಿದ್ದರೋ ಅವರೆಲ್ಲ ತಮ್ಮ ದುಷ್ಟವೃತ್ತಿಗಳನ್ನು ಬಿಟ್ಟು ಒಕ್ಕಲುತನ ಮಾಡಿ ಬಾಳಲು ಮುಂದಾದರು. ಆತ ಅವರೆಲ್ಲರಿಗೂ ನಾಗರಿಕ ಜೀವನವನ್ನು, ವರ್ತನೆ ಯನ್ನು ತಿಳಿಸಿಕೊಟ್ಟ.

ಮೂರನೆಯದಾಗಿ ಆತನಂಥ ಕೊಡುಗೈ ದೊರೆ ಯಾರೂ ಇರಲಿಲ್ಲ. ೧೮೫೫ರಲ್ಲಿ ಭೀಕರ ಬರಗಾಲ ಬಿದ್ದಾಗ ಸಿರಿವಂತರಿಗೂ ಬದುಕುವುದು ಅಸಾಧ್ಯವಾಗಿತ್ತು. ಆಹಾರವಿಲ್ಲದೆ ಬಡವರಂತೂ ಬೀದಿ ಹೆಣವಾಗುವಂತಿತ್ತು. ಅಂತ ಘೋರ ಪರಿಸ್ಥಿತಿಯಲ್ಲಿ ಟೇಲರನು ಅನೇಕ

ಪರಿಹಾರ ಯೋಜನೆಗಳನ್ನು ಕೈಗೆತ್ತಿಕೊಂಡು ಬಡವರಿಗೆ ಧನ-ಧಾನ್ಯ ನೀಡಿದ. ತನ್ನ ಕೈಯಿಂದ ಹಣ ಖರ್ಚು ಮಾಡಿ ನೂರಾರು ಜನರು ಬದುಕಿ ಉಳಿಯುವಂತೆ ಮಾಡಿದ. ಅಲ್ಲದೆ ನೂರಾರು ರೋಗ-ರುಜಿನ ಪೀಡಿತರಿಗೆ ಆಸ್ಪತ್ರೆಗಳನ್ನು ತೆರೆದು ಔಷಧ ಉಪಚಾರ ವ್ಯವಸ್ಥೆಯನ್ನು ಮಾಡಿದ.

ಮ್ಯಾಜಿಸ್ಟ್ರೇಟ್‌ನೆಂದು ಕೆಲಸ ಮಾಡುತ್ತಿದ್ದಾಗ ಅತ್ಯಂತ ನ್ಯಾಯವಂತಿಕೆಯನ್ನು ತೋರಿದ. ಅಪರಾಧಿಗಳಿಗೆ ಘೋರ ಶಿಕ್ಷೆ ವಿಧಿಸುತ್ತಿದ್ದ. ದುಷ್ಟರಿಗೆ ವಜ್ರದಂತೆ ಕಠೋರ ಬಡ ಹಾಗೂ ಮುಗ್ಧರಿಗೆ ವಿನೀತ.

ಯಾವುದೇ ವಿಷಯದಲ್ಲಿಯೂ ಪ್ರಾಮಾಣಿಕತೆಯನ್ನು ಎಂದಿಗೂ ಬಿಟ್ಟುಕೊಟ್ಟಿರಲಿಲ್ಲ. ಸುರಪುರದ ರಾಣಿಯು ಒಮ್ಮೆ ಅವನ ಹೆಂಡತಿಗೆ ಅಮೌಲ್ಯವಾದ ವಜ್ರದ ಸರವನ್ನೇ ಕೊಟ್ಟು ಸಂತುಷ್ಟಪಡಿಸಲು ಯತ್ನಿಸಿದಾಗ ಆತ ಅವಳಿಗೆ ಹೇಳಿದ - "ನಿಮಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ನೀವು ಈ ರೀತಿ ಕಾಣಿಕೆ ಕೊಟ್ಟು ಆಸೆ ಹಚ್ಚಬೇಡಿರಿ" ಎಂದು.

ಯಾವುದೇ ಬಗೆಯ ಸಾಮಾಜಿಕ ಸುಧಾರಣೆಯನ್ನು ಆತ ಕೈಗೊಂಡರೆ ಅದರ ಹಿಂದೆ ಮನಃ ಪೂರ್ವಕವಾಗಿ ಕಾರ್ಯಮಾಡುವ ಹಂಬಲ, ಜನ ಸೇವೆಯೇ ಜನಾರ್ಧನ ಸೇವೆ ಎಂಬ ಭಾವನೆ ಅಡಕವಾಗಿರುತ್ತಿತ್ತು.

ಭಾರತದಲ್ಲಿಯ ಒಳಿತನ್ನಾಗಲಿ, ಕೆಟ್ಟದನ್ನಾಗಲಿ, ಹೇಳುವಾಗ ಆತನಿಗೆ ಭಿಡೆಭಾರ ಎಂಬುದೇ ಇಲ್ಲ. ಇದ್ದುದನ್ನು ಇದ್ದಂತೆ ಹೇಳುವುದೇ ಆತನ ಗುರಿಯಾಗಿತ್ತು. ಅದನ್ನು ತೋರ್ಪಡಿಸುವಲ್ಲಿ ಆತ ನಿಸ್ಸೀಮನಾಗಿದ್ದ.

ರಿಚರ್ಡ್ ಗಾರೆಟ್ಟ್ ಎಂಬವನು ತನ್ನ 'ಡಿಕ್ಷನರಿ ಆಫ್ ನ್ಯಾಷನಲ್ ಬಿಬ್ಲಿಯೋಗ್ರಫಿ' ಎಂಬ ಪುಸ್ತಕದಲ್ಲಿ ಟೇಲರನ ಸಾಹಿತ್ಯ ಕೃತಿಗಳ ಬಗ್ಗೆ ಹೀಗೆ ಹೇಳಿದ್ದಾರೆ.

"ಅವನ ಎಲ್ಲ ಪುಸ್ತಕಗಳೂ ಅದ್ಭುತವಾಗಿವೆ. ಅವುಗಳಲ್ಲಿ ಸುಂದರವಾದ ಪಾತ್ರ ಚಿತ್ರಣ, ಸುಂದರವಾದ ಘಟನೆಗಳು, ಭಾರತೀಯ ಜೀವನದ ಪದರು ಪದರುಗಳು, ಹವ್ಯಾಸಗಳು, ವಿಚಾರಗಳೂ ಮೂರ್ತರೂಪಗೊಂಡಿವೆ."

ಭಾರತವನ್ನಾಳಿದ ಜನಾಂಗದವನಾಗಿದ್ದರೂ ಆತನಲ್ಲಿ ಜನಾಂಗೀಯ ದ್ವೇಷವೆಂಬುದು ಇರಲಿಲ್ಲ. ಬ್ರಿಟಿಷರ ದರ್ಪ, ದೌರ್ಜನ್ಯ ಅವನಲ್ಲಿ ಎಳ್ಳಷ್ಟು ಕಾಣಸಿಗುವುದಿಲ್ಲ. ಎಲ್ಲರನ್ನೂ ಸಮಾನ ದೃಷ್ಟಿಕೋನದಿಂದ ಕಂಡ ಆತ ಜಗದ ನಾಗರೀಕನಾಗಿದ್ದ; ಅವನಲ್ಲಿ ಪೂರ್ವ ಪಶ್ಚಿಮಗಳ ಅಪೂರ್ವ ಸಂಗಮವಾಗಿದ್ದ.

■

ಸಂಕ್ರಮಣ ಸಾಹಿತ್ಯ ಸ್ಪರ್ಧೆ: ೨೦೦೯

- ಪ್ರತಿ ವರ್ಷದಂತೆ ೨೦೦೯ಕ್ಕಾಗಿ ಸಂಕ್ರಮಣ ಪ್ರಕಾಶನದ ಪರವಾಗಿ ಸಣ್ಣ ಕತೆ, ಕಾವ್ಯ, ಹನಿಗವನ, ಲಲಿತ ಪ್ರಬಂಧ, — ಈ ಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆ ಏರ್ಪಡಿಸಲಾಗಿದೆ.

- <u>ನಿಯಮಗಳು</u>

೧. ಕಾಗದದ ಒಂದೇ ಮಗ್ಗುಲಲ್ಲಿ ಟೈಪು ಮಾಡಿ ಅಥವಾ ಸ್ಪಷ್ಟ ಕೈಬರಹದಲ್ಲಿ ಕಳಿಸಬೇಕು.

೨. ಹಸ್ತ ಪ್ರತಿಗಳನ್ನು ಸ್ಪರ್ಧೆಯ ನಂತರ ವಾಪಸ್ಸು ಕಳಿಸುವುದಿಲ್ಲ.

೩. ಒಬ್ಬರೇ ಯಾವ ಸಾಹಿತ್ಯ ಪ್ರಕಾರದಲ್ಲಾದರೂ ಎಷ್ಟಾದರೂ ಪ್ರವೇಶ (ಎಂಟ್ರಿ) ಕಳಿಸಬಹುದು.

೪. ಸಣ್ಣ ಕತೆ, ಲಲಿತ ಪ್ರಬಂಧಗಳು ಮುದ್ರಣದಲ್ಲಿ ೧೦-೧೨ ಪುಟಗಳಿಷ್ಟಿದ್ದರೆ ಒಳ್ಳೆಯದು.

೫. ಸ್ಪರ್ಧೆಯ ಫಲಿತಾಂಶವನ್ನು ಪ್ರಮುಖ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಗುವುದು. ನೇರವಾಗಿ ಅಂಚೆ ಮೂಲಕ ತಿಳಿಯಬೇಕಿದ್ದರೆ ಹಸ್ತಪ್ರತಿಯ ಜೊತೆಗೆ ಸ್ವವಿಳಾಸದ ಅಂಚೆ ಪಾಕೀಟು ಕಳಿಸಬೇಕು.

೬. <u>ಪ್ರವೇಶ ಧನ</u> :

ಸಣ್ಣ ಕತೆ	:	ಪ್ರತಿಯೊಂದು ಕತೆಗೆ	ರೂ. ೧೫
ಲಲಿತ ಪ್ರಬಂಧ	:	ಪ್ರತಿಯೊಂದು ಪ್ರಬಂಧಕ್ಕೆ	ರೂ. ೧೫
ಕವನ	:	ಪ್ರತಿಯೊಂದು ಕವನಕ್ಕೆ	ರೂ. ೧೦
ಹನಿಗವನ	:	ಪ್ರತಿಯೊಂದು ಹನಿಗವನಕ್ಕೆ	ರೂ. ೦೫

ಪ್ರವೇಶ ಧನವನ್ನು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರವೇ **ಸಂಕ್ರಮಣ ಪ್ರಕಾಶನದ** ಹೆಸರಿನಲ್ಲಿ ಕಳಿಸಬೇಕು. (ಎಂ.ಓ. ಫಾರ್ಮಿನಲ್ಲಿ ಹೆಸರು, ವಿಳಾಸ ಸ್ಪಷ್ಟವಾಗಿ ಬರೆಯಬೇಕು)

- ಸ್ಪರ್ಧೆಗೆ ಸ್ವೀಕರಿಸಲಾದ ಬರಹಗಳಲ್ಲಿ — **ಎರಡು ಸಣ್ಣ ಕತೆ, ಎರಡು ಲಲಿತ ಪ್ರಬಂಧ, ಹತ್ತು ಕವನಗಳು** ಹಾಗೂ **ಇಪ್ಪತ್ತೈದು ಹನಿಗವನ** ಗಳನ್ನು ಆಯ್ಕೆ ಮಾಡಲಾಗುವುದು. ಇವು **ಸಂಕ್ರಮಣದ** ವಿಶೇಷಾಂಕದಲ್ಲಿ ಪ್ರಕಟವಾಗುತ್ತವೆ. ಬಹುಮಾಸಿತರಿಗೆ ಪ್ರಮಾಣ ಪತ್ರದೊಂದಿಗೆ ಪುಸ್ತಕ ರೂಪದಲ್ಲಿ ಬಹುಮಾನ ನೀಡಲಾಗುವುದು.

ಪ್ರವೇಶಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ೧೦ ಜುಲೈ ೨೦೦೯

ಸಂಪರ್ಕ : ಸಂಪಾದಕರು, ಸಂಕ್ರಮಣ
ಜ್ಯೋತಿ ಲೇಔಟ್, ಯೆಲಚೇನಹಳ್ಳಿ
ಜೆ. ಪಿ. ನಗರ ಅಂಚೆ, ಬೆಂಗಳೂರು ೫೬೦ ೦೭೮
ಫೋನು: ೦೮೦-೨೬೩೨ ೩೩ ೪೪
ಮೊಬೈಲ್ : ೯೪೪೯೦-೬೯೩೪೪

ಇದು ಭಾರತ! ಇದು ಭಾರತ!!*

● ಡಿ.ಎಸ್. ನಾಗಭೂಷಣ

೧. ರಾಜ್‌ಕುಮಾರ್ ಎಂಬ ಪವಾಡ

ರಾಜ್‌ಕುಮಾರ್ ಒಬ್ಬ ಅಸಾಮಾನ್ಯ ಕಲಾವಿದ. ಆದರೆ ಈ ರೀತಿ ಅಸಾಮಾನ್ಯ ಕಲಾವಿದರೆಲ್ಲರು ರಾಜ್‌ಕುಮಾರ್‌ರಂತೆ ಒಂದು ಭಾಷಾ ಸಮುದಾಯದ ಅಸ್ಮಿತೆಯ ಸಂಕೇತವಾದದ್ದು ಕಡಿಮೆ. ಇದಕ್ಕೆ ಕಾರಣ, ರಾಜ್‌ಕುಮಾರ್ ಕೇವಲ ಅಸಾಮಾನ್ಯ ಕಲಾವಿದನಾಗಿ ಮಾತ್ರವಲ್ಲ, ಅಸಾಮಾನ್ಯ ಮನುಷ್ಯನಾಗಿ ಕೂಡಾ ಜನತೆಯ ಮನದಲ್ಲಿ ಬೆಳೆದದ್ದು ನಿಜ. ಇದಕ್ಕೆ ಅವರು ಆರಿಸಿಕೊಂಡ ಚಲನಚಿತ್ರ ಮಾಧ್ಯಮದ ಜನಪ್ರಿಯತೆಯೂ ಕಾರಣವಾಯಿತು. ಆದರೆ ಅವರಂತೆ ಕನ್ನಡಕ್ಕೆ ಅರ್ಪಿಸಿಕೊಂಡ ನಟರು ಕಡಿಮೆ. ಕನ್ನಡಕ್ಕೆ ಅರ್ಪಿಸಿಕೊಂಡದ್ದು ಎಂದರೆ ಮತ್ತೆ ಭಾಷಾ ನಿಷ್ಠೆ ಮಾತ್ರವಲ್ಲ. ಅವರು ಕನ್ನಡ ಭಾಷೆ ಮೂಲಕ ಕನ್ನಡ ಜನತೆಗೆ ಒಂದು ವಿಶಿಷ್ಟ ಅಭಿರುಚಿ ಹಾಗೂ ಮೌಲ್ಯ ಪ್ರಪಂಚವನ್ನು ಕಟ್ಟಿಕೊಟ್ಟರು.

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಪವಾಡವೇನಾದರೂ ಸಂಭವಿಸಿದ್ದರೆ, ಆ ಪವಾಡ ರಾಜ್‌ಕುಮಾರ್‌ರೇ. ಏಕೆಂದರೆ ಅವರ ಬಂದ ಸಾಮಾಜಿಕ ಹಿನ್ನೆಲೆ ಹಾಗೂ ಪ್ರತಿಭೆ ಮತ್ತು ಜನ ಮನ್ನಣೆ - ಈ ಎರಡೂ ವಿಷಯಗಳಲ್ಲಿ ಅವರು ಮುಟ್ಟಿದ ಎತ್ತರ, ಯಾರನ್ನಾದರು ಬೆಕ್ಕಸ ಬೆರಗಾಗಿಸುವಂತದು. ಹಾಗೆ ನೋಡಿದರೆ ಇದು ಪ್ರಜಾಪ್ರಭುತ್ವದ ವಿಜಯ; ಕನ್ನಡ ರಾಜ್ಯೋದಯದ ಯಶಸ್ಸಿನ ಸಂಕೇತವೂ ಹೌದು. (ಏಪ್ರಿಲ್ ೨೦, ೨೦೦೬)

೨. ಮಾಧ್ಯಮಗಳ ಮಾಯಾ ಬಜಾರ್ !

ಅಪರಾಧ ಲೋಕವನ್ನು ರೋಚಕ ರೀತಿಯಲ್ಲಿ ಪ್ರಸ್ತುತಗೊಳಿಸುವ ಪ್ರವೃತ್ತಿ ಕನ್ನಡ ಟಿ.ವಿ.ಲೋಕದಲ್ಲಿ ಬಹು ಹಿಂದೆಯೇ ಆರಂಭವಾಗಿ, ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿ, ಮಾಧ್ಯಮ ಸ್ವಾತಂತ್ರ್ಯದ ಹೆಸರಿನಲ್ಲಿ ಮುಕ್ತಾಯವಾಗಿತ್ತು. ಆದರೆ, ಅದೀಗ ವ್ಯಾಪಾರ ಅಥವಾ ಸುದ್ದಿ ಮೌಲ್ಯದ ಪರಿಧಿಯನ್ನು ದಾಟಿ, ಸರ್ಕಾರಿ ಇಲಾಖೆಯೊಂದರ ಸಹಕಾರದೊಂದಿಗೆ

---

* ಖ್ಯಾತ ಚಿಂತಕ ಡಿ.ಎಸ್.ನಾಗಭೂಷಣ ಅವರು ರವೀಂದ್ರ ರೇಶ್ಮೆ ಸಂಪಾದಕತ್ವದ "ವಿಕ್ರಾಂತ ಕರ್ನಾಟಕ" ಸಾಪ್ತಾಹಿಕದಲ್ಲಿ ಏಪ್ರಿಲ್ ೨೦೦೬ - ಮೇ ೨೦೦೮ರ ಅವಧಿಯಲ್ಲಿ ಬರೆದ ಅಂಕಣ ಲೇಖನಗಳಿಂದ ಆಯ್ದುಕೊಳ್ಳಲಾದ ಭಾಗಗಳಿವು. ಲೇಖನಗಳು ಮೈಸೂರಿನ ರೂಪ ಪ್ರಕಾಶನ ದಿಂದ "ಇದು ಭಾರತ! ಇದು ಭಾರತ!!" ಶೀರ್ಷಿಕೆಯಡಿ ಪುಸ್ತಕ ರೂಪದಲ್ಲಿ ಕೂಡ ಪ್ರಕಟವಾಗಿವೆ.
-ಸಂಪಾದಕ

ತನ್ನದೇ ಸ್ವಾಯತ್ತತೆಯ ಮೌಲ್ಯವನ್ನು ಸ್ಥಾಪಿಸ ಹೊರಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಕಂಟಕಪ್ರಾಯವಾಗಬಹುದಾಗಿದೆ. ರಾಷ್ಟ್ರ ಮಟ್ಟದ ಟಿ. ವಿ. ವಾಹಿನಿಗಳಲ್ಲಿ ಈ ಹಿಂದೆ ದೊಡ್ಡ ಸುದ್ದಿಯಾಗಿದ್ದ ಗುಪ್ತ ಚಿತ್ರೀಕರಣದ ಪ್ರಸಂಗಗಳ ಹಿಂದಿನ ರಾಜಕಾರಣ ಬಯಲಾಗಿ, ಅವುಗಳ ವಿಶ್ವಾಸಾರ್ಹತೆ ಘಾಸಿಗೊಂಡಿತ್ತು. ಇದೀಗ ಈ ಗುಪ್ತ ಚಿತ್ರೀಕರಣದ ಜೊತೆಗೆ ಅಪರಾಧಗಳ ಬಹಿರಂಗ ಚಿತ್ರೀಕರಣವೂ ಸೇರಿ, ಮಾಧ್ಯಮ ಕರ್ತವ್ಯದ ಹೆಸರಿನಲ್ಲಿ, ಅಪರಾಧ ವಿಚಾರಣೆಯ ಹಂತ ಮುಟ್ಟುವ ಮುನ್ನವೇ 'ಅಪರಾಧ'ದ ಸಾರ್ವಜನಿಕ ಘೋಷಣೆಯಾಗುತ್ತಿದೆ. ಇದರ ಮುಂದಿನ ಸಹಜ ಘಟ್ಟವಾಗಿ ಈ 'ಅಪರಾಧಿ'ಗಳನ್ನು ಜನರ ಒಂದು ಗುಂಪೋ, ಮಾಧ್ಯಮಗಳ ಏಜಂಟರೋ ಅಥವಾ ಪೋಲೀಸರೋ ನೈತಿಕ ಹಕ್ಕನ್ನು ಆವಾಹಿಸಿಕೊಂಡು ಥಳಿಸುವ, ಅವಮಾನಿಸುವ ದೃಶ್ಯಗಳನ್ನು ರಾಜಾರೋಷವಾಗಿ ತೋರಿಸಲಾಗುತ್ತಿದೆ. ಈ ಮೂಲಕ ಅಪರಾಧ ವಿಚಾರಣಾ ಸಂಹಿತೆಯನ್ನೇ ಉಲ್ಲಂಘಿಸಲಾಗುತ್ತಿದ್ದು, ಸಂವಿಧಾನದತ್ತ ನಾಗರೀಕ ಅಧಿಕಾರಿಗಳ ಅತಿಕ್ರಮಣಕ್ಕೆ ದಾರಿ ಮಾಡಿ ಕೊಡಲಾಗುತ್ತಿದೆ. ಇದು ಸಾಮಾಜಿಕ ಅರಾಜಕತೆಯ ಆಹ್ವಾನವೂ ಹೌದು.

(ಜೂನ್ ೧, ೨೦೦೭)

೩. ರೈತರ ಆತ್ಮ ಹತ್ಯೆ

..... ಕೃಷಿ ಸಮಾಜವನ್ನು ಇದ್ದಕ್ಕಿದ್ದಂತೆ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸುವ ವಿಶೇಷ ಆರ್ಥಿಕ ವಲಯ, ರೈತರ ಭಾಗವಹಿಸುವಿಕೆಯೇ ಇಲ್ಲದ ಜೈವಿಕ ಕೃಷಿ ತಂತ್ರಜ್ಞಾನ ಚಟುವಟಿಕೆಗಳ ವಿಸ್ತರಣೆ, ಬೃಹತ್ ಬೆಂಗಳೂರಿನಂತಹ ರೈತ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹ ಅತಿ ನಗರೀಕರಣದ ಯೋಜನೆಗಳನ್ನು ಹೊಸ ಬದುಕಿನ ನಾಂದಿ ಕಾರ್ಯಕ್ರಮಗಳಂತೆ ಯುದ್ಧೋಪಾದಿಯಲ್ಲಿ ಆರಂಭಿಸಿ, ಆ ಹೊಸ ಬದುಕಿನಲ್ಲಿ ಅವನ ಸ್ಥಾನವೇನು ಎಂಬುದು ಗೊತ್ತಾಗದ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿರುವ ಸಂದರ್ಭದ ಒತ್ತಡವೂ ಆತನಲ್ಲಿ ತನ್ನ ಅಸ್ತಿತ್ವದ ಆಧ್ಯಾತ್ಮಿಕತೆಯನ್ನು ಸ್ಪರ್ಶಿಸಿದರೆ ಆಶ್ಚರ್ಯವಿಲ್ಲ. ರೈತನನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿ ಮಾತ್ರ ನೋಡುವ ಆಧುನಿಕ ಮನಸ್ಸಿಗೆ ಈ ಸಂಕಟದ ಸಂಕೀರ್ಣತೆ ಅರ್ಥವಾಗದು. ಹಾಗೇ ಚಳುವಳಿಯ ಯಶಸ್ಸಿನ ಮೇಲೆ ಮಾತ್ರ ಕಣ್ಣಿಟ್ಟು ರೈತನ ಬದುಕನ್ನು ಆರ್ಥಿಕ ಪ್ರಶ್ನೆಯ ನೆಲೆಗೇ ಇಳಿಸಿ ನೋಡುವಂತಹ ಚಳುವಳಿಕೋರ ರೈತ ನಾಯಕರ ಸಮೀಪ ದೃಷ್ಟಿಗೂ ಇದು ಸಿಗದು. ಲೆಕ್ಕ ಇಟ್ಟವನು ರೈತನಾಗಲಾರ ಎಂಬ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಮಾತು ಇಂದಿನ ಸಂದರ್ಭದದಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಮಾತೆನ್ನಿಸಿದರೂ, ರೈತ ಬರಿ ಬೆಳೆ ಉತ್ಪಾದಕನಲ್ಲ; ಅವನೊಂದು ಜೀವನ ಕ್ರಮದ ಪ್ರತೀಕ ಎಂಬರ್ಥದಲ್ಲಿ ಅವರ ಮಾತನ್ನು ಅರ್ಥ ಮಾಡಿಕೊಂಡರೆ, ರೈತರ ಆತ್ಮ ಹತ್ಯೆ ಕುರಿತ ನಮ್ಮ ನೋಟ ಕ್ರಮ ಮೂಲಭೂತವಾಗಿ ಬದಲಾಗಬಲ್ಲುದು. ರೈತರ ಆತ್ಮ ಹತ್ಯೆ ವಿದ್ಯಮಾನವನ್ನು ಒಟ್ಟಾರೆ, ಜಾಗತೀಕರಣದ ಒತ್ತಡಗಳು ನಿರ್ಮಿಸುತ್ತಿರುವ ಒಂದು ದೊಡ್ಡ ಸಾಮಾಜಿಕ - ಸಾಂಸ್ಕೃತಿಕ ಬಿಕ್ಕಟ್ಟನ್ನಾಗಿ ಪರಿಗ್ರಹಿಸಿದಾಗ ಮಾತ್ರ ಅದರ ಪರಿಹಾರಗಳೂ ಹೊಳೆದಾವು.

(ಜೂನ್ ೨೯, ೨೦೦೭)

೪. ಬುದ್ಧ ಮತ್ತು ಹಿಂದೂ ಧರ್ಮ : ಕೆಲವು ಚಿಂತನೆಗಳು

ಇಂದು ಹಿಂದೂ ಕೋಮುವಾದಿಗಳೆನಿಸಿಕೊಂಡವರು, ತಮ್ಮ ಕೃತ್ಯಗಳ ಸಮರ್ಥನೆಯಾಗಿ ತಮ್ಮ ಧರ್ಮ ಇತರ ಧರ್ಮಗಳಿಗೆ ಹೋಲಿಸಿದರೆ, ಸಹನ ಶೀಲ, ಪ್ರಬುದ್ಧ, ಉದಾರಿ ಎಂದು ಹೇಳಿಕೊಳ್ಳುತ್ತಿದ್ದರೆ, ಅದಕ್ಕೆ ಅದರೊಳಗೆ ಕ್ರಿಯಾಶೀಲವಾಗಿರುವ ಬೌದ್ಧಧಾರೆಯೇ ಕಾರಣವಾಗಿದೆ ಎಂಬುದನ್ನು ಅರಿಯದವರಾಗಿದ್ದಾರೆ. ಹಾಗೆ ನೋಡಿದರೆ, ಡಾ॥ ಅಂಬೇಡ್ಕರ್‌ರ ಮತಾಂತರಕ್ಕೆ ಚಾರಿತ್ರಿಕ ಮಹತ್ವವಿದ್ದಷ್ಟು, ಧಾರ್ಮಿಕ ಮಹತ್ವವಿರಲಾರದು. ಏಕೆಂದರೆ, ಅವರು ಮಾರ್ಕ್ಸ್‌ವಾದಿ ಮೀಮಾಂಸೆಯ ನೆಲೆಯಲ್ಲಿ ಬೌದ್ಧ ಧರ್ಮದ ಮೂಲ ಆಧಾರ ಕಲ್ಪನೆಯಾದ 'ದುಃಖ'ವನ್ನು ಆಸ್ತಿಗೆ ಸಮೀಕರಿಸುವ ಮೂಲಕ ಅದರ ಭೌತವಾದಿ ನಿರೂಪಣೆಯನ್ನಷ್ಟೇ ಮಂಡಿಸಿ, ಅದಕ್ಕೆ ತಮ್ಮನ್ನೊಪ್ಪಿಸಿಕೊಂಡವರು. ಆದರೆ, ಬೌದ್ಧ ದರ್ಮದ ಯಾವ ಜಿಜ್ಞಾಸುವೂ ಅವರ ಈ ನಿರೂಪಣೆಯನ್ನು ಒಪ್ಪಿಲ್ಲವೆಂದು ಹೇಳಲಾಗುತ್ತಿದೆ. ಸ್ವತಃ ಅವರೇ ಹೇಳಿಕೊಂಡಂತೆ, 'ದ್ವೇಷ'ದ ಮೇಲೆ ("... ದ್ವೇಷ ಭಾವನೆಯಲ್ಲಿಯೇ ನನ್ನ ನಿಜವಾದ ಶಕ್ತಿ ಅಡಗಿದೆ... ಈ ದ್ವೇಷವೇ ನಾನು ಬಲವಾಗಿ ನಂಬಿರುವಂತಹ ತತ್ವಗಳು ಮತ್ತು ಧ್ಯೇಯಗಳ ಬಗ್ಗೆ ನಾನು ಹೊಂದಿರುವ ಪ್ರೀತಿಯ ಪ್ರತಿಬಿಂಬಗಳಾಗಿವೆ.") ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಕ್ಕಿಬಿದ್ದ ಅಂಬೇಡ್ಕರ್, ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ಮಾತ್ರವೆಂಬಂತೆ, ಎಲ್ಲ ದುಃಖದ ಅಂತಿಮ ಪರಿಹಾರವಾಗಿ 'ಕರುಣಾ'ವನ್ನು (ಅಂದರೆ, ಸಕಲ ಜೀವ ರಾಶಿಯೊಂದಿಗೆ ಸಹ - ಅನುಭೂತಿ) ಬೋಧಿಸಿದ ಧರ್ಮದ ಮೊರೆ ಹೋಗಬೇಕಾದುದು ಒಂದು ರೀತಿಯಲ್ಲಿ ಸಹಜ ಧಾರ್ಮಿಕ ನ್ಯಾಯವೇ ಹೌದು.

(ಜುಲೈ ೧೩, ೨೦೦೭)

೫. ಸಮಾಜವಾದಿ ಚಳುವಳಿ

ಸಮಾಜವಾದಿ ಚಳುವಳಿಯನ್ನು ಭಾರತದಲ್ಲಿ ಕೇವಲ ರಾಷ್ಟ್ರೀಯ ಚೌಕಟ್ಟಿನ ಸಮಾಜಿಕ ಚಳುವಳಿಯ ಮಟ್ಟಕ್ಕಷ್ಟೇ ಸೀಮಿತಗೊಳಿಸಿ ಅದರ ಸಾಧ್ಯತೆಗಳನ್ನೆಲ್ಲ ಸೂರೆ ಮಾಡಿ ದಿಕ್ಕೆಟ್ಟು ಕೂತಿರುವ ಸಮಾಜವಾದಿಗಳು, ಈಗಲಾದರೂ ಅದರ ಜಾಗತಿಕ ಸ್ವರೂಪದಲ್ಲಿ ಅಡಗಿರುವ ನಿತ್ಯಸತ್ಯದ ಕಡೆ ಗಮನ ಹರಿಸಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಮೂಲಭೂತವಾಗಿ ಹೊಸ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಒಂದು ಜಾಗತಿಕ ರಾಜಕೀಯ ಚಳುವಳಿಯೇ ಆಗಿತ್ತು. ಅದನ್ನು ಹಾಗೆ, ಒಂದು ಹೊಸ ಜಾಗತಿಕ ನಾಗರೀಕತೆಯ ಅಸ್ತಿವಾರದಂತೆ ರೂಪಿಸಲು ಲೋಹಿಯಾ ಶ್ರಮಿಸಿದ್ದರು. ವೈಜ್ಞಾನಿಕ ಅನ್ವೇಷಣೆಗಳ ನಿರಂತರ ಅನ್ವಯವನ್ನಾದರಿಸಿದ ತಂತ್ರಜ್ಞಾನ ಸೃಜಿಸುವ ಸದಾ ಏರುತ್ತಾ ಹೋಗುವ ಜೀವನಮಟ್ಟವು ತನ್ನ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಅಗತ್ಯಗಳಿಗಾಗಿ ಜಗತ್ತಿನ ಒಂದು ಭಾಗವನ್ನು ಒಂದಲ್ಲ ಒಂದು ರೂಪದಲ್ಲಿ ವಸಾಹತುವನ್ನಾಗಿ ಮಾಡಿಕೊಳ್ಳುವ ಅನಿವಾರ್ಯತೆಯನ್ನುಂಟು ಮಾಡಿ, ಒಟ್ಟಾರೆ ಮಾನವತೆಯ ಮಹೋನ್ನತಿಗೆ ಭಂಗ ತರುವುದೆಂದು ಅವರು ವಿಶ್ಲೇಷಿಸಿದ್ದರು. ಈ ಹಿನ್ನಲೆಯಲ್ಲಿ ಇಡೀ ಜಗತ್ತು ಅನುಸರಿಸ

ಬಹುದಾದ ಸಣ್ಣ ಪ್ರಮಾಣದ ತಂತ್ರಜ್ಞಾನದ ಮೂಲಕ ಸಾಧಿಸಬಹುದಾದ ಮಿತಿಗಳುಳ್ಳ ಒಂದು ಸಭ್ಯ-ಸರಳ ಜೀವನ ಮಟ್ಟವನ್ನು ಲೋಹಿಯಾ ಪ್ರತಿಪಾದಿಸಿದ್ದರು. ಆ ಮೂಲಕ ಅವರ ಈ ಜಾಗತಿಕ ದೃಷ್ಟಿಯ ಸಮಾಜವಾದ, ಮನುಷ್ಯನ ಮೂಲಭೂತ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಕುರಿತಂತೆ ಬಂಡವಾಳದ ಹಾಗೂ ಕಮ್ಯುನಿಸಂಗಳೆರಡೂ ಒಡ್ಡಬಹುದಾದ ಅಪಾಯಗಳ ವಿರುದ್ಧ ರಕ್ಷಣೆ ಒದಗಿಸಬಲ್ಲ ಹೊಸ ಜೀವನ ಕ್ರಮದ ಹೊಳಹನ್ನೂ ನೀಡಿತ್ತು.

೬. ಜಾತಿ ರಾಜಕಾರಣವೂ, ನಾಗರಿಕ ಪರಮಾಣು ಒಪ್ಪಂದವೂ..

.... ಜಾಗತೀಕರಣವೆಂಬುದು ತನ್ನ ಹೆಚ್ಚುವರಿ ಬಂಡವಾಳದ(ಇದು ಉತ್ಪತ್ತಿಯಾದದ್ದೂ ವಸಾಹತುಶಾಹಿಯಿಂದಾಗಿಯೇ) ಲಾಭದಾಯಕ ಹೂಡಿಕೆಗಾಗಿ ಹೊಸ ಹೊಸ ಮಾರುಕಟ್ಟೆಯನ್ನು ಸೃಷ್ಟಿಸುವ, ಕಂಡಕೊಳ್ಳುವ ಪಶ್ಚಿಮದ ತಂತ್ರವೇ ಆಗಿದೆ. ನಮ್ಮ ಜೀವನ ದೃಷ್ಟಿಯೇ ತಪ್ಪಾಗಿದೆ, ನಮ್ಮ ಜೀವನ ಕ್ರಮವೇ ಅರ್ಥಹೀನವಾಗಿದೆ ಎಂದು ನಂಬುವ ಹುಂಬರು ಮಾತ್ರ ಜಾಗತೀಕರಣದ ಈ ಆವೃತ್ತಿಯನ್ನು ವರವೆಂದು ಪರಿಗಣಿಸಿಯಾರು.... ಇದರ ಪರಿಣಾಮಗಳನ್ನು ಎರಡು ಉದಾಹರಣೆಗಳ ಮೂಲಕ ವಿಷದೀಕರಿಸಬಹುದು. ಒಂದು ಅತಿ ಚಿಕ್ಕ ಆದರೆ ಸೂಕ್ಷ್ಮ ಉದಾಹರಣೆ: ಜಾಗತೀಕರಣವು ಉದ್ಯೋಗ ಸೃಷ್ಟಿಯ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ತಂದಿರುವ ಕಾಲ್‌ಸೆಂಟರ್ ಗಳಲ್ಲಿ ಭಾರತದ ಭವಿಷ್ಯವನ್ನು ರೂಪಿಸ ಬೇಕಾದ ನಮ್ಮ ಮಕ್ಕಳು, ತಮ್ಮ ಭಾಷಾ ವೈಖರಿಯನ್ನಷ್ಟೇ ಅಲ್ಲದೆ (ಇದನ್ನು ಬೇಕಾದರೆ, ಒಂದು ಕೌಶಲ್ಯವೆಂದು ಪರಿಗಣಿಸಬಹುದು) ತಮ್ಮ ಹೆಸರುಗಳನ್ನೂ ಬದಲಾಯಿಸಿಕೊಳ್ಳಬೇಕಾದ ಒತ್ತಡದ ಪರಿಣಾಮಗಳಾದರೂ ತಲೆ ಕೆಡಿಸಿಕೊಂಡಿದ್ದಾರೆಯೇ? ಉದ್ಯೋಗ ಸೃಷ್ಟಿ ಆಗಬೇಕಾಗಿರುವುದು, ರಾಷ್ಟ್ರವನ್ನು ಕಟ್ಟಲೇ ಹೊರತು, ಕೆಡವಲಲ್ಲ ಅಲ್ಲವೇ?

ಇನ್ನೊಂದು ದೊಡ್ಡ ಉದಾಹರಣೆ: ಇತ್ತೀಚೆಗೆ ವಿವಾದಕ್ಕೆ ಸಿಕ್ಕಿ ಕೇಂದ್ರ ಸರಕಾರದ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವ ಅಮೇರಿಕಾದೊಡನೆ ನಾಗರಿಕ ಪರಮಾಣು ಒಪ್ಪಂದ. ಅದರ ತಾಂತ್ರಿಕ ಅನುಕೂಲಗಳು ಹಾಗೂ ಅನಾನುಕೂಲಗಳು ಏನೇ ಇರಲಿ-ಅದೀಗ ರಾಷ್ಟ್ರದಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ - ಅದನ್ನು ಸಮರ್ಥಿಸಲು ನಮ್ಮ ಪ್ರಧಾನಿ ನೀಡಿರುವ ಎರಡು ಕಾರಣಗಳನ್ನು ಗಮನಿಸಿ. ಒಂದು ಈ ಒಪ್ಪಂದವಿಲ್ಲದೆ ನಾವು ಜಾಗತಿಕ ಶಕ್ತಿಯಾಗಲು ಸಾಧ್ಯವಿಲ್ಲ. ಎರಡು : ಅಮೇರಿಕಾದ ಈವರೆಗಿನ ಅಧ್ಯಕ್ಷರ ಪೈಕಿ ಬುಷ್‌ರೇ ಭಾರತದ ಬಗ್ಗೆ ಅತ್ಯಂತ ಸ್ನೇಹ ಪ್ರದರ್ಶಿಸಿರುವವರು! ಈ ಎರಡೂ ಎಷ್ಟು ಅನಾಹುತಕಾರಿ ಸಮರ್ಥನೆಗಳೆಂದರೆ, ನಮ್ಮ ಕುಲಗೆಟ್ಟ ರಾಜಕಾರಣಿಗಳ ಮಧ್ಯೆ ತಮ್ಮ ಶುದ್ಧ ಹಸ್ತ ಹಾಗೂ ಸಭ್ಯ ವರ್ತನೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಮನಮೋಹನ ಸಿಂಗರು, ಗೊತ್ತಿದ್ದೋ, ಗೊತ್ತಿಲ್ಲದೆಯೋ, ಭಾರತದ ಪರ ಅಮೇರಿಕಾದ ಎಂತಹ ದಲ್ಲಾಳಿಯಾಗಿದ್ದಾರೆ ಎಂಬ ಆಘಾತಕಾರಿ ಸಂಗತಿ ಸ್ಪಷ್ಟವಾಗುತ್ತದೆ. ಸಾಮ್ರಾಜ್ಯ ಶಾಹಿಯ ಜಾಣತನವಿರುವುದೇ ತನ್ನ ಕುಕೃತ್ಯಗಳಿಗಾಗಿ ಇಂತಹವರನ್ನೇ ಆರಿಸುವುದರಲ್ಲಿಯೇ ಏನೋ! ಈ ಪರಮಾಣು

ಒಪ್ಪಂದದ ಹಿನ್ನಲೆಯಲ್ಲಿ ಜಾಗತಿಕ ಶಕ್ತಿ ಎಂಬುದರ ಅರ್ಥವಾದರೂ ಏನು? ಅಮೇರಿಕಾದಂತಹ 'ದೊಡ್ಡಣ್ಣ'ನಿಗೆ ತಮ್ಮಣ್ಣನಾಗುವುದು ಎಂದೇ?

(ಆಗಸ್ಟ್ ೩೧, ೨೦೦೭)

೭. ಮಠಾಧೀಶರೂ ಜಾತಿ ರಾಜಕಾರಣವೂ.....

.... ಈಗಿನ ಬಹಳಷ್ಟು ಮಠಗಳು ತಿಂಗಳ ಬಡ್ಡಿ ಲೇವಾದೇವಿ ಕೇಂದ್ರಗಳಾಗಿವೆ. ಅದಕ್ಕೆ ಬೇಕಾದ ಸೂಕ್ತ 'ವ್ಯವಸ್ಥೆ'ಯನ್ನೂ ಅವು ಮಾಡಿಕೊಂಡಿವೆ! ಅಸಹಾಯಕರ, ವಿಧವೆಯರ ಸಂಪತ್ತನ್ನು ಜಾಣತನದಿಂದಲೋ, ಬೆದರಿಕೆಯಿಂದಲೋ ಲಪಟಾಯಿಸಿಕೊಂಡ ಎಷ್ಟು ಮಠಗಳಿಲ್ಲ? ಸಣ್ಣ ಮಠಗಳನ್ನು ದೊಡ್ಡ ಮಠಗಳು take over ಮಾಡಿದ ಎಷ್ಟು ಉದಾಹರಣೆಗಳಿಲ್ಲ? ಹೀಗೆ ಇವು, ಇತ್ತೀಚಿನ ಕಾರ್ಪೋರೇಟ್ ವಲಯದ ವ್ಯವಹಾರಗಳಿಗಿಂತ ಯಾವ ರೀತಿ ಕಡಿಮೆ ಇವೆ? ಹಾಗಾಗಿಯೇ ಇಂದಿನ ಮಠಾಧೀಶರಿಗೆ ನಿಜವಾಗಿಯೂ ಒಪ್ಪುವ ಅಭಿದಾನವೆಂದರೆ, ಕಂಪನಿ CEO! ಹೇಗೂ, ಅವು ಧಾರ್ಮಿಕ ಕೇಂದ್ರಗಳಾಗಿ ಎಂದೋ ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಏಕೆಂದರೆ, ಅವುಗಳಿಂದ ಇತ್ತೀಚಿನ ಇತಿಹಾಸದಲ್ಲಿ ರಾಜ್ಯದ ಜನತೆಯ ಪಾರಮಾರ್ಥಿಕ ದಾಹವನ್ನು ತೀರಿಸಬಲ್ಲ, ನಿಜವಾದ ಜ್ಞಾನಿಯೆಂದು ಕರೆಯಬಹುದಾದ ಒಬ್ಬನೇ ಒಬ್ಬ ವ್ಯಕ್ತಿ ಹೊರಬಂದಿರುವ ಉದಾಹರಣೆಯಿಲ್ಲ. ಹೀಗಿರುವಾಗ ಇವನ್ನು ಧಾರ್ಮಿಕ ಸಂಸ್ಥೆಗಳೆಂದು ಕರೆಯುವುದು ಧರ್ಮಕ್ಕೆ ಮಾಡುವ ಅಪಚಾರವಾಗುತ್ತದೆ. ಜಾತಿ ಸಂಕುಚಿತತೆಯನ್ನು ಪ್ರೋತ್ಸಾಹಿಸುತ್ತಲೇ ಸಾಮಾಜಿಕ ಐಕ್ಯತೆಯನ್ನು ಸದಾ ಒಡೆದಿಟ್ಟುಕೊಂಡೇ ಬರುತ್ತಿರುವ ಈ ಮಠಗಳು, ಇಂದಿನ ಸಮುಯದಾಯಕ ಜಾತಿ ರಾಜಕಾರಣದ breeding centreಗಳಾಗಿವೆ.

೮. ಇತಿಹಾಸ, ಪುರಾಣ ಹಾಗೂ ಅಶ್ಲೀಲ ರಾಜಕಾರಣ

ರಾಮಾಯಣ ಒಂದು ಆದಿ ಹಾಡುಗಬ್ಬವಾಗಿದ್ದು, ವಾಲ್ಮೀಕಿ ಅದನ್ನು ಸಂಗ್ರಹಿಸಿ, ಸಂಪಾದಿಸಿ, ಕ್ರಿ. ಪೂ. ೪೦೦ ರಿಂದ ೨೦೦ ಮಧ್ಯೆ, ೧೨ ಸಾವಿರ ಶ್ಲೋಕಗಳ ರೂಪದಲ್ಲಿ ರಚಿಸಿದನೆಂದು ಇತಿಹಾಸಕಾರರು ಹೇಳುತ್ತಾರೆ. ಆದರೆ ವಾಲ್ಮೀಕಿ ರಾಮಾಯಣ ಕೂಡಾ ಕಾಲಾನುಕ್ರಮದಲ್ಲಿ ಪ್ರಕ್ಷಿಪ್ತಗೊಂಡು, ವಾಲ್ಮೀಕಿಯ ಸಾಹಿತ್ಯ ಶೈಲಿ ಹಾಗೂ ಕಥಾ ದೃಷ್ಟಿಗೆ ಹೊಂದದ ಬಾಲಕಾಂಡ ಹಾಗೂ ಉತ್ತರಕಾಂಡ ನಂತರ ಸೇರಿಕೊಂಡಿವೆ ಎಂಬ ಪ್ರತೀತಿಯೂ ಇದೆ. ಜೊತೆಯಲ್ಲೇ ಅನೇಕ ಭಾಷೆ ಹಾಗೂ ಸಂಸ್ಕೃತಿಗಳಲ್ಲಿ ರಾಮಾಯಣದ ಅನೇಕ ಆವೃತ್ತಿಗಳು ರಚಿತಗೊಳ್ಳುತ್ತಾ, ಮೌಖಿಕ ಪರಂಪರೆಗೆ ಸೇರಿಕೊಳ್ಳುತ್ತಾ ಬಂದಿವೆ. ಇವುಗಳಲ್ಲಿ ರಾಮ-ಸೀತೆ-ಲಕ್ಷ್ಮಣ -ರಾವಣರ ಸಂಬಂಧಗಳು ಹಾಗೂ ಇವರ ಪಾತ್ರ ನಿರೂಪಣೆಗಳು ವೈವಿಧ್ಯಮಯ ನೆಲೆಯಲ್ಲಿವೆ. ಮುಖ್ಯವಾಗಿ ರಾಮಾಯಣ ಕಥೆಯ ಈ ಆವರ್ತನದ ಕೇಂದ್ರ ಸೀತೆಯಾಗಿದ್ದು, ರಾಮ-ರಾವಣ -ಲಕ್ಷ್ಮಣರ ಪಾತ್ರಗಳ ಶೀಲ ಈ ಕೇಂದ್ರ ಪಾತ್ರದ ಸುತ್ತಲೇ ನಿರೂಪಣೆಗೊಳ್ಳುವುದನ್ನು ನಾವು ಈ ವಿವಿಧ ರಾಮಾಯಣಗಳಲ್ಲಿ ನೋಡಬಹುದು. ಇಂತಹ ಹಲವು ರಾಮಾಯಣಗಳಲ್ಲಿ ರಾಮ -ಲಕ್ಷ್ಮಣ-ಸೀತೆಯರು ಸೋದರ-ಸೋದರಿಯರಾಗಿ, ಸೀತೆ ರಾವಣನ ಮಗಳಾಗಿ, ಲಕ್ಷ್ಮಣ-ಸೀತೆ

ಗಂಡ-ಹೆಂಡರಾಗಿ ನಿರೂಪಿತರಾಗಿದ್ದಾರಷ್ಟೇ ಅಲ್ಲ; ಲಂಕೆ ಪ್ರಚಲಿತ ನಂಬಿಕೆಗೆ ವಿರುದ್ಧವಾಗಿ, ಮಧ್ಯಭಾರತದಲ್ಲಿ ಸರೋವರಗಳಿಂದ ಆವೃತವಾಗಿದ್ದ ಗೊಂಡಸ್ತಾನವೇ ಆಗಿತ್ತು ಎಂದು ಬಲವಾಗಿ ಸೂಚಿಸುವ ವರ್ಣನೆಗಳೂ ಕಂಡುಬರುತ್ತವೆ.

ಹಾಗೆ ನೋಡಿದರೆ, ಇತಿಹಾಸದ ಏಳುಬೀಳುಗಳಲ್ಲಿ ರಾಮನ ವೈದಿಕೀಕರಣ ಸಂಪೂರ್ಣ ವಾಗಿ; ಹದಿನೈದನೇ ಶತಮಾನದ ತುಳಸಿ ರಾಮಾಯಣದ ಹೊತ್ತಿಗಷ್ಟೆ ರಾಮಾಯಣ ಸಂಪೂರ್ಣ ರಾಮಮಯವಾಗಿ, ದೈವತ್ವ ಆರೋಪಿಸಿಕೊಂಡ 'ಮರ್ಯಾದಾ ಪುರುಷೋತ್ತಮ' ಸೃಷ್ಟಿಯಾದದ್ದು. ಹೀಗಾಗಿ ರಾಮಾಯಣವು ವಿವಿಧ ಆವೃತ್ತಿಗಳ ಮೂಲಕ ತನ್ನ ಐತಿಹಾಸಿಕತೆಯನ್ನು ಕಳೆದುಕೊಂಡು ಪುರಾಣವಾಗಿ ಮಾರ್ಪಾಡಾಗಿ, ಇತಿಹಾಸದ ಸಂಸ್ಕೃತೀಕರಣದ ಪ್ರತಿಕ್ರಿಯೆಯ ಮೂಲಕ ಒಂದು ಧಾರ್ಮಿಕ ಗ್ರಂಥದ ಮಾನ್ಯತೆ ಪಡೆದುಕೊಂಡಿದೆ. ಇದರ ಮುಂದುವರಿಕೆಯಾಗಿಯೇ, ವಾಲ್ಮೀಕಿ ರಾಮಾಯಣದ ಆಧುನಿಕ ಭಾಷಾನುವಾದಗಳೂ ತುಳಸೀ ರಾಮಾಯಣದ ಹಾದಿ ಹಿಡಿದು (ಉದಾರಣೆಗೆ ಕನ್ನಡದಲ್ಲಿ ಡಿವಿಜಿ, ರಂಗನಾಥಶರ್ಮ, ಶ್ರೀನಿವಾಸ ಅಯ್ಯಂಗಾರ್‌ರ ಅನುವಾದಗಳು) ರಾಮನ ಮರ್ಯಾದೆಯನ್ನು ಕಾಪಾಡಲು ಹೋಗಿ, ಅನುವಾದ ಮರ್ಯಾದೆಯನ್ನೇ ಉಲ್ಲಂಘಿಸಿವೆ!

(ಅಕ್ಟೋಬರ್ ೧೨-೧೯, ೨೦೦೭)

೯. ವಾಸ್ತವ ಪ್ರಜ್ಞೆ

ವಾಸ್ತವ ಪ್ರಜ್ಞೆಎನ್ನುವುದು ಸಮಯ ಪ್ರಜ್ಞೆ ಹಾಗೂ ಸಮಯ ಸಾಧಕತನಗಳ ನಡುವಣ ಗೆರೆ ಅಳಿಸಿಹೋಗುವಷ್ಟು ಅಸ್ಪಷ್ಟವಾದಾಗ ಸನ್ನಿವೇಶವನ್ನು ಸ್ಪಷ್ಟಪಡಿಸುವುದು ತತ್ವಾದರ್ಶಗಳೇ. ಹಾಗೆ ನೋಡಿದರೆ, ಅವನ್ನು ಮರೆತ ವಾಸ್ತವಪ್ರಜ್ಞೆ ಎಂಬುದೇ ಇರಲಾರದು. ವಿಶೇಷವಾಗಿ, ಹಲವು ಆಕರ್ಷಣೆಗಳ ಈ ಆಧುನಿಕ ಕಾಲದಲ್ಲಿ. ಹೀಗಾಗಿ ಇಂದು ಆಕಾಶ ಪ್ರಜ್ಞೆ ಇಲ್ಲದ ಮನುಷ್ಯ ಮೃಗ ಮಾತ್ರ ಅಗುತ್ತಾನೆ. ಭೂಮಿ ಗ್ರಹಿಕೆಗೆ ಸಿಗುವುದೂ ಆಕಾಶದ ಸಾಪೇಕ್ಷದಲ್ಲೇ. ಹಾಗೇ, ವಾಸ್ತವವೆಂಬುದು ಗ್ರಹಿಕೆಗೆ ಸಿಗುವುದೂ ಕೆಲವು ನಂಬಿಕೆಗಳ-ತತ್ವಾದರ್ಶಗಳ-ಆಧಾರದಲ್ಲೇ.

(ಅಕ್ಟೋಬರ್ ೨೬, ನವೆಂಬರ್ ೨, ೨೦೦೭)

೧೦. ಕನ್ನಡ ಜನ ಸಮ್ಮೇಳನ

ಸಾಹಿತ್ಯ ಸಮ್ಮೇಳನವೆಂದರೆ, ಜನ ಸಾಮಾನ್ಯರೂ ಆಯಾಸವಿಲ್ಲದೇ ಆನಂದಿಸಬಲ್ಲ ಒಂದು ಯಶಸ್ವಿ ಅಸಂಗತ ನಾಟಕವಿದ್ದಂತೆ. ಆದರೂ ನನ್ನಂತಹವರು ಇಷ್ಟಪಟ್ಟು ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತೇವೆ - ಜೀವನದಲ್ಲಿ ಆಗಾಗ್ಗೆ ಇಂತಹ ಅಸಂಗತ ಸಂಭ್ರಮ-ಸಂತೋಷಗಳು ಅಗತ್ಯವಾದ್ದರಿಂದ. ಅಲ್ಲಿ ಕರ್ನಾಟಕದ ವೈವಿಧ್ಯಮಯ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ರೂಪಗಳು ಎದುರಾಗುತ್ತವೆ. ಅಲ್ಲಿ ತಮ್ಮ ಪುಸ್ತಕ, ಔಷಧಿ ಬಟ್ಟೆ ಇತ್ಯಾದಿಗಳನ್ನು ಮಾರಾಟ ಮಾಡಲು ಬರುವ ಜನರನ್ನು ಗಮನಿಸುವುದೆ ಒಂದು ಮೋಜಿನ ಸಂಗತಿ. ಇನ್ನು ವಿಚಾರಗಳಿಗೆ, ವಿವಾದಗಳಿಗೆ, ಕಾವ್ಯಕ್ಕೆ, ಪುಸ್ತಕಗಳಿಗೆ ಜನಸ್ತೋಮ ಪ್ರತಿಕ್ರಿಯಿಸುವ ರೀತಿ-

ನೀತಿಗಳನ್ನು ನೋಡುವುದೇ ಇನ್ನೊಂದು ಮೋಜು! ಬಹುದಿನಗಳಿಂದ ಕಾಣದ ಸ್ನೇಹಿತರನ್ನು ಕಾಣಲು, ನಮ್ಮೂರಿನಲ್ಲಿ ಸಿಗದ ಪುಸ್ತಕ ಕೊಳ್ಳಲು ಎಲ್ಲೋ ಓದಿ ಮೆಚ್ಚಿದ್ದ ಲೇಖಕರ ಮುಖ ದರ್ಶನ ಮಾಡಲು -ಸಾಧ್ಯವಾದರೆ ಮಾತಾಡಿಸಲು, ಸಹನೆ ಹಾಗೂ ತ್ರಾಣ ಇದ್ದರೆ ಸುಲಭ ದರದಲ್ಲಿ ಭಕ್ಷ್ಯ ಭೋಜ್ಯ ಸವಿಯಲು - ಹೀಗೆ ವಿವಿಧ ಉದ್ದೇಶಗಳಿಂದ ಜನ ಬರುತ್ತಾರೆ. ಹಾಗೆ ನೋಡಿದರೆ ಇದನ್ನು ಕನ್ನಡ ಸಾಹಿತ್ಯ ಸಮ್ಮೇಳನವೆಂದು ಕರೆಯುವುದು ಉಚಿತ ವಾಗಲಾರದು. ಇದು ಕರ್ನಾಟಕ ಜನ ಸಮ್ಮೇಳನ. (ಡಿಸೆಂಬರ್ ೧೪, ೨೦೦೭)

೧೧. ಜಾಗತೀಕರಣವೆಂಬ ಪೌರುಷ ರಾಜಕಾರಣ

ಸಂಸ್ಕೃತಿಯ ಸಂಸ್ಪರ್ಶವಿಲ್ಲದ ಪೌರುಷ ರಾಜಕಾರಣವೇ ಇದೆಲ್ಲದರ-ಅಮೇರಿಕಾ, ಜಾಗತೀಕರಣ-ಹಿಂದಿರುವ ಚೈತನ್ಯ ಶಕ್ತಿ. ಭಾರತವೂ ಮುಂದಿನ ಹತ್ತೋ ಹದಿನೈದೋ ವರ್ಷಗಳಲ್ಲಿ ಜಗತ್ತಿನ ಅತಿ ದೊಡ್ಡ ಮೂರನೇ ಮಹಾ ಶಕ್ತಿಯಾಗಿ ಹೊರಹೊಮ್ಮುವುದೆಂಬ ಕನಸನ್ನು ಬಿತ್ತಿಯೇ, ಜಾಗತಿಕ ಪೌರುಷ ರಾಜಕಾರಣವು ಜಾಗತಿಕ ಆರ್ಥಿಕ ಸಂಸ್ಥೆಗಳ ಮಾಜಿ ಉದ್ಯೋಗಿ ಮನಮೋಹನ ಸಿಂಗ್ ಹಾಗೂ ಅವರ ಗೆಳೆಯರ ಸುಪರ್ದಿಯಲ್ಲಿ (ತಮ್ಮ ಹಳೆಯ ಪೌರುಷ ರಾಜಕಾರಣದ ವರಸೆಗಳು ನೆನಪಾದಂತೆ, ಇತ್ತೀಚೆಗೆ ಬಂಗಾಳದ ಮಾರ್ಕ್ಸಿಸ್ಟರೂ ಇವರ ಜೊತೆ ಸೇರಲಾರಂಭಿಸಿದ್ದಾರೆ!) ಇಲ್ಲಿ ಹೊಸ ಆರ್ಥಿಕತೆಯ ಬೆಳೆ ತೆಗೆಯಲಾರಂಭಿಸಿರುವುದು. ಈ ಆರ್ಥಿಕತೆಯ ಭಾರತ ತನ್ನ ಹೊರಗೆ ಅಥವಾ ಒಳಗೆ ನವ-ವಸಾಹತುಶಾಹಿ ವ್ಯವಸ್ಥೆಯೊಂದನ್ನು ಸೃಷ್ಟಿಸಿಕೊಳ್ಳದ ಹೊರತು, ಜಾಗತೀಕರಣವೆಂಬ ಜಾಗತಿಕ ಪೌರುಷ ರಾಜಕಾರಣ ಇಲ್ಲಿ ಬಹಳ ಕಾಲ ನಡೆಯದು.

(ಜನವರಿ ೧೮, ೨೦೦೮)

೧೨. ಸಮಾಜವಾದಿಗಳ ಕಾಂಗ್ರೆಸ್ಸೀಕರಣ: ಮುಂದೇನು ?

ಅದೇನೇ ಇರಲಿ, ಇದೆಲ್ಲವೂ -ಸಮಾಜವಾದಿಗಳ ಈ ಕಾಂಗ್ರೆಸ್ಸೀಕರಣ - ಸಮಾಜವಾದಿ ಚಳುವಳಿಯ ಅಂತ್ಯವನ್ನು ಸೂಚಿಸುತ್ತಿದೆಯೆ? ಚಳುವಳಿಯ ಅಂತ್ಯವಲ್ಲದಿದ್ದರೂ, ಕಾಂಗ್ರೆಸ್ ಮುಖಾಮುಖಿಯಲ್ಲಿ ಮೂಡಿದ ಅದರ ಸಾಂಸ್ಕೃತಿಕ ಹಾಗೂ ತಾತ್ವಿಕ ಗೊಂದಲ ವಿರೋಧಾಭಾಸಗಳ ಘಟ್ಟದ ಅಂತ್ಯವಂತೂ ಹೌದು. ಇದು ತನ್ನ ಮುಂದಿನ ಆರೋಗ್ಯಕರ ಬೆಳವಣಿಗೆಯ ರೂಪದಲ್ಲಿ ಕಾಂಗ್ರೆಸ್ಸನ್ನೇ ಒಂದು ಮುಖ್ಯ ವಾಹಿನಿಯ ಸಮಾಜವಾದಿ ರಾಜಕೀಯದ ದಿವಟಿಗೆಯನ್ನಾಗಿ ಮಾಡುವ ಹೊಸ ಘಟ್ಟದ ಆರಂಭವಾಗಿಯೂ ಕಾಣಿಸಿಕೊಳ್ಳ ಬಹುದಾಗಿದೆ. ಹಾಗೆ ನೋಡಿದರೆ, ಈ ಸಾಧ್ಯತೆಯೇ ಇಂದಿನ ರಾಜಕಾರಣದ ಭರವಸೆಯ ಬೆಳಕೂ ಆಗಿದೆ. ಈ ಮಾತು, ಸಮಾಜವಾದವೆಂದರೆ ಒಂದು ಸ್ಥಿರವಾದ ವಿಚಾರ (fixed idea) ಎಂದು ಕೊಂಡಿರುವವರಿಗೆ ತಮಾಷೆಯಾಗಿಯೂ ಕಾಣಬಹುದು. ಇಂತಹ ಜಡವಾದಿಗಳೇ ಸಮಾಜವಾದ ವಿಫಲವಾಗಿದೆ ಎಂದು ಹೇಳಿಕೊಂಡು ತಿರುಗುತ್ತಿರುವವರು ಕೂಡಾ. ಆದರೆ ಸಮಾಜವಾದಿ ಚಳುವಳಿ ಕಳೆದ ಐವತ್ತು ವರ್ಷಗಳಲ್ಲಿ ತನ್ನ ವಿವಿಧ ರೂಪಗಳಲ್ಲಿ ಹಾಗೂ ತನ್ನ ಅನೇಕ ಏಳು ಬೀಳುಗಳ ನಡುವೆಯೂ, ಈ ದೇಶದಲ್ಲಿ ಉಂಟು

ಮಾಡಿದ ರಾಜಕೀಯ ವಾತಾವರಣದಿಂದಾಗಿ ವಂಚಿತ ಸಮುದಾಯಗಳ ಕನಿಷ್ಠ ಎರಡು ತಲೆಮಾರುಗಳು ಹಲವು ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳ ಲಾಭ ಪಡೆದು ರಾಷ್ಟ್ರದ ಹೆಚ್ಚಿದ ಸಾಮಾಜಿಕ ಘನತೆಗೆ ಕಾರಣವಾಗಿದೆ ಹಾಗೂ ಒಂದು ಮಟ್ಟದ ಕ್ರಾಂತಿಕಾರಿ ಸಾಮಾಜಿಕ ಹಾಗೂ ರಾಜಕೀಯ ಪುನಾರಚನೆಗೆ ಪ್ರೇರಣೆ ಒದಗಿಸಿದೆ. ಎಂಬ ವಾಸ್ತವವನ್ನು ನಾವು ಮರೆಯ ಬಾರದು.

ಹೀಗೆ ಲಾಭ ಪಡೆದ ತಲೆಮಾರುಗಳ ಕುಟುಂಬಗಳು ಆ ಲಾಭದ ಸಂಭ್ರಮದಲ್ಲಿ ಮೈಮರೆತು, ಈ ಸಂಸ್ಕೃತಿಯ ವಾರಸುದಾರಿಕೆ ಯನ್ನು ಸರಿಯಾಗಿ ನಿರ್ವಹಿಸಿದೇ ಹೋದದ್ದೇ ಸಮಾಜವಾದದ ವಿರೋಧಿಗಳಿಗೆ ಒಂದು ವರವಾಗಿ ಪರಣಮಿಸಿತು. ಇದೇ ಸಮಾಜವಾದಿ ಚಳುವಳಿ ಇಂದು ಎದುರಿಸುತ್ತಿರುವ ನೈತಿಕ ಬಿಕ್ಕಟ್ಟಿಗೆ ಕಾರಣವಾಯಿತು ಎಂದು ನಾನು ಭಾವಿಸಿದ್ದೇನೆ. ಅಂದರೆ ಸಮಾಜವಾದ ತನ್ನದೇ ಆದ ಒಂದು ಸುಸ್ಥಿರವಾದ ಶೀಲ ಹಾಗೂ ದೀರ್ಘಕಾಲಿಕವಾದ ಒಂದು ದರ್ಶನವನ್ನು ಸಾಮಾನ್ಯ ಜನತೆಯ ನಡುವೆ ಕಟ್ಟಿಕೊಡುವಲ್ಲಿ ವಿಫಲವಾಗಿತ್ತು. ಈ ವೈಫಲ್ಯವನ್ನು ಮೀರಿ ನಿಲ್ಲಲು ಈಗಲೂ ಅದಕ್ಕೆ ಸಾಧ್ಯವಾಗುವುದಾದರೆ, ಸಮಾಜವಾದಿ ಚಳುವಳಿ ಹೊಸ ರೂಪ ಪಡೆದು ಮತ್ತೆ ಚಿಗುರುವುದರಲ್ಲಿ ಸಂದೇಹವಿಲ್ಲ, ಏಕೆಂದರೆ, ಅದು ಸಮಾನತೆಯ ಕಡೆಗಿನ ಮನುಷ್ಯನ ಸಹಜ ಮತ್ತು ಅದಮ್ಯ ತುಡಿತದ ಪ್ರತೀಕವಾಗಿದ್ದು, ಸಮಾಜವಾದ ಪ್ರತಿಪಾದಿಸುವ ಸಮಾನ ಅವಕಾಶ ಹಾಗೂ ಸಮಾನ ಉತ್ಪಾದನಾ ಸಂಸ್ಕೃತಿಯ ಮೂಲಕ ಗರಿಷ್ಠ ಸಾಧ್ಯ ಸಮಾನತೆಯನ್ನು ಸಾಧಿಸುವವರೆಗೆ ಅದು ಅಂತ್ಯ ಕಾಣಲು ಸಾಧ್ಯವಿಲ್ಲ....... (ಮಾರ್ಚ್ ೨೮, ೨೦೦೮)

೧೩. ಮೈಮರೆತಂತಿರುವ ನಮ್ಮ ಸೆಕ್ಯುಲರ್ ರಾಜಕಾರಣ....

ಒಂದಂತೂ ನಿಜ. ಹಿಂದೆ ಎಡಪಂಥೀಯ ಅಥವಾ ಪ್ರಗತಿಪರ ರಾಜಕೀಯ ಚಟುವಟಿಕೆಗಳ ಕಡೆ ಒಲಿಯುತ್ತಿದ್ದ ಯುವ ಜನ ಇಂದು ಬಹು ಸುಲಭವಾಗಿ ಕೋಮುವಾದಿ ರಾಜಕಾರಣ ತೆಕ್ಕೆಗೆ ಜಾರುತ್ತಿದ್ದಾರೆ. ಯಾಕೆ? ಎಡಪಂಥೀಯರು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರದಲ್ಲಿ, ನಮ್ಮ ಇತಿಹಾಸ-ಪರಂಪರೆಯ ಬಗ್ಗೆ, ಸಂಪೂರ್ಣ ಸಿನಿಕರಾಗಿ, ಅದನ್ನು ಸಾರಾಸಗಟಾಗಿ ಅವಹೇಳನ ಮಾಡುವುದೇ ಪ್ರಗತಿಪರತೆ ಎಂಬ ಅಭಿಪ್ರಾಯ ಕ್ರಮೇಣ ಜನ ಸಾಮಾನ್ಯರಲ್ಲಿ ಮೂಡುವಂತಹ ಉಡಾಫೆ ರಾಜಕಾರಣದಲ್ಲಿ ಮೈಮರೆತಿದ್ದೇ , ಹೊಸ ತಲೆಮಾರು ನಮ್ಮ ಮಾತುಗಳನ್ನು ಅನುಮಾನದಿಂದ ನೋಡುವಂತೆ ಮಾಡಿದೆಯಲ್ಲವೇ? ಉದಾಹರಣೆಗೆ: ಸಮಾಜವಾದಕ್ಕೆ ಒದಗಿರುವ ಗತಿ ನೋಡಿ. ಅದು ಮೂಲತಃ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನೂ ತನ್ನ ಸ್ಫೂರ್ತಿ ಕೇಂದ್ರವೊಂದನ್ನಾಗಿ ಮಾಡಿಕೊಂಡು ಕಟ್ಟಿಕೊಂಡ ಸಾಮಾಜಿಕ ನ್ಯಾಯದ ಸಂಕೀರ್ಣ ರಾಜಕಾರಣ. ಆದರೆ ನಾವು ಕಳೆದ ಮೂವತ್ತು ವರ್ಷಗಳಲ್ಲಿ ಅದಕ್ಕೆ ಪೆರಿಯಾರ್‌ವಾದ, ಹಾವನೂರ್‌ವಾದ, ಅಹಿಂದ್‌ವಾದ ಇತ್ಯಾದಿ ನಮ್ಮದೇ ಬಣ್ಣಗಳನ್ನು ಬಳಿದು ಅದರ ಸಂಕೀರ್ಣತೆಯನ್ನೆಲ್ಲ ಕಳೆದು, ಅದನ್ನೊಂದು ಅಗ್ಗದ ಜಾತಿ ರಾಜಕಾರಣದ ಸಾಧನವನ್ನಾಗಿ ಮಾರ್ಪಡಿಸಿ ಅದರ ವಿಶ್ವಾಸಾರ್ಹತೆಯನ್ನೇ ಕಳೆದಿದ್ದೇವೆ.

ಹೀಗಾಗಿ ತನ್ನೆಲ್ಲ ಆಧ್ಯಾತ್ಮಿಕತೆಯನ್ನು (ಅಂದರೆ ತನ್ನ ಆವೃತ ದೃಷ್ಟಿಕೋನವನ್ನು) ಕಳೆದುಕೊಂಡಿರುವ, ಈ ಜಾತಿವಾದಿ ರಾಜಕಾರಣದ ಹಿಂದಿನ ಫಲಾನುಭವಿಗಳೇ ಇಂದು ಕೋಮುವಾದಿ ರಾಜಕಾರಣದ ಬೆನ್ನೆಲುಬಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಎಡಪಂಥೀಯ ಪ್ರಗತಿಪರತೆ ತನ್ನ ಈ ಅನುಯಾಯಿಗಳನ್ನು ಅರ್ಧ ಮನುಷ್ಯರನ್ನಾಗಿ ಮಾಡಿ ಕೈಬಿಟ್ಟಿದೆ. ಇನ್ನರ್ಧಕ್ಕಾಗಿ ಅವರ ಮುಂದಿರುವ ಏಕೈಕ ಹಾಗೂ ಸುಲಭ ಆಯ್ಕೆ, ತಮ್ಮ ಸಾಂಸ್ಕೃತಿಕ ಅಹಂಕಾರದ ಅಗತ್ಯವನ್ನು ತಣಿಸಬಲ್ಲ 'ಭವ್ಯ' ಭೂತವೊಂದನ್ನು ಕಟ್ಟಿಕೊಡುವ ಕೋಮುವಾದಿ ರಾಜಕಾರಣವೇ ಆಗಿರುವಂತೆ ತೋರುತ್ತದೆ. ಏಕೆಂದರೆ ಇಂದಿನ ನಮ್ಮ 'ಸೆಕ್ಯುಲರ್' ರಾಜಕಾರಣ ತನ್ನೆಲ್ಲ ಉದಾತ್ತ ಆಶಯಗಳನ್ನು ಕಳೆದುಕೊಂಡು, ಬರೀ ಹೇಗಾದರೂ ಗಳಿಸಿ ತಿಂದು ಕುಡಿದು ನಲಿದು ಸಾಯುವ ಬರೀ ಪದಾರ್ಥ ರಾಜಕಾರಣವಾಗಿ ಮಾರ್ಪಟ್ಟಿದೆ ಯಾರಾದರೂ ಇದರ ಬಗ್ಗೆ ಯೋಚಿಸುವ ವ್ಯವಧಾನ ತೋರಬಲ್ಲರೇ. (ಏಪ್ರಿಲ್ ೪, ೨೦೦೮)

೧೪. ಕನ್ನಡಕ್ಕಿದು ಕಷ್ಟ ಕಾಲ

ಅದೇನೇ ಇರಲಿ, ನಾವು ಈಗ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕಾರಣದಿಂದ ಒದಗಿರುವ ಆತಂಕಗಳನ್ನು ಎದುರಿಸಲು ನಮ್ಮ ಮೂಲ ಸೋದರರೇ ಆದ ತಮಿಳರಿಂದ ದೂರದೃಷ್ಟಿಯ ರಾಜಕಾರಣದಿಂದ ಮೂಲ ಪಾಠಗಳನ್ನು ಕಲಿಯುವ ಅಗತ್ಯವನ್ನು ಮನಗಾಣಬೇಕಿದೆ. ಇದು ಅವರ ರಾಜಕಾರಣವನ್ನೂ ಎದುರಿಸಲು ಸಹಾಯವಾಗಬಹುದು! ಹಾಗಾಗಿ ಕನ್ನಡ ಚಳುವಳಿ ಮಾಡಬೇಕಾದ ಮೊದಲ ಕೆಲಸವೆಂದರೆ, ಕನ್ನಡಿಗರಲ್ಲಿ ಭಾಷಾ ಕುಲಪ್ರಜ್ಞೆಯನ್ನು ಬೆಳೆಸುವುದಾಗಿದೆ. ಇದಕ್ಕಾಗಿ ಕನ್ನಡ ಸಮಾಜ ಕನ್ನಡ ಭಾಷಾ ಕೇಂದ್ರಿತವಾಗಿ ಬೆಳೆಯುವಂತೆ ನೋಡಿಕೊಳ್ಳುವ ಕಾರ್ಯಕ್ರಮಗಳ ಕಡೆ ತನ್ನ ಗಮನವನ್ನು ಕೇಂದ್ರೀಕರಿಸ ಬೇಕಿದೆ. ಅಂದರೆ ಶಿಕ್ಷಣ ಕ್ಷೇತ್ರದ ಕನ್ನಡ ಅಗತ್ಯಗಳ ಕಡೆಗೆ ಇದಕ್ಕಾಗಿ ಅದು ತನ್ನ ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತನ್ನ ಬೌದ್ಧಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ. ಈ ಬೌದ್ಧಿಕ ವ್ಯಾಪ್ತಿಯೊಳಕ್ಕೆ ಕನ್ನಡ ಸಂಸ್ಕೃತಿಗೆ ಅಪರಿಚಿತವಾದ 'ರಾಕ್ಷಸಭಾಷೆ'ಯಲ್ಲಿ ಮಾತನಾಡುವ ದೇಜಗೌರಂತಹ ಕನ್ನಡ ಸಾಮ್ರಾಜ್ಯವಾದಿಗಳು ಎಂದೂ ಪ್ರವೇಶ ಪಡೆಯಲಾರರು ಎಂಬುದನ್ನೂ ಮುಖ್ಯವಾಗಿ ತಿಳಿಯಬೇಕಿದೆ. (ಏಪ್ರಿಲ್ ೧೮, ೨೦೦೮)

೧೫. ಹಿಂದೂ ಕೋಮುವಾದ ಮತ್ತು ಬುದ್ಧಿ ಜೀವಿಗಳ ಪೀಕಲಾಟ

ಸೆಕ್ಯುಲರಿಸಂ ಎಂಬುದು ಆಧುನಿಕ ಐರೋಪ್ಯ ಸಂದರ್ಭದಲ್ಲಿ, ಆಗ ಪ್ರಧಾನವಾಗಿದ್ದ ಕ್ರಿಶ್ಚಿಯನ್ ಧರ್ಮದ ನಿಯಂತ್ರಣದಿಂದ ರಾಜಕಾರಣವನ್ನು ಬಿಡುಗಡೆಗೊಳಿಸಿಕೊಳ್ಳಲು ಅಲ್ಲಿನ ರಾಜತಂತ್ರಜ್ಞರು ರೂಪಿಸಿದ ಒಂದು ಪರಿಕಲ್ಪನೆ. ಆದರೆ ಬಹು ಬಗೆಯ ಧರ್ಮಗಳಿರುವ ಈ ರಾಷ್ಟ್ರದಲ್ಲಿ ಸೆಕ್ಯುಲರಿಸಂ ಎಂದರೆ ಒಂದೊಂದು ಧರ್ಮದ ನೆಲೆಯಿಂದ ಒಂದೊಂದು ಅರ್ಥ ಮೂಡುವಂತಾಗಿದೆ. ಹಾಗೇ ಒಂದೊಂದು ರಾಜಕೀಯ ಪಕ್ಷವು

ತನ್ನ ತಾತ್ವಿಕತೆಗೆ ತಕ್ಕಂತೆ ಇದನ್ನು ಅರ್ಥೈಸಬಹುದಾಗಿದೆ! ಹೀಗಾಗಿಯೇ ಹಿಂದೂ ಕೋಮುವಾದಿಗಳು ಹಿಂದೂ ಧರ್ಮವೇ ಮೂಲತಃ ಸೆಕ್ಯುಲರ್ ಆಗಿರುವುದರಿಂದ ಇತರರು ಹೇಳುವ ಸೆಕ್ಯುಲರಿಸಂ 'ಹುಸಿ' ಸೆಕ್ಯುಲರಿಸಂ ಎಂದು ಪ್ರತಿಪಾದಿಸುತ್ತಾ ತನ್ನ ರಾಜಕಾರಣವನ್ನು ಯಶಸ್ವಿಯಾಗಿ ಮಾಡುತ್ತಿದ್ದರೆ; ಮುಸ್ಲಿಂ ಕೋಮುವಾದಿಗಳೂ ತಮ್ಮೆಲ್ಲ ಕಾರ್ಯಕ್ರಮಗಳನ್ನೂ ಸೆಕ್ಯುಲರಿಸಂನ ಹೆಸರು ಹೇಳಿಕೊಂಡೇ ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಸೆಕ್ಯುಲರಿಸಂ ನಮ್ಮ ಸಮಾಜದಲ್ಲಿ ಯಾವುದೇ ಗೊಂದಲಗಳನ್ನುಂಟುಮಾಡದೆ, ಅರ್ಥಪೂರ್ಣವಾಗ ಬೇರೂರಲು ಸಾಧ್ಯವಾಗುತ್ತಿದ್ದುದು, ಎಲ್ಲ ಧರ್ಮಗಳಿಗೆ ಸಮಾನವಾದ ಸಾಮಾನ್ಯ ನಾಗರೀಕ ಸಂಹಿತೆಯನ್ನು ಜಾರಿಗೆ ತರುವ ಮೂಲಕ - ಅಂದರೆ ರಾಷ್ಟ್ರವನ್ನು ಒಂದು ಸರ್ವ ಸಾಮಾನ್ಯ ನಾಗರೀಕ ಸಂಹಿತೆಯ ಸಮಾಜವನ್ನಾಗಿ ಪುನಾರೂಪಿಸುವ ಮೂಲಕ. ಆದರೆ ಈ ಜವಾಬ್ದಾರಿಯಿಂದ ನುಣಿಚಿಕೊಂಡು, ಸೆಕ್ಯುಲರಿಸಂನ ಆಧುನಿಕತೆ ಬೇಕು. ಅದು ಒತ್ತಾಯಿಸುವ ಸಾಮಾನ್ಯ ನಾಗರೀಕ ಸಂಹಿತೆ ಅನಿವಾರ್ಯವೇನೂ ಅಲ್ಲ ಎಂದು ನಂಬಿ ಹುಂಬತನದಿಂದ ಮುಂದುವರಿದ ನಮ್ಮ ಈವರೆಗಿನ ಸುಲಭ ಹಾಗೂ ವಿರೋಧಾಭಾಸದ ರಾಜಕಾರಣವೇ ಇಂದು ಬಹು ಸಂಖ್ಯಾತ ಕೋಮುವಾದಿ ಮತ್ತು ಅಲ್ಪ ಸಂಖ್ಯಾತ ಕೋಮುವಾದಿ ರಾಜಕಾರಣಗಳೆರಡನ್ನೂ ಹುಟ್ಟು ಹಾಕಿದೆ. ಇದು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಮಾಜವನ್ನು ಸೆಕ್ಯುಲರೀಕರಣಗೊಳಿಸದೇ ಆಡಳಿತವನ್ನು ಮಾತ್ರ ಸೆಕ್ಯುಲರೀಕರಣಗೊಳಿಸ ಹೊರಟ ಸಮಯ ಸಾಧಕ ರಾಜಕಾರಣದ ಫಲವೇ ಆಗಿದೆ. ಇದರ ಲಾಭ ಸಹಜವಾಗಿಯೇ ಇತ್ತೀಚೆಗೆ-ಗಾಂಧೀಜಿ ಪ್ರಭಾವ ಕುಂದಿ, ನೆಹರೂ ಇಂದಿರಾಗಾಂಧಿ ಯವರಂತಹ ಪ್ರಬಲ ರಾಜಕಾರಣಿಗಳ ಆಡಳಿತ ಕೊನೆಗೊಳ್ಳುತ್ತಿದ್ದಂತೆ-ಬಹುಸಂಖ್ಯಾತ ಕೋಮುವಾದಿ ರಾಜಕಾರಣಕ್ಕೇ ಹೆಚ್ಚು ದಕ್ಕಿದೆ. (ಮೇ ೨, ೨೦೦೮)

■

ಕನ್ನಡ ಸಾಹಿತಿಗಳ ಮಾಹಿತಿ : ಪರಿಷ್ಕೃತ ಆವೃತ್ತಿ

- ಸಂಕ್ರಮಣ ಪ್ರಕಾಶನವು ೨೦೦೩ರಲ್ಲಿ ಪ್ರಕಟಿಸಿದ **ಕನ್ನಡ ಸಾಹಿತಿಗಳ ಮಾಹಿತಿ** ಈಗ ಪರಿಷ್ಕರಣಗೊಳ್ಳುತ್ತಿದೆ.
- ಈ ಕೃತಿಯಲ್ಲಿ ಈಗಾಗಲೇ ದಾಖಲಾಗಿರುವ ಲೇಖಕರು, ತಮ್ಮ ಕುರಿತಾದ ಇತ್ತೀಚಿನ ಬದಲಾವಣೆಗಳನ್ನು - (ಉದಾ: ಹೊಸ ಕೃತಿ ರಚನೆ; ಪುರಸ್ಕಾರಗಳು; ಫೋನ್ ನಂಬರು ಬದಲಾವಣೆ ಇತ್ಯಾದಿ) - ಕೂಡಲೇ ತಿಳಿಸಬೇಕೆಂದು ಕೋರಿಕೆ.
- ಹೊಸ ಆವೃತ್ತಿಯಲ್ಲಿ ದಾಖಲಾಗ ಬಯಸುವ ಲೇಖಕರು ತುಂಬಬೇಕಾದ ಫಾರ್ಮಿಗಾಗಿ ನಮಗೆ ಸ್ವವಿಳಾಸದ ಒಂದು ಅಂಚೆ ಲಕೋಟೆಯನ್ನು ಕಳಿಸಬೇಕು.

- ಸಂಪಾದಕರು

ಸುಕನ್ಯಾ ಮಾರುತಿ ಅವರ 'ನಾನೆಂಬ ಮಾಯೆ'*

● ಶರಣಮ್ಮ ಗೊರೇಬಾಳ

ಹೆಸರಾಂತ ದಲಿತ ಕವಯಿತ್ರಿಯಾದ ಪ್ರೊ. ಸುಕನ್ಯಾರವರು ೧೯೫೬ರಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ಜನಿಸಿದರು. ಕ.ವಿ.ವಿ.ಯಲ್ಲಿ ೧೯೮೦ರಲ್ಲಿ ಕನ್ನಡ ಎಂ. ಎ. ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿ ಮುಂದೆ ಧಾರವಾಡದ ಜೆ. ಎಸ್. ಎಸ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೭೮ರಲ್ಲಿ 'ಪರಿಸರದಲ್ಲಿ' ಎಂಬ ಕವನ ಸಂಕಲದಿಂದ ಸಾರಸ್ವತ ಲೋಕಕ್ಕೆ ಪರಿಚಿತರಾದ ಸುಕನ್ಯಾ ರವರು 'ಪಂಚಾಗ್ನಿ ಮಧ್ಯೆ', 'ನಾನು ನನ್ನವರು', 'ತಾಜಮಹಲಿನ ಹಾಡು', ಹಾಗೂ 'ಬಿಂಬದೊಳಗಣ ಮಾತು' ಎಂಬ ಐದು ಕವನ ಸಂಕಲನಗಳನ್ನು ಸೇರಿಸಿಕೊಂಡು 'ನಾನೆಂಬ ಮಾಯೆ' ಸಮಗ್ರ ಕವನ ಸಂಕಲನ ಹೊರತಂದಿದ್ದಾರೆ. ಸಂಪಾದಕಿಯಾಗಿ ಪ್ರಶಾಂತ ಹಾಗೂ ಪ್ರಣಯನಿ ಸಂಕಲನಗಳು ಬಂದಿವೆ.

ಸಮಕಾಲೀನ ಕಾವ್ಯದಲ್ಲಿ ಪರಿಸರ ಪ್ರಜ್ಞೆಯೂ ಅವಶ್ಯ. ಚೆನ್ನವೀರ ಕಣವಿಯವರು 'ಪರಿಸರದಲ್ಲಿ' ಸಂಕಲನಕ್ಕೆ ಮುನ್ನುಡಿ ಬರೆಯುತ್ತ, "ಪರಿಸರ ಪ್ರಜ್ಞೆಗೆ ವಿಶೇಷ ಒತ್ತು ಬೀಳುತ್ತಿರುವ ಸಂದರ್ಭದಲ್ಲಿ, ಸುಕನ್ಯಾರವರ ಕವಿತೆ ಸಹಜವಾಗಿಯೇ ಈ ದಿಸೆಯಲ್ಲಿ ಧೈರ್ಯವಾಗಿ ಹೆಜ್ಜೆ ಯಿರಿಸಿವೆ. ಪರಿಸರದಲ್ಲಿರುವ ಸಾಮಾಜಿಕ ನೈತಿಕ ಹಾಗೂ ಕೆಲಮಟ್ಟಿಗೆ ರಾಜಕೀಯ ಅಂಶಗಳು, ಇವರ ಅನುಭವಕ್ಕೆ ತಾಕಿದಾಗ, ಉಂಟಾದ ಪ್ರತಿಕ್ರಿಯೆ ಇಲ್ಲಿಯ ಕವಿತೆಗಳಲ್ಲಿ ಮೂಡಿದೆ. ವಸ್ತು ನಿರ್ವಹಣೆಗೆ ಎಷ್ಟು ಬೇಕೋ, ಅಷ್ಟು ಮಾತನ್ನು ಹಸನಾಗಿಯೇ ಬಳಸಿ, ಆದಷ್ಟು ಮಟ್ಟಿಗೆ, ಹೇಳುವ ರೀತಿ ವಾಚ್ಯವಾಗದಂತೆ ನೋಡಿ ಕೊಂಡಿರುವುದು ಇಲ್ಲಿ ಮೆಚ್ಚಬೇಕಾದ ಅಂಶ" ಎಂದಿದ್ದಾರೆ.

ಈ ಸಂಕಲನದ ಪರಿಸರ, ಕಳಕೊಂಡವನು, ವಿದ್ರೋಹ, ವಿಮಾನ ಬಂತು ಮುಂತಾದ ಕವನಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ನೋಡಲು ಸುಂದರವಾಗಿ ಕಂಡ ಮಾತ್ರಕ್ಕೆ ಅವರು ಒಳ್ಳೆಯವರೆಂದು ಹೇಳಲಾಗುವುದಿಲ್ಲ. ಮೇಲ್ನೋಟದಿಂದ ಯಾರ ಗುಣವನ್ನೂ ಅಳೆಯಲು ಸಾಧ್ಯವಿಲ್ಲ, ಎಂಬ ವಿಚಾರವನ್ನು 'ವಿಮಾನ ಬಂತು' ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಆಶ್ಚರ್ಯ ಹಗಲಲ್ಲಿ
ಬೆಳ್ಳಕ್ಕಿಯಂತೆ ಕಾಣುವ
ಅದೇ ವಿಮಾನ
ರಾತ್ರಿ ಕೆಂಡಮುಂಡೆಯಾಗಿ ಸಾಗುತ್ತಿರುತ್ತದೆ.

---

* ಬಿಡಿ ಲೇಖನಗಳ ಸಂಕಲನ 'ಅಂಕುರ' (೨೦೦೭) ದಿಂದ

ಇದರರ್ಥ ತಿಳಿಯದೆ,
ಯಾವ ಹುತ್ತದಲ್ಲಿ ಯಾವ ಹಾವೋ?
ಎಂದು ಗೊಣಗಿಕೊಂಡದ್ದು
ಕೇಳಿಸಿತೇನೋ

ಕವಯಿತ್ರಿಯದು ಹೋರಾಟದ ಬದುಕು, ಗಟ್ಟಿ ವಿಚಾರಗಳು. ಆದರೂ ಎಷ್ಟೋ ಸಂದರ್ಭಗಳಲ್ಲಿ ಎಲ್ಲವನ್ನು ಪ್ರತಿಭಟಿಸದೆ ಅನುಭವಿಸಲೇ ಬೇಕಾದ ಪ್ರಸಂಗಗಳು ಬಂದೊದಗುತ್ತವೆ. ಅವರೇ ಹೇಳುವಂತೆ 'ವಿದ್ರೋಹ' ಕವನದಲ್ಲಿ -

ಜರಡಿ ಹಿಡಿದಾಗ ಹೊರಡುವ
ಸೀರುಗಾಳಲ್ಲ ನಾನು
ಆದರೂ ಮುಳ್ಳು ನಾಲಿಗೆಗೆ ಸಿಲುಕಿ
ನರಳುವ ಗತಿ

ಹೀಗೆ ಗತಿ, ಸ್ಥಿತಿ, ಪರಿಸ್ಥಿತಿಗಳ ಸನ್ನಾಹಗಳ ಮಧ್ಯೆಯೂ ದಂಗೆಯೇಳುವ ಮನೋಭಾವ ಧೈರ್ಯ ಇಲ್ಲಿದೆ.

ಬೆಟ್ಟದ ತುದಿಯಲ್ಲಿ
ಬಂಡೆಗಲ್ಲನು ಸೀಳಿ
ಚೆಂಡಿನಂದದಿ ಪುಟಿವ
ಚಿಲುಮೆಯ ಬಾಯಿಗೆ
ಗುಂಡುಕಲ್ಲಾನಿಸುವ
ಭಯಂಕರ ವಿದ್ರೋಹ.

ಹೋರಾಟದ ಹಾದಿಯಲ್ಲಿಯೂ ಹೆಣ್ಣಿನ ಹೆಜ್ಜೆಗುರುತು. ಉಳಿಯದಂತೆ ಸಮಾಜ ಅಳಿಕಿಸಿದೆ. ಅವಳು ಒಳಗೂ ಹೊರಗೂ ದುಡಿದರೂ ಅದಕ್ಕೆ ಬೆಲೆಯಿಲ್ಲ. ಇದನ್ನು ಕಂಡಾಗ ಹೆಣ್ಣಿನ ಮನಸ್ಸು ಸಿಡಿದೆದ್ದರೂ ಅಷ್ಟೇ ಬೇಗ ಅಸಹಾಯಕತೆ, ಭಯ ಅವಳನ್ನು ಆವರಿಸುತ್ತವೆ. ಅವರ ನಂದಾದೀಪ ಕವನದಲ್ಲಿ ಆ ಭಾವನೆಯನ್ನು ನಾವು ಕಾಣುತ್ತೇವೆ.

ಒಳಗೆ ಹೊರಗೆ ನೀರಾಗಿ ಹರಿದು
ನಂಬಿದವರ ದಡ ಸೇರಿಸಿ
ಒಂದು ದಿನ ಸದ್ದಿಲ್ಲದೆ
ನಂದಿಹೋಗುವ ನಂದಾದೀಪ
ಮಡಿಯುವ ಮಹಿಳೆ
ದಾರಿ ತೆರೆಯುವ ನಾಳೆ

ನಂಬಿದವರನ್ನು ದಡ ಸೇರಿಸುವ ಹೆಣ್ಣು ನಿಸ್ವಾರ್ಥತೆಯಿಂದ ಕುಟುಂಬಕ್ಕಾಗಿ ಮಡಿಯುತ್ತಾಳೆ. ತನಗಾಗುವ ಅನ್ಯಾಯಕ್ಕೆ ಕಾರಣ ಹುಡುಕುವಾಗ ಕವಯಿತ್ರಿಗೆ ಸಿಗುವ ನಿಚ್ಚಳ ಉತ್ತರವೆಂದರೆ.

ಹೆಣ್ಣಾದ ಮಾತ್ರಕ್ಕೆ ನೂರಾರು
ಅಗ್ನಿ ದಿವ್ಯಗಳಿಗೆ ಆಹಾರವಾಗಿದ್ದೇನೆ.
ಬೆಂಕಿ ಕುಡಿ ಕುಡಿದು ಧಗ ಧಗಸಿದ್ದೇನೆ
ಬೆಳಕಿನ ಕವಿತೆ ಹೇಗೆ ಬರೆಯಲಿ ನಾನು .

ಎಂಬುದು ಅವರ ಪ್ರಶ್ನೆ. ಸುಕನ್ಯಾರವರಿಗೆ ಹೆಸರು ತಂದುಕೊಟ್ಟ ಮಹತ್ವದ ಕವನ ಸಂಕಲನವೆಂದರೆ 'ನಾನು ನನ್ನವರು'. ತಮ್ಮ ಜೀವನ, ತಮ್ಮವರ ಬದುಕು, ಪುರುಷರ ದಬ್ಬಾಳಿಕೆ, ಸಮಾಜದ ವೈಪರೀತ್ಯಗಳನ್ನು ತಮ್ಮದೆ ಆದ ಧ್ವನಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರ ವೈಯಕ್ತಿಕ ಜೀವನಾನುಭವಗಳು ಕವನಗಳಲ್ಲಿ ಒಡಮೂಡಿವೆ. ಕವಯಿತ್ರಿಯ ಅನುಭವಗಳು ಮಾತ್ರವಲ್ಲ, ಅವು ಇಡೀ ಸಮಾಜದಲ್ಲಿನ ಹೆಣ್ಣಿನ ಅನುಭವಗಳು ಹೌದು ಅವರ 'ಬಿದ್ದವಳು' ಕವನದಲ್ಲಿ -

ಕಲಿತ ಅಷ್ಟಿಷ್ಟು ವಿದ್ಯೆಯನೆಲ್ಲ
ಅಡಿಗೆ ಮನೆಯ ಜಂತಿ ಎಣಿಸುವದಕ್ಕೆ ಬಳಸಿದ್ದೇನೆ.
ಅವ ಬಿತ್ತಿದ್ದನ್ನು ನಾ ಬೆಳೆಯುತ್ತ ಕಾಲ ಕಳೆಯುತ್ತಿದ್ದೇನೆ
ನನ್ನೊಳಗೆ ಎಲ್ಲೋ ಕಳೆದಿರುವ ನನ್ನ ಹುಡುಕುತ್ತಲಿದ್ದೇನೆ.

ಎನ್ನುವಲ್ಲಿ, ಶಿಕ್ಷಿತ ಮಹಿಳೆಯ ಸ್ಥಿತಿ ಹಾಗೂ ವೇದನೆ ಎದ್ದು ಕಾಣುತ್ತದೆ. ಆದರೂ ಕಳೆದುಕೊಂಡದ್ದನ್ನು ಹುಡುಕುವ ಮನಸ್ಸು ಹೆಣ್ಣಿನ ಜಾಗೃತಾವಸ್ಥೆಯನ್ನು ತೋರಿಸುತ್ತದೆ. ಹೆಣ್ಣಿನ ಹುಟ್ಟನ್ನೇ ಆಧಾರವಾಗಿಟ್ಟುಕೊಂಡು ಶೋಷಣೆ ನಡೆಯುತ್ತಿದೆ. ಹೆಣ್ಣಾಗಿ ಹುಟ್ಟಿದ್ದಕ್ಕೆ ಇಷ್ಟೊಂದು ಕಠಿಣ ಶಿಕ್ಷೆ ಅನುಭವಿಸಬೇಕಾಗಿದೆ. ಹೆಣ್ಣನ್ನು ಸಮಾನ ದೃಷ್ಟಿಯಿಂದ ಕಾಣುವ ಗಂಡು ಮನಸ್ಸುಗಳು ಬೇಕು. ಹೀಗಾಗಿ ಸಮಾನತೆ ಕುರಿತಾಗಿ ನಿರ್ಭಿಡೆಯಿಂದ ತಮ್ಮ ವಿಚಾರವನ್ನು ಸಮಾನತೆ' ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದರೂ
ನನಗೆ ಮಾತ್ರ
ಬಳೆಯಿನ್ನು ಕೋಳವಾಗೇ ಇದೆ
ತಾಳಿ ಉರುಳಾಗಿ ಬಿಗಿಯುತ್ತಿದೆ
ತಾಳಲಾರೆನು ಇನ್ನು ಹೇಳುವೆನಾದರೂ ಯಾರಿಗೆ
ಹೇಳಿದರೆ ನನ್ನ ಜೀವಂತ ಹೂಳುವಿರಿ

ತನಗಾಗುವ ಶೋಷಣೆಯನ್ನಾಗಲಿ, ಕಷ್ಟಗಳನ್ನಾಗಲೀ ಹೇಳಿಕೊಳ್ಳುವ ಸ್ವಾತಂತ್ರ್ಯ ಹೆಣ್ಣಿಗಿಲ್ಲ. ಯಾಕೋ ಬಳೆ ತಾಳಿಗಳೇ ಬದುಕಿಗೆ ಉರುಳಾಗಿವೆ. ಬಳೆ, ತಾಳಿ ಹೆಣ್ಣಿನ ರಕ್ಷಣೆಯಾಗ ಬೇಕೆ ಹೊರತು ಶಿಕ್ಷೆ ಕೊಡಬಾರದಲ್ಲವೇ? ಹೆಣ್ಣಿನ ನೋವು ಮಾತ್ರವಲ್ಲ, ದಲಿತರ ಬದುಕಿನ ನೋವುಗಳನ್ನು 'ಒಮ್ಮೆ ನಗುತ್ತೇವೆ' ಎಂಬ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ದನಗಳಿಗೆ ಮೇವಿಲ್ಲ, ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ, ನನ್ನವರು -ಸತ್ತದನಗಳ
ಕಿತ್ತು ತಿನ್ನುವುದನ್ನು ಕಣ್ಣಾರೆ ಕಾಣುತ್ತ
ಕತಕತನೆ ಕುದಿವ - ಅಗ್ನಿಪರ್ವತವಾಗಿದ್ದೇನೆ.
ಬೆಂಕಿ ನಾಲಿಗೆ ಚಾಚಿ
ನನ್ನವರ ದಾರಿದ್ರ್ಯವನ್ನೇ
ಆಪೋಶನ ಮಾಡುತ್ತೇನೆ.
ಅವರ ದಿನ ದಲಿತತನಕ್ಕೆ ಧಿಕ್ಕಾರವಿರಲಿ
ಅವರ ನೋವನ್ನೇ ಸರ್ವನಾಶ ಮಾಡುತ್ತೇನೆ
ನಗುತ್ತೇವೆ, ಒಮ್ಮೆ ನಕ್ಕೆ ನಗುತ್ತೇವೆ.

ಎಂಬ ನಂಬಿಕೆ ಹಾಗೂ ಆಶೆ ಅವರದಾಗಿದೆ. ಅವರ ಮತ್ತೊಂದು ಕವನ 'ಬೇಡತಿಯರು' ದಲಿತರ ಬದುಕನ್ನು ಚಿತ್ರಿಸುತ್ತದೆ. ಬೇಡ ಜನಾಂಗದವರು ಕಷ್ಟ ಜೀವಿಗಳು, ಬಡವರಾದರೂ ಸ್ವಾಭಿಮಾನದಿಂದ ಬದುಕುವವರು, ಅದರಲ್ಲೂ ಸ್ತ್ರೀಯರು ಸಮಾಜದಲ್ಲಿ ತುಳಿತಕ್ಕೊಳಗಾದವರು. ಕವಯಿತ್ರಿ ತಮ್ಮೊಂದು ಕವನದಲ್ಲಿ ಹೀಗೆ ಹೇಳುತ್ತಾರೆ.

ನಾವು ಬೇಡತಿಯರು ಸ್ವಾಮಿ
ಬೇಡತಿಯರು
ಗುಡ್ಡ ಗಾಡಿನಿಂದ
ಹರಿದು ಬಂದ ನೀರೆಯರು
ದಾರಿ ಬಿಡಿ
ತೀರ ಸೇರುತ್ತೇವೆ.
ನಿಮ್ಮ ಹರಿಗೋಲಿಗೆ
ಹುಟ್ಟುಹಾಕಿ ದಣಿದಿದ್ದೇವೆ
ಇನ್ನೂ ಮಟ್ಟ ಹಾಕುವದೊಂದು
ಬಾಕಿ ಇದೆ.

ಬೇಡತಿಯರ ಬಡತನದ ಬದುಕು ಮಾತ್ರವಲ್ಲ, ಅವರಲ್ಲಾದ ಬದಲಾವಣೆಯನ್ನು ಚಿತ್ರಿಸಿದ್ದಾರೆ. ಬೇಡ ಜನಾಂಗದ ಮಹಿಳೆಯರಿಗೂ ಅನ್ಯಾಯ ಪ್ರತಿಭಟಿಸುವ ಧೈರ್ಯ ಬಂದಿದೆ. ತಿಳಿಯದೇ ಶೋಷಣೆಗೆ ಒಳಗಾಗುವ ಮುಗ್ಧ ಬೇಡತಿಯರು ಬಿಲ್ಲು ಹಿಡಿಯಬಲ್ಲವರಾಗಿದ್ದಾರೆ. ಬೇಡತಿಯರು ಒಡತಿಯರಾಗುವ ಕಾಲ ದೂರ ಉಳಿದಿಲ್ಲವೆಂಬ ಆಶಾಭಾವನೆ ಇಲ್ಲಿ ವ್ಯಕ್ತವಾಗುತ್ತದೆ.

ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಅವರ ಇನ್ನೊಂದು ಕವನ 'ಭಾರತೀಯಳು':

ನೀನು ಕಣ್ಣಿಂದಲೇ ನನ್ನನ್ನು ಹಿರಿದು
ಹರಿದು ತಿಂದರೆ

ನಾ ಕಳೆದುಕೊಳ್ಳುವುದು
ಮಾನವಲ್ಲ
ಅಭಿಮಾನ
ಅದ ಬಿಟ್ಟು ನಿನ್ನ ಹುರಿದು ಮುಕ್ಕುತ್ತೇನೆ
ಕ್ಷಮಿಸು, ನಾ ಭಾರತೀಯ ನಾರಿ
ಅನಿಸಿದ್ದನ್ನೆಲ್ಲಾ ಹತ್ತಿಕ್ಕುತ್ತೇನೆ

ಹೆಣ್ಣು ತನ್ನ ಅಭಿಮಾನಕ್ಕೆ, ಮಾನಕ್ಕೆ, ಹೆಚ್ಚು ಬೆಲೆ ಕೊಡುತ್ತಾಳೆ. ಅವಳ ಮರ್ಯಾದೆಗೆ ಕುಂದು ಬಂದರೆ ಅವಳು ಸಹಿಸುವುದಿಲ್ಲ. ಆದರೂ ನೋವನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಸುಮ್ಮನಿರುತ್ತಾಳೆ. ಭಾರತೀಯ ಮಹಿಳೆಯಲ್ಲಿ ಸಹನಶೀಲತೆ ವಿಶೇಷಗುಣ. ಸ್ತ್ರೀಯರೂ ಎಷ್ಟೇ ಜಾಗೃತರಾಗಿ ಪ್ರತಿಭಟಿಸುವ ಸಾಧ್ಯತೆಯಿದ್ದರೂ, ಕೆಲವೊಮ್ಮೆ ಧೈರ್ಯವನ್ನು ಹತ್ತಿಕ್ಕಿಕೊಳ್ಳುತ್ತಾರೆ ಎಂಬ ಭಾವನೆ ಇಲ್ಲಿ ವ್ಯಕ್ತವಾಗಿದೆ.

ಕವಯಿತ್ರಿ ಪುರುಷರಲ್ಲಿ ಹೆಚ್ಚಾಗಿ ಕಂಡದ್ದು ಪ್ರೇಮವನಲ್ಲ, ಕಾಮದ ಕಿಡಿಯನ್ನು. ಪುರುಷನನ್ನು 'ಮೃಗ' ಎಂದೇ ಕರೆದಿದ್ದಾರೆ.

ನಾನು ಸಂಧಿಸಿದ ಕೋಟಿ ಕಣ್ಣುಗಳಲ್ಲಿ
ಕಂಡದ್ದು ಕಾಮದ ಕಿಡಿಯನ್ನೇ ಹೊರತು
ಪ್ರೇಮದ ಬೆಳಕನ್ನಲ್ಲ
ಹದಿಹರೆಯದವರಿಂದ
ಮುದಿಹರೆಯ ತನಕ
ಎಲ್ಲ ಬಯಸುವುದು.
ಚಪಲ ಚಿತ್ತದ ಜಿಂಕೆ ಕಣ್ಣಿನ
ಸಣ್ಣ ನಡುವಿನ ಗಟ್ಟಿ ಮೈ ಕಟ್ಟಿನ ಹೆಣ್ಣನ್ನೇ ಹೊರತು
ಅವರ ತುಳಿತಕ್ಕೆ ಸಿಕ್ಕು ನೊಂದು
ಬಸವಳಿದ ತ್ಯಾಗ ಶೀಲ ಹೆಣ್ಣನ್ನಲ್ಲ

ಸ್ತ್ರೀಯು ಒಂದು ಜೀವ ಎಂದು ತಿಳಿಯದ ಪುರುಷರು ಅವಳನ್ನು ಕೆಲಸದ ಯಂತ್ರವಾಗಿ ಬಳಸಿಕೊಳ್ಳುತ್ತಾರೆ. ತನ್ನದೇ ಸ್ವತ್ತು ತನ್ನ ಬಳಕೆಯ ವಸ್ತು ಎಂದು ತಿಳಿದು ಅಧಿಕಾರ ಚಲಾಯಿಸುತ್ತಾರೆ. ಅವಳನ್ನು ಒಂದು ಭೋಗದ ವಸ್ತುವಾಗಿ ಕಂಡಾಗ ಸಹಜವಾಗಿ ಆಕ್ರೋಶಕ್ಕೆ ಒಳಗಾಗುತ್ತಾಳೆ. ಅಂತ ಒಂದು ಆಕ್ರೋಶ 'ಕಲಗೇರಿಗಳಿಗೆ' ಎಂಬ ಕವನದಲ್ಲಿ ವ್ಯಕ್ತವಾಗಿದೆ.

ಓ ಕಲಗೇರಿಗಳೆ ಕಲಕಿದ್ದೀರಿ
ನಮ್ಮ ಸ್ವಭಿಮಾನವನ್ನು
ತೊಡೆ ಮುರಿದಿದ್ದೇವೆ. ಗುಂಡಿಗೆ ಬಗೆದು ರಕ್ತ ಹೀರಿದ್ದೇವೆ
ಕರುಳ ಮಾಲೆ ಮುಡಿದಿದ್ದೇವೆ, ಇನ್ನೂ ಬುದ್ಧಿ ಬರಲಿಲ್ಲವೇ ನಿಮಗೆ

ತಾಯ್ಗಂಡರೆ, ನಾವು ನೋಡುತ್ತೇವೆ
ತಾಯಿ ಭೂಮಿ ಮುನಿದಾಗ
ನಿಮ್ಮನ್ನು ಯಾರು ರಕ್ಷಿಸುತ್ತಾರೆಂದು

ಹೀಗೆ ದಲಿತ ಹೆಣ್ಣನ್ನು ಅವಮಾನಿಸಿ ಕೆಣಕಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಕನ್ಯಾರವರ ಇತ್ತೀಚಿನ ಪ್ರಮುಖ ಕವನ ಸಂಕಲನ 'ಬಿಂಬದೊಳಗಿನ ಮಾತು'. "ನಾನು ಬಿಂಬ, ನನ್ನನ್ನು ಹೊರತು ಪಡಿಸಿದ ಸಕಲವೂ ಪ್ರತಿಬಿಂಬವೇ, ಹೀಗಾಗಿ, ನಾನು ಪ್ರತಿಬಿಂಬ ಆಗಲಾರೆ. ನನ್ನದೇನಿದ್ದರೂ 'ಬಿಂಬ' ದೊಳಗಣ ಮಾತೇ. ಬಿಂಬವಿಲ್ಲದೆ ಪ್ರತಿಬಿಂಬಕ್ಕೆ ಅವಕಾಶವಿಲ್ಲ. ಹೀಗಾಗಿ ಈ ಸಂಕಲನಕ್ಕೆ ಬಿಂಬದೊಳಗಣ ಮಾತು ಶೀರ್ಷಿಕೆ ಇಟ್ಟಿರುವು"ದಾಗಿ ಹೇಳಿಕೊಂಡಿದ್ದಾರೆ.

ಈ ಕವನ ಸಂಕಲನಕ್ಕೆ ಸಂಪಾದಕರಾಗಿ, ಪ್ರೊ ಮಲ್ಲೇಪುರಂ ವೆಂಕಟೇಶರವರು ಈ "ಕವಯಿತ್ರಿ ಸುಕನ್ಯಾ ಮಾರುತಿ, ಇವರು ಕವಿತಾ ಲೋಕದ ರಹಸ್ಯ ಉಪಾಸಕರು. ಇವರು ಕಾವ್ಯವನ್ನು ತಮ್ಮ ಜೀವದ ಉಸಿರಾಗಿಸಿಕೊಂಡಿದ್ದಾರೆ. ಇವರು ವ್ಯಕ್ತಿ ಮಹತ್ವದ ಅನಾವರಣ. ಇವರ ಕವಿತೆಗಳ ಮೂಲ ಬೀಜ ವ್ಯಕ್ತಿತ್ವದ ಅಥವಾ ವ್ಯಕ್ತಿತ್ವದ ಕಣ್ಣಿನಿಂದಲೇ ಸಾಮಾಜಿಕ ಚೌಕಟ್ಟುಗಳನ್ನು ನೋಡುವ , ಶೋಧಿಸುವ, ತಿಳಿಯುವ ದಾರಿಯಲ್ಲಿ ಕಳೆದ ಎರಡು ದಶಕಗಳ ಕಾಲ ಹೆಜ್ಜೆ ಇರಿಸಿದ್ದಾರೆ. ಕಾವ್ಯ ಭಾಷೆ ಮಾಂತ್ರಿಕವೆಂಬುದರ ಅರಿವು ಇದ್ದೂ, ವಾಸ್ತವ ಮಾಂತ್ರಿಕತೆಯ ಕಡೆ ಇವರು ನಡೆದಿದ್ದಾರೆ. ಗದ್ಯ ಲಯ ಮತ್ತು ಪದ್ಯಲಯಗಳನ್ನು ಸಂಯೋಜಿಸಿ ಕಾವ್ಯ ಕಟ್ಟುವ ಇವರ ಕವಿತೆಯ ಹಿಂದೆ ಅಳಿಸಲಾರದ ಕಾವ್ಯ ವ್ಯಕ್ತಿತ್ವವಿದೆ ಹಾಗೂ ಸಾಮಾಜಿಕ ಸಂಬಂಧಗಳ ಸ್ಪಂದನೆಗಳಿವೆ. ಈ ಅಂಶಗಳೇ ಇವರ ಕವಿತೆಯ ಆಶಯಗಳಾಗಿವೆ" ಎಂದಿದ್ದಾರೆ.

ಸಮಾಜದಲ್ಲಿ ದಲಿತ ಹೆಣ್ಣುಗಳನ್ನು ಶೋಷಣೆ ಮಾಡುವ ಇನ್ನೊಂದು ರೀತಿ ಎಂದರೆ ದೇವರ ಹೆಸರಿನಲ್ಲಿ ದೇವದಾಸಿಯರನ್ನಾಗಿ ಮಾಡುವುದು. ಅವಳು ಮದುವೆ ಮಾಡಿಕೊಂಡು ಇತರರಂತೆ ಉತ್ತಮ ಗೃಹಿಣಿಯಾಗಿ ಬದುಕಲು ಬಿಟ್ಟಿಲ್ಲ. ಅವಳ ಲೈಂಗಿಕ ಶೋಷಣೆ ನಡೆಯುತ್ತಲೇ ಇದೆ. ಅಂತಹ ದೇವದಾಸಿಯರ ಹಾಗೂ ಅವರ ಮಕ್ಕಳ ಪರಿಸ್ಥಿತಿಯು ಅತಂತ್ರವಾಗಿದೆ. ಈ ಕುರಿತಾಗಿ ಸುಕನ್ಯಾರವರ ದೇವದಾಸಿ ಕವಿತೆ ಹೀಗಿದೆ.

ತಂದೆಯಿಲ್ಲದೆ ಬೆಳೆದು
ಗಂಡನಿಲ್ಲದೆ ಹಡೆದು
ಮಕ್ಕಳಾಸರೆಯಿಲ್ಲದೆ ಬದುಕಿ
ಮುಪ್ಪಾದ ಹಾಗೆ, ನಮ್ಮ ಹೊಟ್ಟೆ ಹೊರೆಯಲು
ಹಡಲಿಗೆ ಹೊತ್ತು ಊರಾಡಲು ಹೊರಡುತ್ತೇವೆ
ಜೋಳಿಗೆ ನಮ್ಮನ್ನು ರಕ್ಷಿಸುತ್ತದೆ

ಎನ್ನುತ್ತಾರೆ. ಅಂತವರಿಗೆ ಸಮಾಜದಲ್ಲಿರುವ ಸ್ಥಾನಮಾನವಾದರು ಏನು? ಅವರಿಂದ ಸುಖ ಪಟ್ಟವರು ತಿರಸ್ಕರಿಸುತ್ತಾರೆ. ದೇವದಾಸಿಯ ಮಗಳು ಇತರ ಮಕ್ಕಳೊಡನೆ ಸಂತೋಷದಿಂದ

ಆಡುವುದನ್ನು ಸಮಾಜ ಸಹಿಸುವುದಿಲ್ಲ. ಅಂತಹ ಒಂದು ಕವನ ಇಲ್ಲಿದೆ. ಅದು 'ದೇವದಾಸಿಯ ಮಗಳ ಸ್ವಗತ'.

ಎಲ್ಲಿ ಹುಡುಕಲಿ ನನ್ನ
ಕಳಕೊಂಡ ಮುಂಜಾವುಗಳನ್ನು
ತಂದೆಯ ಜಾಗದಲ್ಲಿ
ತಾಯಿಯ ಹೆಸರು ತುಂಬಿದ
ಮಾಸ್ತರರ ಪೆನ್ನಿನಲ್ಲೆ?....
ನನ್ನೊಡನೆ ಆಡಬಂದ
ಗೆಳತಿಯರ ಎಳೆದೊಯ್ಯುವ
ಅಪ್ಪಂದಿರ ತಿರಸ್ಕಾರದಲ್ಲೆ ?
ಅವರ ಅಪ್ಪಂದಿರ
ಜೊಲ್ಲು ಸುರಿಸುವ ತುಟಿಗಳಲ್ಲೆ?
ಎಲ್ಲಿ ಹುಡುಕಲಿ ನನ್ನ -
ಕಳಕೊಂಡ ಮುಂಜಾವುಗಳನ್ನ ?

ಇದು ದೇವದಾಸಿಯ ಮಗಳ ವೇದನೆ. ನಾವು ಕಾಣುತ್ತಿರುವ ವಾಸ್ತವ ಸತ್ಯ. ಅಂತವರ ಪಾಡು ಕಂಡ ಕವಯಿತ್ರಿ, ಆ ಶಿಕ್ಷೆ ವೈರಿಗೂ ಬೇಡ ಎಂಬ ಭಾವನೆ ವ್ಯಕ್ತಪಡಿಸಿದ್ದಾರೆ.

ಕವಯಿತ್ರಿ ಕಷ್ಟ ಜೀವಿ, ಕೋಮಲ ಹೃದಯಿ, ಯಾರ ಕಷ್ಟ ಕಂಡರೂ ಸಹಾಯ ಮಾಡುವ ಮನೋಭಾವ. ಅನೇಕರ ಜೀವನಕ್ಕೆ ಮಾರ್ಗ ಹುಡುಕಿಕೊಟ್ಟವರು. ಇವರ ಸಹಾಯದಿಂದ ಕುಟುಂಬದ ಅನೇಕ ಜನರು ದಡ ಕಂಡುಕೊಂಡಿದ್ದಾರೆ. ಆದರೆ ಮನುಷ್ಯ ಸ್ವಭಾವನೇ ಹೇಗೆಂದರ ಕಷ್ಟದಲ್ಲಿದ್ದಾಗ ಸಹಾಯ ಮಾಡಿದವರನ್ನು ಮರತೇ ಬಿಡುತ್ತಾರೆ. ತಮ್ಮ ಬದುಕು ಸಾಗಿಸಲು ಶಕ್ತಿ ಬಂದರೆ ಸಾಕು ಹಿಂದಿನದನ್ನು ಮರೆತೆ ಬಿಡುತ್ತಾರೆ. ಸುಕನ್ಯಾರವರು ಬಹುಶಃ ಒಂದು ಏಣಿಯಂತೆ ಎಲ್ಲರನ್ನು ಮೇಲಕ್ಕೆತ್ತಲು ನೋವಿನ ಭಾರ ಹೊತ್ತಿದ್ದಾರೆ. ಆ ಭಾವನೆ 'ಏಣಿ' ಎಂಬ ಕವನದಲ್ಲಿ ವ್ಯಕ್ತವಾಗಿದೆ.

ನಾನೊಂದು ಏಣಿ
ಎಷ್ಟೊಂದು ಜನರನ್ನು
ಎತ್ತಿ ಹಿಡಿದಿದ್ದೇನೆ
ನನ್ನ ಮೇಲೆ ಹತ್ತಿ ಹೋದ
ಕೆಲವರು ನನಗೆ ಕೈ ಬೀಸಿದ್ದಾರೆ
ನಾನು ನೋಡುತ್ತೇನೆ. ಹೇಗೆ ಇಳಿಯುತ್ತಾರೆಂದು
ಒಂದೊಂದು ಹೆಜ್ಜೆ ಭಾರ

ಹೊರುವಾಗ ನಾ
ಪಟ್ಟ ಪಾಡು ನನಗೆ ಗೊತ್ತು.
ಲೀಲಾಜಾಲವಾಗಿ ಮೇಲೇರಿದ
ಇವರಿಗೆ ಭಾರ ಹೊತ್ತವರ
ಕಾಳಜಿಯೇ ಇಲ್ಲ
ಅನೆಭಾರ ಹೊತ್ತು
ಗಟ್ಟಿನೆಲದಲ್ಲಿ ಕಾಲೂರಿ
ನಿಂತ ನನಗೆ ಬೀಳುವ ಭಯವಿಲ್ಲ.

ದುಃಖದ ನೋವು, ಕಷ್ಟದ ಅನುಭವ, ಅನುಭವಿಸಿದವರಿಗೆ ಗೊತ್ತು. ಅಷ್ಟೆಲ್ಲಾ ಕಷ್ಟ ಪಟ್ಟು ಇನ್ನೊಬ್ಬರನ್ನು ಮುಂದೆ ತರಲು ಪ್ರಯತ್ನಿಸುತ್ತೇವೆ. ಸಹಾಯ ಪಡೆದುಕೊಂಡವರಿಗೆ ಸ್ವಲ್ಪವೂ ಕೃತಜ್ಞತಾ ಭಾವನೆಯೇ ಇರದಿದ್ದರೆ?

ಎದೆಯಲ್ಲಿ ಕುದಿಯುವ ಲಾವಾರಸ
ನೆತ್ತಿಯನ್ನು ಸುಡುವ ತಪ್ತ ಸೂರ್ಯ
ಸುತ್ತಲೂ ಸುತ್ತಿಕೊಂಡಿರುವ
ಅನ್ಯಾಯ, ಅತ್ಯಾಚಾರ, ಅಪಮಾನದ
ಪಂಚಾಗ್ನಿಯ ಮಧ್ಯೆ ಕುಳಿತು
ಕವಿಗೋಷ್ಠಿಗೊಂದು ಕವಿತೆ ಬರೆಯುತ್ತೇನೆ
ಕಾದ ನೆಲದ ಈ ಕರೆಗೆ
ಗುಡುಗು ಸಿಡಿಲುಗಳು ಸಹಾನುಭೂತಿಸಿ
ಮಿಂಚಿನ ಬೆಳಕಲ್ಲಿ
ದೊಡ್ಡ ಮಳೆಹೊಯ್ದು ಕೊಚ್ಚೆಯೆಲ್ಲಾ
ಒಮ್ಮೆ ಕೊಚ್ಚಿ ಹೋಗುವವರೆಗೆ
ಕವನ ಬರೆಯುತ್ತಲೇ ಇರುತ್ತೇನೆ.

ಒಂದೆಡೆ ಕೂಡಿದ ಹೊಲಸು ಸ್ವಚ್ಛವಾಗಬೇಕಾದರೆ, ದೊಡ್ಡ ಮಳೆಯೇ ಬರಬೇಕು. ಅಂದಾಗ ಸಮಾಜ ಶುದ್ಧವಾಗುತ್ತದೆ, ಶುಭ್ರವಾಗುತ್ತದೆ. ನ್ಯಾಯ ನೀತಿ ಉಳಿಯ ಬೇಕಾದರೆ ಸಮಾಜದಲ್ಲಿ ಒಳ್ಳೆಯವರು ಬರಬೇಕು. ಒಳ್ಳೆಯತನ ಬೆಳೆಯಬೇಕು, ಉಳಿಯ ಬೇಕು.

ಹೀಗೆ ಸುಕನ್ಯಾರವರು ತಮ್ಮ ಅನುಭವಗಳನ್ನು ಸ್ಪಷ್ಟವಾಗಿ, ಸರಳವಾಗಿ, ಶಕ್ತಿಯುತ ಭಾಷೆಯಲ್ಲಿ ಕಾವ್ಯವಾಗಿಸಿದ್ದಾರೆ. ಶಬ್ದಗಳ ಮೇಲಿರುವ ಹಿಡಿತ ಮತ್ತು ಭಾವನೆಗಳ ತೀವ್ರತೆ ಗಮನಾರ್ಹವಾದುದು.

■

ಜಾಗತೀಕರಣ : ಕನ್ನಡ ಸೃಜನಶೀಲ ಗ್ರಹಿಕೆ

● ಎಸ್. ಚಂದ್ರಕಿರಣ ಕುಳವಾಡಿ

ಭಾರತೀಯ ಪ್ರಜಾಪ್ರಭುತ್ವವು ಹಸಿವು, ಅಪಮಾನ, ಬಡತನ, ಅಸಹಾಯಕತೆಗಳ ಜೊತೆಗೆ ಅಧಿಕಾರದ ಅಟ್ಟಹಾಸ, ಪ್ರಭುತ್ವದ ಕ್ರೌರ್ಯ, ಸ್ವಾರ್ಥದ ಪಾಶವೀತನ, ಜಾತಿವಾದದ ಅಹಂಕಾರ, ಭ್ರಷ್ಟಾಚಾರದ ವಿಪರೀತತೆ, ಶ್ರೀಮಂತಿಕೆಯ ದೌಲತ್ತು, ಭಯೋತ್ಪಾದನೆ ಮತ್ತು ಕೋಮುವಾದದ ಠೇಂಕಾರ ಮುಂತಾದವುಗಳನ್ನು ತನ್ನೊಡಲಿನಲ್ಲಿ ವಿರೋಧಾಭಾಸದಂತೆ ಸಂಭಾಳಿಸಿಕೊಂಡು ಸಾಗುವ ವಿಪರ್ಯಾಸದ ಸಂಕಥನಗಳ ಚರಿತ್ರೆಯ ನಿರಂತರ ಪ್ರಕ್ರಿಯೆ. ಇವುಗಳ ನಡುವೆ ಸಾಮಾಜಿಕ ಚಳವಳಿಗಳು ನಿರ್ಮಿಸಿದ ಬದುಕಿನ ಬಗೆಗಿನ ಕಾಮನಬಿಲ್ಲಿನ ಭ್ರಮೆ ಮತ್ತು ಮಿಥ್ಯೆಗಳು ಅಪಾರವಾದವು. ಇಂಥ ಚಳವಳಿಗಳ ಮುಂಚೂಣಿಯಲ್ಲಿ ಗುರುತಿಸಿಕೊಂಡ ಅನೇಕ ಸೋಕಾಲ್ಡ್ ನಾಯಕರು ಈ ದೇಶದ ಭ್ರಷ್ಟ ರಾಜಕಾರಣಿಗಳನ್ನು ಮೀರಿಸುವ ಎಲ್ಲಾ ಕರಾಮತ್ತುಗಳನ್ನು ಕರತಲಾಮಲಕ ಮಾಡಿಕೊಂಡು ಅವರಿಗಿಂತ ಹತ್ತು ಹೆಜ್ಜೆ ಮುಂದಿದ್ದಾರೆ. ಇಂಥ ಸಂದರ್ಭದಲ್ಲಿ ವಿವೇಕಪೂರ್ಣ ಬೌದ್ಧಿಕ ಮುಖಾಮುಖಿಯ ಜೊತೆಗೆ ಎದೆಯ ಅಂತರಂಗದ ತೀರ್ಮಾನಗಳು ಕೂಡ ಇಲ್ಲಿ ಸೋಲುಂಡಿವೆ. ಪ್ರತಿ ಕ್ಷಣಕ್ಷಣವೂ ಕೂಡ ಜೀವಪರವಾದ ಮಾನವೀಯ ಹಕ್ಕುಗಳನ್ನು ಹತ್ತಿಕ್ಕುವ ಈ ಸಾಮಾಜಿಕ ವ್ಯವಸ್ಥೆಯೊಳಗೆ ಜಾಗತೀಕರಣದ ಪರಿಣಾಮ ಮತ್ತು ಅದರ ಪ್ರಕ್ರಿಯೆಗಳು ಈ ನೆಲದ ಮೇಲಿನ ಬೀಸುವ ಗಾಳಿ, ಹರಿಯುವ ನೀರು, ಬೀಳುವ ಮಳೆಯ ಮೇಲೂ ಅಧಿಕಾರಯುತ ಅಧಿಕೃತ ನಿಯಂತ್ರಣವನ್ನು ಸಾಧಿಸಿ ನೆಲದ ಬದುಕನ್ನು ಉಧ್ವಸ್ತಗೊಳಿಸಿವೆ. ಇಂಥ ವಿಕಾರರೂಪಿ ವ್ಯವಸ್ಥೆಗೆ ಕಾರಣವಾಗಿರುವ ಜಾಗತೀಕರಣದ ಪರಿಣಾಮವನ್ನು ಕುರಿತಂತೆ ಆಧುನಿಕ ಕನ್ನಡ ಸೃಜನಶೀಲ ಮನಸ್ಸು ಅದನ್ನು ಗ್ರಹಿಸಿರುವ ರೀತಿ ಹೇಗೆಂಬುದನ್ನು ಗುರುತಿಸುವುದು ಮತ್ತು ಅಂತಹ ಕೃತಿಗಳನ್ನು ದಾಖಲಿಸುವುದು ಮಾತ್ರವೇ ಈ ಲೇಖನದ ಉದ್ದೇಶವಾಗಿದೆ.

ಮುಂಗಾರಿನ ಮೊದಲ ಮಳೆ ಇಳೆಗೆ ಬಿದ್ದಾಗ ಗಾಳಿಯಲ್ಲಿ ಅಡರುವ ಮಣ್ಣಿನ ಘಮಲು, ಹಳ್ಳ ತೊರೆಗಳ ಹರಿವ ನಾದ, ಬೆಳೆದ ಬೆಳೆ ಬೀಳುವ ಮಳೆಗೆ ಬಾಗುವ ಪರಿ, ಮಲ್ಲಿಗೆಯ ಪರಿಮಳ, ಕೊಳದಲ್ಲಿ ತಾವರೆಯ ಸೌಂದರ್ಯ, ತಿಳಿ ನೀರ ಶುಭ್ರತೆ, ಇವೆಲ್ಲವುಗಳಿಂದ ಮುದಗೊಂಡು ಹಸನಾದ ಬದುಕು ಜಾತ್ರೆ ತೇರುಗಳ ಸಂಭ್ರಮ ಸಡಗರ, ಬೇಟೆ ಮತ್ತು ಬೇಟೆಯ ರೋಮಾಂಚನಗಳು, ಮನುಷ್ಯ ಮತ್ತು ಪ್ರಾಣಿಪಕ್ಷಿಗಳ ಅನುಪಮ ಸಂಬಂಧ, ಹಳ್ಳಿ-ಹಳ್ಳಿಗಳ ನಡುವಿನ ಬಾಂಧವ್ಯ, ಮುಗ್ಧ ಪ್ರಣಯ ಪ್ರಪಂಚದ ಸ್ನಿಗ್ಧರೂಪಗಳು, ತೊನೆದಾಡುವ ಹಸಿರು, ಬೆಟ್ಟ, ಕಾಡು, ಕಡಲು, ಅವುಗಳ ರುದ್ರ ರಮಣೀಯತೆ, ಬಾನಲ್ಲಿ ನೆರೆದ ಮೋಡಗಳ ದಟ್ಟಣೆ ಹಾಗೂ ಚುಕ್ಕಿ ಚಂದ್ರಮರ ಸಂತೆ, ಮೂಡು ಮುಳುಗುಗಳ ಅಲೌಕಿಕ ವೈಭವ, ಗ್ರಾಮಜೀವನದ ಬೆವರು, ಬಸಿರು, ಬಯಕೆಗಳು; ಜೊತೆಗೆ ಅವುಗಳ ಆಳದಲ್ಲಿದ್ದ ಫ್ಯೂಡಲ್ ವ್ಯವಸ್ಥೆಯ ಕ್ರೌರ್ಯ, ಜಾತಿ ವ್ಯವಸ್ಥೆಯಿಂದ ತತ್ತರಿಸುವ ಸಮುದಾಯಗಳ ಬದುಕಿನ

ಭೀಭತ್ಸತೆ ಈ ಎಲ್ಲವನ್ನೂ ಕನ್ನಡ ಸಾಹಿತ್ಯವು ತನ್ನ ಅನೇಕ ವಿನ್ಯಾಸಗಳಲ್ಲಿ ವಸ್ತುವಾಗಿ ತುಂಬಿಕೊಂಡು ಸಮೃದ್ಧವಾಗಿದೆ. ಆಧುನಿಕತೆ ಅಡಿ ಇಟ್ಟಹಾಗೆ ಆ ತರಹದ ಅನುಭವಗಳ ದಟ್ಟತೆ ಕಳೆದು ಹೋಗಿ ನಗರೀಕರಣದ ವಿಪ್ಲವಗಳನ್ನು ಮತ್ತು ಅದರಿಂದ ಉಂಟಾದ ಸಾಮಾಜಿಕ ತಲ್ಲಣಗಳಾದ ಅಸ್ತಿತ್ವದ ಹುಡುಕಾಟ, ವಿಕ್ಷಿಪ್ತ ಬದುಕಿನ ಹಳವಂಡಗಳಾದ ಕಾಮ, ಕನಸು, ಕ್ರಾಂತಿ, ಭ್ರಾಂತಿಗಳೆಲ್ಲವನ್ನೂ ಆಶ್ರಯಿಸಿಯೂ ಕೂಡ ಸಾಹಿತ್ಯದ ಹರವು ವಿಸ್ತಾರವಾಗಿದೆ. ಆ ನಂತರದ ಆಧುನಿಕೋತ್ತರ ನೆಲೆಯಾದ ಜಾಗತೀಕರಣಕ್ಕೆ ನಮ್ಮ ಬದುಕು ತೆರೆದುಕೊಂಡ ಹಾಗೆ ಕಾರ್ಪೊರೇಟ್ ಜಗತ್ತಿನ ಚಿತ್ರವಿಚಿತ್ರ ಭಗ್ನಗೊಂಡ ಸಂವೇದನೆಗಳು, ಮೆಟ್ರೊಪೊಲಿಯನ್ ಸಂಸ್ಕೃತಿಯ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಹಸಿಬಿಸಿಯ ಕನಸುಗಾರಿಕೆಯ ಜೊತೆಯಲ್ಲಿ ಚಕ್ಕಂದವಾಡುವ ಬಂಡವಾಳಶಾಹಿ ವ್ಯವಸ್ಥೆಯ ಕೊಳ್ಳುಬಾಕುತನ ಸೇರಿಕೊಂಡಿದೆ. ಮೈ-ಮನಸ್ಸುಗಳು ಕೇವಲ ಹಣಕ್ಕಾಗಿ ಮಾರಾಟವಾಗುವುದೇ ಈ ನೆಲೆಯ ಆತ್ಯಂತಿಕ ಆಶಯವಾಗಿರುವುದು ಯಾವ ಅಯ್ಯೆಗೂ ಅವಕಾಶವಿಲ್ಲವಾಗಿದೆ. ಇಂಥ ಅನೇಕ ಮಗ್ಗಲುಗಳನ್ನು ಕೂಡ ಸಾಹಿತ್ಯ ರೂಪಗಳಿಗೆ ಒಗ್ಗಿಸಿಕೊಳ್ಳುವ ಮತ್ತು ಅದನ್ನು ಹದಗೊಳಿಸುವ ಕ್ರಿಯೆ ನಿಧಾನವಾಗಿ ಸಾಗುತ್ತಾ ಇದೆ. ಆಧುನಿಕ ಬದುಕಿನ ಈ ಭಿನ್ನರೂಪಿ ಸಂವೇದನೆಗಳಲ್ಲಿ ಜಾಗತೀಕರಣದ ಪರಿಣಾಮಗಳು ಸಾಹಿತ್ಯವನ್ನು ಆಕ್ರಮಿಸಿಕೊಂಡಿದ್ದು ನಮ್ಮ ಸಾಂಸ್ಕೃತಿಕ ಛಿದ್ರೀಕರಣದ ಸಂದರ್ಭದಲ್ಲಿ ಎನ್ನುವುದು ಚಾರಿತ್ರಿಕವಾದುದು. ಜಾಗತೀ ಕರಣವನ್ನು ಸಂಸ್ಕೃತಿಯ/ಚರಿತ್ರೆಯ/ರಾಜಕಾರಣದ ಇಲ್ಲವೇ ಅರ್ಥವ್ಯವಸ್ಥೆಯ ಜೊತೆಯಲ್ಲಿ ಗುರುತಿಸುವ ನೆಲೆ ಈಗಾಗಲೇ ಗಂಭೀರವಾಗಿ ಮುಂದುವರಿದಿದೆ. ಆದರೆ ಸೃಜನಶೀಲ ಸಾಹಿತ್ಯ (ವಿಚಾರ ಸಾಹಿತ್ಯವನ್ನು ಹೊರತುಪಡಿಸಿ)ವನ್ನು ನಮ್ಮೊಳಗಿನ ಒಡೆದ ಮನಸ್ಸುಗಳು ವರ್ತಮಾನದ ಬಿಕ್ಕಟ್ಟಿನಲ್ಲಿ ಜಾಗತೀಕರಣದ ಪ್ರಕ್ರಿಯೆಗಳನ್ನು ನಿರ್ವಚನಗೊಳಿಸಿರುವುದು ತುಂಬಾ ವಿರಳವಾದುದು. ಬರಹಗಾರನ ಲೋಕದೃಷ್ಟಿಗೆ ಪೂರಕವಾಗಿ ಸೃಜನಶೀಲತೆಯ ಗ್ರಹಿಕೆಗಳು ಈ ನೆಲೆಯಲ್ಲಿ ತೀರಾ ಭಿನ್ನ ಭಿನ್ನವಾದ ನಿಲುವುಗಳನ್ನೊಳಗೊಂಡಿವೆ.

ಆಧುನಿಕತೆ, ಉದಾರೀಕರಣ, ಕೈಗಾರೀಕರಣ, ಖಾಸಗೀಕರಣ ಮತ್ತು ವಸಾಹತೋತ್ತರ ಕ್ರಾಂತಿಕಾರಕ ಬದಲಾವಣೆಗಳು ಸಾಮಾಜಿಕ ಬದುಕಿನ ಸ್ಥಿತ್ಯಂತರ ಮತ್ತು ಪಲ್ಲಟಕ್ಕೆ ಕಾರಣ ವಾಗಿವೆ. ಇವುಗಳ ವರ್ತನೆಯಲ್ಲಿ ನಾವು ಜಾಗತೀಕರಣವನ್ನು ಗ್ರಹಿಸುವುದಾದರೆ, ಅಂತಹ ಪರಿಕಲ್ಪನೆ ಕನ್ನಡದಲ್ಲಿ ಹೊಸದು. ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಕನ್ನಡ ಸಾಹಿತ್ಯದ ರಾಚನಿಕ ವಿನ್ಯಾಸಗಳನ್ನು ಆಧರಿಸಿಕೊಂಡು ಮಾತನಾಡುವುದಾದರೆ ನಗರೀಕರಣ ಮತ್ತು ಆಧುನೀಕರಣದ ಪ್ರಭಾವದಿಂದ ಆದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಅನೇಕ ಸೃಜನಶೀಲ ಕೃತಿಗಳು ಬಂದಿವೆ. ದೇವನೂರು ಅವರ **ಡಾಂಬರು ಬಂದುದು**, ತೇಜಸ್ವಿಯವರ **ಅಬಚೂರಿನ ಪೋಸ್ಟಾಫೀಸು** ಮತ್ತು **ತಬರನ ಕಥೆ**, **ಜುಗಾರಿ ಕ್ರಾಸ್** ಕಾದಂಬರಿ, ಲಂಕೇಶರ **ಮುಸ್ಸಂಜೆಯ ಕಥಾ ಪ್ರಸಂಗ**, ಚಿತ್ತಾಲರ **ಶಿಕಾರಿ**, ದೇಸಾಯಿ ಅವರ **ಮುಕ್ತಿ**, ಆಲನಹಳ್ಳಿ ಕೃಷ್ಣ ಅವರ **ಪರಸಂಗದ ಗೆಂಡೆ ತಿಮ್ಮ**, ವ್ಯಾಸರಾಯ ಬಲ್ಲಾಳರ **ಬಂಡಾಯ**, ಮೊಗಳ್ಳಿಯವರ ಕಥೆ **ನನ್ನ ಅಜ್ಜನಿಗೊಂದು ಆಸೆ ಇತ್ತು**, ಅಡಿಗರ **ಭೂಮಿಗೀತ** ಮತ್ತು **ಹಿಮಗಿರಿಯ ಕಂದರ** ಹಾಗೂ **ಗೊಂದಲಪುರ** ಮುಂತಾದ ಕವಿತೆಗಳನ್ನು

ಗಮನಿಸಬಹುದು. ಇವೆಲ್ಲವೂ ಕೂಡ ಆಧುನಿಕ ಯಂತ್ರ ನಾಗರಿಕತೆಯ ಪರಿಣಾಮವಾಗಿ ಉಂಟಾದ ಸಾಂಸ್ಕೃತಿಕ ಪಲ್ಲಟಗಳನ್ನು ಕುರಿತಂತೆ ಸೃಜನಶೀಲ ಕನ್ನಡ ಗ್ರಹಿಕೆಗಳಾಗಿವೆ ಹಾಗು ಜಾಗತೀಕರಣದ ಸಂವೇದನೆಗೆ ಪೂರ್ವಭಾವಿ ಮುನ್ನುಡಿಯಾಗಿ ಮೂಡಿ ಬಂದಿವೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಆದರೆ ಜಾಗತೀಕರಣ ಅನ್ನೋದು ಆರ್ಥಿಕ ಉದಾರೀಕರಣ ಮತ್ತು ಮುಕ್ತ ಮಾರುಕಟ್ಟೆ ಪ್ರವೇಶದಿಂದ ಆಗಿರುವ ಒಂದು ಸಮಾಜೋ-ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಬದಲಾವಣೆಗೆ ಸಂಬಂಧಿಸಿದ ವಿಶ್ವವ್ಯಾಪಾರ ಸಂಬಂಧಿ ಒಪ್ಪಂದ. ತೊಂಬತ್ತರ ದಶಕದ ತರುವಾಯ ವಿಶ್ವವಾಣಿಜ್ಯೀಕರಣದಿಂದ ಆದ ಗ್ಯಾಟ್ ಒಪ್ಪಂದ, ಡಂಕಲ್ ಪ್ರಸ್ತಾವನೆ, ಐ.ಎಂ.ಎಫ್. ಪ್ರಸ್ತಾವನೆಗಳು, ಬಹುರಾಷ್ಟ್ರೀಯ ಕಂಪನಿಗಳು ಆರಂಭಿಸಿದ ವಿಜ್ಞಾನ ತಂತ್ರಜ್ಞಾನದ ವ್ಯಾಪಾರ ವಹಿವಾಟು, ಐಟಿ ಮತ್ತು ಬಿಟಿ ಕ್ಷೇತ್ರಗಳು ಮುಂತಾದವು. ಇಂತಹ ಆಧುನಿಕ ಸಾಮ್ರಾಜ್ಯಶಾಹಿಯ ನೇರ ಅಪ್ಪಳಿಸುವಿಕೆಯ ವಿಪರ್ಯಾಸಗಳಿಗೆ ನಮ್ಮ ಕನ್ನಡ ಸೃಜನಶೀಲ ಜಗತ್ತು ಪ್ರತಿಕ್ರಿಯಿಸಿದ್ದು ತುಂಬಾ ತೆಳುವಾಗಿ ಎನ್ನಬಹುದು. ತೊಂಬತ್ತರ ದಶಕದಲ್ಲಿ ಬಂದ ದಲಿತ ಬಂಡಾಯ ಸಾಹಿತ್ಯ ಚಳವಳಿಗಳಲ್ಲಿ ಬಂಡಾಯ ಚಳವಳಿಯು ಸಾಮಾಜಿಕ ಪ್ರತಿಭಟನೆ ಮತ್ತು ಪ್ರತಿರೋಧದಲ್ಲಿ ತಟಸ್ಥವಾದರೆ, ದಲಿತ ಸಂವೇದನೆ ತನ್ನ ಹಸಿವು ಅಪಮಾನಗಳನ್ನು ಅಧೋಜಗತ್ತಿನ ದ್ರವ್ಯಗಳಾಗಿ ಸ್ವೀಕರಿಸಿ ಸಾಂಸ್ಕೃತಿಕ ನಿರ್ಮಾಣದ ಅಸ್ಮಿತೆಯಲ್ಲಿಯೆ ಖುಷಿಪಡುತ್ತಾ ನಿಂತ ನೀರಾಯಿತು. ಈ ಕಾರಣಕ್ಕಾಗಿ ಕಾಲಮಾನದ ಭೀಕರ ತುರ್ತುಗಳಿಗೆ ತತ್‌ಕ್ಷಣದ ಪ್ರತಿಕ್ರಿಯೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ. ಈ ಸ್ಥಿತಿ ಕೇವಲ ದಲಿತ ಬಂಡಾಯಕ್ಕೆ ಮಾತ್ರವೇ ಸೀಮಿತವಾಗಬೇಕಾಗಿಲ್ಲ. ವರ್ತಮಾನಕ್ಕೆ ಯಾವತ್ತೂ ಸ್ಪಂದಿಸದ ಸ್ಥಿತಿಯೇ ಕನ್ನಡ ಸಾಹಿತ್ಯ ಪರಂಪರೆಯ (ಬಾಲ್ಯದ ಹಳಹಳಿಕೆ, ಗತಕಾಲದ ಕನವರಿಕೆ ಇಲ್ಲವೇ, ಕೈಗೆ ಸಿಗದ ಆದರ್ಶದ ಕನಸುಗಾರಿಕೆ) ಲಕ್ಷಣವಾಗಿದೆ ಎಂದರೆ ನಮಗೆ ಮುಜುಗರವಾಗಬೇಕಿಲ್ಲ

ಪ್ರೊ. ನಂಜುಂಡಸ್ವಾಮಿ ಮತ್ತು ಬಿ.ವಿ. ಚಂದ್ರಪ್ರಸಾದ್ ತ್ಯಾಗಿ ಮುಂತಾದ ಸಮಾಜೋ-ಆರ್ಥಿಕ ಚಿಂತಕರು, ಗ್ಯಾಟ್, ಡಂಕಲ್, ಎಂ.ಎನ್.ಸಿ. ಹಾಗೂ ಜಮೀನ್ದಾರಿ ಪಾಳೆಗಾರಿಕೆ, ಸಾಮಾಜಿಕ ಅಸಮಾನತೆ, ಸರ್ಕಾರಿ ಅಪದ್ಧ ಯೋಜನೆಗಳ ವಿರುದ್ಧ ಸಾಮಾಜಿಕ ಹೋರಾಟಗಳನ್ನು ಕಟ್ಟುತ್ತಿದ್ದ ಕಾಲಘಟ್ಟದಲ್ಲಿ ಪ್ರೊ. ಅರವಿಂದ ಮಾಲಗತ್ತಿಯವರ ಜಾಗತೀಕರಣದ ವಿಕಾರ ಹಾಗೂ ಅದರ ಅಪಾಯಗಳನ್ನು ಸೃಜನಶೀಲ ನೆಲೆಯಲ್ಲಿ ಗ್ರಹಿಸುತ್ತಾ ಇದ್ದರು ಮತ್ತು ಜಾಗತೀಕರಣದ ಬದಲು ದೇಸೀಯತೆಯ ಪರ್ಯಾಯ ನೆಲೆಗಳನ್ನು ಹುಡುಕುವ ಕೆಲಸ ಆರಂಭಿಸಿದ್ದರು. ಅವರ **ಮೂರನೇ ಕಣ್ಣು** (೧೯೯೬) ಎಂಬ ಕವನಸಂಕಲನವು ಉದಾರೀಕರಣದ ಸಮಸ್ಯೆ ಮತ್ತು ಅದರ ದುಷ್ಪರಿಣಾಮಗಳನ್ನು ಪ್ರಜ್ಞಾಪೂರ್ವಕವಾಗಿ ಭಾರತೀಯ ದಲಿತ ಪ್ರಜ್ಞೆಯ ಮೂಲಕ ಅನಾವರಣಗೊಳಿಸಿದೆ. ಈ ಸಂಕಲನವು ಆಗಿನ ಕಾಲದಲ್ಲಿಯೇ ಸೃಜಿಸಿರುವ ಸೈದ್ಧಾಂತಿಕ ಹಾಗೂ ತಾತ್ವಿಕ ನೆಲೆಗಳು ಈಗಲೂ ಕೂಡ ನಮ್ಮನ್ನು ದಂಗುಬಡಿಸುತ್ತವೆ. ದಲ್ಲಾಳಿ ಪ್ರೇರಿತ ರಾಜಕೀಯ, ಆರ್ಥಿಕ ಸೂತ್ರಗಳು; ಸಾಮಾಜಿಕ ಭ್ರಮಾತ್ಮಕ ಸಂಘರ್ಷ, ಸಾಂಸ್ಕೃತಿಕ ಅರಾಜಕತೆ, ಗೊತ್ತು ಗುರಿಯಿಲ್ಲದ ವಿಜ್ಞಾನ

ಮತ್ತು ತಂತ್ರಜ್ಞಾನ, ರಾಜಕೀಯ ದೊಂಬರಾಟದಲ್ಲಿ ಪರಕೀಯವಾಗುವ ಪ್ರಜಾತಂತ್ರ, ಅಪಾಯಕಾರಿ ಕೃಷಿಕ್ಷೇತ್ರದ ನೀತಿಗಳು, ಹುನ್ನಾರದ ಸಮಾಜವಾದಿ ಸಿದ್ಧಾಂತಗಳು, ಕೃತಕವಾಗುತ್ತಿರುವ ಮಾನವ ಸಂಬಂಧ, ತೃತೀಯ ರಾಷ್ಟ್ರಗಳು ಎದುರಿಸುತ್ತಿರುವ ಗಂಡಾಂತರಕಾರಿ ಪರಿಸ್ಥಿತಿಗಳು ಮುಂತಾದ ಜಾಗತೀಕರಣದ ವಿವಿಧ ನೆಲೆಯ ವಿಕಾರಗಳನ್ನು ಕುರಿತು ಈ ಕವನ ಸಂಕಲನವು ಚರ್ಚಿಸುತ್ತದೆ.

ಅವರದೇ ಆದ ಮತ್ತೊಂದು ಕವನ ಸಂಕಲನ **ಸಿಲಿಕಾನ್ ಸಿಟಿ ಮತ್ತು ಕೋಗಿಲೆ** (೨೦೦೩) ವಸಾಹತ್ತೋತ್ತರ ಸಮಾಜದ ಬದುಕಿನ ಬಹುಮುಖಿ ಸಮಸ್ಯೆಗಳನ್ನು ಅನುಸಂಧಾನ ಮಾಡುತ್ತದೆ. ಸಿಲಿಕಾನ್ ಸಿಟಿಗೂ ಕೋಗಿಲೆಗೂ ಯಾವ ಸಂಬಂಧವೂ ಇಲ್ಲ. ಸಿಲಿಕಾನ್ ಸಿಟಿಯಲ್ಲಿರುವುದು ಬರಿ ಯಂತ್ರಗಳು ಹಾಗೂ ಸಿಮೆಂಟ್ ಕಟ್ಟಡಗಳು. ಅಲ್ಲಿ ಕೋಗಿಲೆಗೆ ವಾಸಿಸಲು ಸ್ಥಳವಿಲ್ಲ. ನಾಗರಿಕತೆಯ ವನದಲ್ಲಿ, ಅಭಿವೃದ್ಧಿಯ ನೆಪದಲ್ಲಿ, ಕೈಗಾರೀಕರಣದ ಚಪಲದಲ್ಲಿ ಜೀವಜಗತ್ತು ಸಂಕಟಕ್ಕೆ ಸಿಲುಕಿದೆ. ಅಭಿವೃದ್ಧಿ ಎಂಬ ಭ್ರಮಾತ್ಮಕ ಮುಕ್ತ ಮಾರುಕಟ್ಟೆಯು ಜಗತ್ತನ್ನು ಒಂದು ಗ್ರಾಮವಾಗಿ ಪರಿಗಣಿಸಿ ಅನುಕಂಪವಿಲ್ಲದ, ಮಾನವೀಯತೆಯ ಲವಲೇಶವೂ ಇಲ್ಲದ ರಾಕ್ಷಸರನ್ನು ರಪಿಸುತ್ತಿದೆ ಎಂಬುದು ಕವನಸಂಕಲನದ ಆಶಯವಾಗಿದೆ. ಪ್ರೊ. ಅರವಿಂದ ಮಾಲಗತ್ತಿಯವರು ಕೇವಲ ಜಾಗತೀಕರಣಕ್ಕೆ ಪ್ರತಿರೋಧವಾಗಿ ಮಾತ್ರವೇ ಕಾವ್ಯ ರಚಿಸಲಿಲ್ಲ. ಬದಲಾಗಿ ಜಾಗತೀಕರಣಕ್ಕೆ ಪರ್ಯಾಯ ನೆಲೆಯಾಗಿ ದೇಸೀವಾದ ಮತ್ತು ಸಂಯುಕ್ತವಾದವನ್ನು ಪ್ರತಿಪಾದಿಸುತ್ತಾರೆ. ಆದರೆ ಯಾವುದಕ್ಕೆ ದೇಸೀತನ ಮತ್ತು ಯಾವುದಕ್ಕೆ ಜಾಗತೀಕರಣ ಬೇಕೆಂಬ ವಿವೇಚನೆ ನಮ್ಮ ಯೋಜನಾ ನಿರೂಪಕರಿಗೆ ಇರಬೇಕು ಎನ್ನುತ್ತಾರೆ.

ಡಾ. ಕೆ.ಪಿ. ಮಹದೇವಯ್ಯ ಅವರ **ಬೆಂಕಿಯೊಳಗಿನ ಬದುಕು** (೨೦೦೭) ಈ ದೃಷ್ಟಿಯಿಂದ ಒಂದು ಮುಖ್ಯ ಕವನ ಸಂಕಲನ. ಜಾಗತೀಕರಣವನ್ನು ಕೇವಲ ಮಾರುಕಟ್ಟೆಗೆ ಸೀಮಿತಗೊಳಿಸದೆ ಅದನ್ನು ಧರ್ಮ, ಜಾತಿ ಮುಂತಾದ ಸಾಂಸ್ಕೃತಿಕ ವಿಕಾರಗಳಲ್ಲಿ ಗುರುತಿಸುತ್ತದೆ. ಜ್ಞಾನದೇಗುಲಗಳಾದ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕ ಹುದ್ದೆಗಳು ಲಕ್ಷಾಂತರ ರೂಪಾಯಿಗಳಿಗೆ ಮಾರಾಟವಾಗುವ ವರ್ತಮಾನದ ಕ್ರಿಯೆಯು ಜಾಗತೀಕರಣದ ಫಲವೆನ್ನುತ್ತಾರೆ. ಮಾರ್ಕ್ಸ್‌ವಾದಿ ವಿನ್ಯಾಸದೊಳಗೆ ಬರೆಯುತ್ತಿದ್ದ ಬಂಜಗೆರೆ ಜಯಪ್ರಕಾಶ್‌ರವರ **ಮಹೂವಾ** ಮತ್ತು **ಕಳೆದ ಕಾಲದ ಪ್ರೇಯಸಿಯರಿಗೆ** ಎಂಬ ಕವನಸಂಕಲನಗಳಲ್ಲಿ ಜಾಗತೀಕರಣದ ಯಡವಟ್ಟುಗಳನ್ನು ನಿರೂಪಿಸುತ್ತಾರೆ. ಜೀವಕ್ಕೆ ಒಂದು ತುತ್ತು ಪ್ರೀತಿ, ಒಂದು ಗುಟುಕು ನೀತಿ, ಗೂಡುಕಟ್ಟಲೊಂದು ಮರ ಜೊತೆಗೆ ಉಳಿಸಿಡಿ ಎಂದು ಕೇಳಿಕೊಳ್ಳುತ್ತಾರೆ. ಮೊಗಳ್ಳಿ ಗಣೇಶ್‌ರವರ **ದೇವಸ್ಮಶಾನ** (೨೦೦೭) ಕವನ ಸಂಕಲನವು ವಿಜಯನಗರದ ಗತ ಇತಿಹಾಸದ ಸಮಾಧಿಯ ಕನವರಿಕೆಯನ್ನು ಅನಾವರಣಗೊಳಿಸುತ್ತಲೇ, ಆಧುನಿಕ ವಿಕಾರಗಳು ಸದ್ಯದ ಕಾಲಮಾನದಲ್ಲಿ ಹೇಗೆ ಸಾಂಸ್ಕೃತಿಕ ಮುಖವಾಡಗಳನ್ನು ಹೊತ್ತು ನರ್ತಿಸುತ್ತಿವೆ ಎಂಬುದನ್ನು ತಿಳಿಸುತ್ತದೆ. ಅಲ್ಲಿನ ರಾಜಕಾರಣ, ವ್ಯಾಪಾರಿಗಳು, ಕಾಮುಕರು, ಸಾಂಸ್ಕೃತಿಕ ಚಿಂತಕರು, ಉದ್ಧಾರದ ನೆಪದಲ್ಲಿ ಹೇಗೆ ಅದ್ದೂರಿ ಬಾಚಿಕೊಳ್ಳುತ್ತಿದ್ದಾರೆ ಎಂಬುದನ್ನು ದೇವಸ್ಮಶಾನ ಕವಿತೆ ನಿರೂಪಿಸುತ್ತದೆ. ಮತ್ತು ಸಂಬಂಧ ಎನ್ನುವುದು ದೊಡ್ಡದು ಹಣ ಎನ್ನುವ ನಂಬಿಕೆಯಲ್ಲಿ ಮನುಷ್ಯ ಜಗತ್ತಿನ ಪರಮ ಪ್ರೀತಿಯನ್ನು ಅಪಾರವಾಗಿ ಗೌರವಿಸುತ್ತಾ

ಬರೆಯುವ ಸುಬ್ಬು ಹೊಲೆಯಾರ್ ಅವರ *ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು* (೨೦೦೩) ಸಾಂಸ್ಕೃತಿಕ ಜಾಗತೀಕರಣಕ್ಕೆ ಪ್ರತಿರೋಧವನ್ನು ಒಡ್ಡುತ್ತದೆ.

ನಾಗತಿಹಳ್ಳಿಯ ರಮೇಶ್‌ರವರ ಸಮುದ್ರ ಮತ್ತು ಮಳೆ, ಕೆ. ಷರೀಫಾ ಅವರ **ಬಿಡುಗಡೆಯ ಕವಿತೆಗಳು**, ವಿ.ಎಂ. ಮಂಜುನಾಥ್‌ರವರ **ಪಾದರ್ ೫೫ ಮತ್ತು ಲೆವೆಲ್ ಕ್ರಾಸಿಂಗ್** ಕವನ ಸಂಕಲನಗಳು, ನಾಗರಾಜ ವಸ್ತಾರೆ ಮತ್ತು ಲಲಿತಸಿದ್ಧಬಸಯ್ಯ ಅವರ ಬಿಡಿಬಿಡಿ ಕವಿತೆಗಳು, ಬಸವರಾಜ್ ವಕ್ಕುಂದ ಅವರ ಹಾಳು ಕೂಗಿನ ಹಕ್ಕಿ (೨೦೦೭) ವಿಜಯಕಾಂತ ಪಾಟೀಲ ಅವರ *ಸಲಸಲದ ಹಾಡು* (೨೦೦೩), ಎಂ. ಡಿ. ವಕ್ಕುಂದ ಅವರ ಬಿಡಿ ಕವಿತೆಗಳು, ಶಶಿಲೇಖ ಅವರ *ಗಂಧದ ಕಡ್ಡಿ* (೧೯೯೪) ಮುಂತಾದ ಸಂಕಲನಗಳ ಜೊತೆಗೆ ಶಿವಪ್ರಸಾದ್ ಗೊಲ್ಲಪಟ್ಟಿಯವರ ಎಲ್ಲಾ ಮಾಯಾ.... ಎಂಬ ಕವಿತೆಯನ್ನ ಇಲ್ಲಿ ಹೆಸರಿಸಲೇ ಬೇಕಾಗುತ್ತದೆ.

ಇನ್ನು ಕಥೆಗಳ ವಿಚಾರಕ್ಕೆ ಬರುವುದಾದರೆ ಸಮಗ್ರ ಕಥಾ ಸಂಕಲನವನ್ನು ಗುರುತಿಸುವುದು ಒಂದು ಕಷ್ಟದ ಕೆಲಸ. ಆದರೆ ಜಾಗತೀಕರಣಕ್ಕೆ ಸೃಜನಶೀಲ ಸ್ಪಂದನೆಯನ್ನು ನೀಡಿದ ಬಿಡಿ ಬಿಡಿಯಾದ ನೂರಾರು ಕಥೆಗಳು ಕನ್ನಡದಲ್ಲಿ ಬಂದಿವೆ. ವಿವೇಕ ಶಾನಭಾಗ ಅವರ *ಹುಲಿ ಸವಾರಿ*, ಜಯಂತ ಕಾಯ್ಕಿಣಿಯವರ *ಬಣ್ಣದ ಕಾಲು* ಮತ್ತು *ತೂಫಾನ್ ಮೇಲ್*, ವಸುಧೇಂದ್ರ ಅವರ *ಯುಗಾದಿ* ಮತ್ತು *ಮನೀಷೆ*, ಅಶೋಕ ಹೆಗಡೆಯವರ *ಒಂದು ತಗಡಿನ ಚೂರಿ*, ಗುರುಪ್ರಸಾದ್ ಕಾಗಿನೆಲೆಯವರ *ನಿರ್ಗುಣ*, ಮಂಜುನಾಥ ಬಮ್ಮನಕಟ್ಟೆಯವರ *ನೆಲದ ಸಾವು*. ವಿ.ಎಂ. ಮಂಜುನಾಥ್ ಅವರ *ಬ್ರಾಂಡಿ*, ತುಕಾರಾಂ ಅವರ *ಕೆರೆಯ ನೆರೆಯ ಊರು*, ಪ್ರಹ್ಲಾದ ಅಗಸನಕಟ್ಟೆಯವರ *ಕಾಯಕ್ಕೆ ನೆಳಲಾಗಿ* (೨೦೦೮) ಲೋಕೇಶ್ ಅಗಸನಕಟ್ಟೆ ಅವರ *ಹಟ್ಟಿಯೆಂಬ ಭೂಮಿಯ ತುಣುಕು* (೨೦೦೭), ಚ.ಹ. ರಘುನಾಥ್ ರವರ *ಒಳಗೂ ಮಳೆ, ಹೊರಗೂ ಮಳೆ*, ಎಂ.ಎಸ್. ಶ್ರೀರಾಮ ಅವರ *ಮಾಯಾ ದರ್ಪಣ*, *ಅವರವರ ಸತ್ಯ* ಮುಂತಾದ ಸಂಕಲನಗಳಲ್ಲಿರುವ ಕೆಲವು ಕಥೆಗಳು ಕಾರ್ಪೊರೇಟ್ ಜಗತ್ತಿನ ಬದುಕಿನಲ್ಲಿನ ಧಾವಂತ ಹಾಗೂ ತಲ್ಲಣಗಳನ್ನು ಚಿತ್ರಿಸುತ್ತವೆ. ಜೀತಗಾರಿಕೆಯ ಮತ್ತೊಂದು ಆಯಾಮವಾದ ಐ.ಟಿ. ಜೀತಗಾರಿಕೆಯು ಜಗತ್ತಿನಾದ್ಯಂತ ಹೇಗೆ ವಿಸ್ತರಿಸಿದೆ ಎಂಬುದು ಇಲ್ಲಿ ಮುಖ್ಯ ವಸ್ತುವಾಗಿದೆ.

ಕಾದಂಬರಿ ಲೋಕದಲ್ಲಿ ಕೆ. ಆರ್. ಚಂದ್ರಶೇಖರ್ ಅವರ *ಬಿಸಿಲುಗುದುರೆಯನೇರಿ ಬದುಕಿನ ಸವಾರಿ* (೨೦೦೮) ಜಾಗತೀಕರಣಕ್ಕೆ ಉತ್ತಮ ಪ್ರತಿರೋಧದ ಕಾದಂಬರಿ ಎಂದು ಹೇಳಬಹುದು. ಕಣಿವೆ ಹೊನ್ನಾಪುರವೆಂಬ ಊರು ಗಣಿಗಾರಿಕೆಯಿಂದಾಗಿ ಹೇಗೆ ಅಧೋಗತಿಗೆ ಇಳಿದು ಭಯೋತ್ಪಾದನೆಯ ತಾಣವಾಗಿ ಹಾಗೂ ಪರಮಾಣು ತ್ಯಾಜ್ಯದ ವಿಲೇವಾರಿ ಸ್ಥಳವಾಗಿ ರೂಪಾಂತರ ಪಡೆಯುತ್ತದೆಂಬುದರ ದುರಂತವನ್ನು ತಿಳಿಸುತ್ತದೆ. ಬಿಳುಮನೆ ರಾಮದಾಸ್‌ರವರ *ಕರಾವಳಿ ಮುದುಗಿ* ಎಂಬ ಕಾದಂಬರಿಯು ಪಕ್ಕು ಪೂಜಾರ್ತಿ ಎಂಬ ತಳವರ್ಗದ ಮಹಿಳೆಯೊಬ್ಬಳು ಹೋಟೆಲ್ ಸ್ಥಾಪನೆ ಮಾಡಿ ಆಧುನಿಕ ಬದುಕಿನಲ್ಲಿ ಮೇಲೆ ಮೇಲೆ ಬರುವುದನ್ನು ತಿಳಿಸುತ್ತದೆ. ಮಲ್ಲಿಕಾರ್ಜುನ ಪಾಟೀಲ ಅವರ *ರೈತ ಕಲ್ಲಪ್ಪನ ಆತ್ಮಹತ್ಯೆ* ರೈತನೊಬ್ಬನ ಗೋಳಿನ ಕಥನವಾಗಿದೆ. ಬರಗೂರರ *ಶಬರಿ*, ದೇಸೀ ಸಂಸ್ಕೃತಿಯನ್ನ

ಉಳಿಸಿಕೊಳ್ಳುವ ಅಗತ್ಯತೆಯನ್ನು ತಿಳಿಸುತ್ತದೆ. ಶಿರಗಾನಹಳ್ಳಿ ಶಾಂತನಾಯಕ ಅವರ ಗೋರ್‌ಮಾಟಿ ಒಂದು ಗ್ರಾಮ ಮತ್ತು ಕುಟುಂಬ ಆಧುನಿಕ ಸಮಾಜದೊಳಗೆ ಸ್ಥಿತ್ಯಂತರಗೊಳ್ಳುವ ರೀತಿಯನ್ನು ತಿಳಿಸುತ್ತದೆ. ಕೇಶವ ರೆಡ್ಡಿ ಹಂದ್ರಾಳರ ಒಕ್ಕಲ ಒನಪು ಗ್ರಾಮೀಣ ಭಾರತದ ದಿವಾಳಿತನವನ್ನು ದಾಖಲಿಸುತ್ತದೆ. ಈ ಎಲ್ಲಾ ಕಾದಂಬರಿಗಳಲ್ಲಿ ಅವನತಿಮುಖಿ ಸಂಸ್ಕೃತಿಯ ಚಲನೆ ಹಾಗು ಜಾಗತೀಕರಣದ ನವವ್ಯಾಣಿಜ್ಯೀಕರಣವು ಸಾಂಪ್ರದಾಯಿಕ ಕಸಬುಗಳಿಗೆ ತಂದೊಡ್ಡುವ ಅಪಾಯವನ್ನು ಚಿತ್ರಿಸುತ್ತವೆ.

ಬೀದಿ ನಾಟಕಗಳು ಜಾಗತೀಕರಣಕ್ಕೆ ಪ್ರಬಲವಾದ ಸೃಜನಶಿಲ ಗ್ರಹಿಕೆಗಳಾಗಿವೆ. ಗ್ಯಾಟ್ ಒಪ್ಪಂದದ ವಿರುದ್ಧದಿಂದ ಹಿಡಿದು ಈ ಹೊತ್ತಿನ ಅಣು ಒಪ್ಪಂದದ ವರೆವಿಗೂ ಬೀದಿ ನಾಟಕಗಳ ವಸ್ತು ಆವರಿಸಿಕೊಂಡಿದೆ. ಉತ್ತರ ಕನ್ನಡದ ಕರಾವಳಿ ತೀರದ ತದಡಿ ಉಷ್ಣಸ್ಥಾವರ, ಕೊಪ್ಪಳದ ಪೆಪ್ಸಿಕೋಲಾ ಕಂಪೆನಿ, ಕೆಂಟುಕಿಚಿಕನ್, ಪಿಜ್ಜಾಕಾರ್ನರ್, ನಿರ್ಬೀಜೀಕರಣವನ್ನು ಸಮರ್ಥಿಸುವ ಮೆಂಟಸೋ ವಿದೇಶಿ ಔಷಧಿ ಮತ್ತು ಬೀಜ ನಿಯಂತ್ರಣ ಸಂಸ್ಥೆ, ಚಾಮಲಾಪುರದ ಉದ್ದೇಶಿತ ವಿದ್ಯುತ್ ಸ್ಥಾವರ, ಎಂ.ಎನ್.ಸಿ.ಗಳು ಸೃಷ್ಟಿಸಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಗಳ ವಿರುದ್ಧ ವಸ್ತುವನ್ನು ಆಯ್ದುಕೊಂಡು ಕರ್ನಾಟಕದ ಅನೇಕ ಪ್ರಗತಿಪರ ಸಂಘಟನೆಗಳು ಒಟ್ಟಾಗಿ ಬೀದಿ ನಾಟಕಗಳನ್ನು ಪ್ರಯೋಗ ಮಾಡಿವೆ. ಇದಲ್ಲದೆ ಶಶಿಕಾಂತ ಎಡಹಳ್ಳಿಯವರ ಪರಿವರ್ತನೆ ಎಂಬ ನಾಟಕವು ಜಾಗತೀಕರಣಕ್ಕೆ ನಾವು ಹೊಂದಿಕೊಳ್ಳದೇ ಹೋದರೆ; ನಮ್ಮ ಬದುಕು ಔಟ್ ಡೇಟೆಡ್ ಆಗುತ್ತದೆ ಎನ್ನುತ್ತದೆ. ಜಾಗತೀಕರಣಕ್ಕೆ ಪರ್ಯಾಯ ನೆಲೆಯಲ್ಲಿ ನಾವು ಎಂಥದ್ದೇ ಪ್ರತಿರೋಧವನ್ನು ಒಡ್ಡಿದರೂ ಅದು ಬೇರೆ ಬೇರೆ ರೂಪದಲ್ಲಿ ಮತ್ತೆ ಮತ್ತೆ ಪ್ರವೇಶ ಮಾಡುತ್ತೆ. ಅದು ಒಂದು ರೀತಿಯಲ್ಲಿ ಹೋದೆಯ ಪಿಶಾಚಿ ಎಂದರೆ, ಇಲ್ಲ ಬಂದೆ ಗವಾಕ್ಷಿಯಲ್ಲಿ ಎಂಬಂತೆ. ಅದಕ್ಕೆ ರೂಪಾಂತರಗಳು ಅನೇಕ. ಈ ಕಾರಣದಿಂದ ಕಾಲಮಾನದ ಹೊಸ ತುರ್ತುಗಳಿಗೆ ನಮ್ಮ ಬದುಕು ಹೊಂದಾಣಿಕೆ ಆಗದೆ ಹೋದರೆ ನಾವು ಅತಂತ್ರರಾಗಬೇಕಾಗುತ್ತದೆ ಎಂಬ ಎಚ್ಚರವನ್ನು ಶಶಿಕಾಂತ ಅವರು ನೀಡುತ್ತಾರೆ. ಈ ಮೂಲಕ ಜಾಗತೀಕರಣವನ್ನು ಅವರು ಸಮರ್ಥಿಸುತ್ತಿಲ್ಲ. ಬದಲಾಗಿ ಅವರ ಅನಿವಾರ್ಯತೆಯನ್ನು ಸಾಮಾಜಿಕ ಸೋಗಲಾಡಿ ವ್ಯವಸ್ಥೆಯಲ್ಲಿ ನಮ್ಮ ಮುಂದಿಡುತ್ತಿದ್ದಾರೆ.

ಹೀಗೆ ನಮ್ಮ ಕನ್ನಡದ ಸೃಜನಶೀಲ ಗ್ರಹಿಕೆಯು ಜಾಗತೀಕರಣದ ಸಂವೇದನೆಗಳನ್ನು ಸಮಷ್ಟಿ ರೂಪದಲ್ಲಿ ಗ್ರಹಿಸಲು ಸಾಧ್ಯವಾಗದೇ ಹೋದರೂ ವ್ಯಕ್ತಿ ವಿಶಿಷ್ಟ ಮಟ್ಟದಲ್ಲಿ ಗ್ರಹಿಸಿರುವುದು ವಿಶೇಷವಾಗಿದೆ. ಮತ್ತು ಅದರ ಯಜಮಾನಿಕೆಯ ದೌರ್ಜನ್ಯವನ್ನು ಸಾಮ್ರಾಜ್ಯಶಾಹಿ ರೂಪಕವಾಗಿ ಅನೇಕ ಕವಿಗಳು ಇಲ್ಲಿ ನಿರ್ಮಿಸಿದ್ದಾರೆ. ಹಾಗೂ ಕೆಲವು ಬರಹಗಾರರಲ್ಲಿ ಜಾಗತೀಕರಣದ ಪರಿಣಾಮಕ್ಕಿಂತಲೂ ಭೀಕರವಾದುದು ಈ ನೆಲದ ಜಾತೀಯತೆಯು ಬಿತ್ತಿದ ವಿಷದ ಭಯೋತ್ಪಾದನೆ ಎಂಬ ಸತ್ಯವನ್ನು ಸಾಂಸ್ಕೃತಿಕ ನೆಲೆಯಲ್ಲಿ ವ್ಯಕ್ತಪಡಿಸಿರುವುದು ಇಲ್ಲಿ ಮುಖ್ಯವಾಗುತ್ತದೆ. ಆರ್ಥಿಕ ಭಯೋತ್ಪಾದನೆಗಿಂತಲೂ ಈ ದೇಶದ ಸಾಂಸ್ಕೃತಿಕ ಭಯೋತ್ಪಾದನೆ ಅತ್ಯಂತ ಕ್ರೂರವಾದುದು ಎಂಬ ನೆಲೆಯಲ್ಲಿ ಜಾತಿಯ ಆಚರಣೆಯ ವಿದ್ರೋಹಗಳು ಮುಖಾಮುಖಿಯಾಗುತ್ತವೆ. ಜಾಗತಿಕ ಭಯೋತ್ಪಾದನೆಗಿಂತಲು

ಹೇಯವಾದುದು ಈ ನೆಲದ ಜಾತಿಯ ಆಚರಣೆ ಸೃಷ್ಟಿಸುವ ಭೀಕರತೆ ನಿಜವಾದ ಭಯೋತ್ಪಾದನೆ ಎಂಬುದನ್ನು ವ್ಯಕ್ತಪಡಿಸುತ್ತವೆ. ಒಟ್ಟಾರೆ ಆಧುನಿಕೋತ್ತರ ವಸಾಹತುವಿನ ಗ್ರಹಿಕೆಯ ಕ್ರಮಗಳು ಸೃಷ್ಟಿಸಿದ ಸಾಮಾಜಿಕ ಪರಿವರ್ತನೆ ಹೊಸ ಕಾಲಮಾನದ ಸೃಜನಶೀಲ ಗ್ರಹಿಕೆಗೆ ಮತ್ತು ಅಭಿವ್ಯಕ್ತಿ ಮಾಧ್ಯಮಗಳಿಗೆ ಕಾರಣವಾಗಿದೆ ಎಂಬುದು ಸತ್ಯ. ಇದನ್ನು ಒಂದು ಪರಿಣಾಮಕಾರಿ ಜೆನ್ ಕಥೆಯ ಮೂಲಕ ಮುಕ್ತಾಯ ಮಾಡಬಹುದು.

ಕುದುರೆ ಜೋರಾಗಿ ಓಡುತ್ತಿದೆ. ಅದರ ಮೇಲೆ ಒಬ್ಬ ಸವಾರನಿದ್ದಾನೆ. ಅವನನ್ನು ನೋಡಿ ಈ ಮನುಷ್ಯ ಯಾವುದೋ ಒಂದು ಅತಿ ಮುಖ್ಯ ಕೆಲಸಕ್ಕಾಗಿ ಎಲ್ಲಿಗೋ ಹೊರಟಿದ್ದಾನೆಂದು ನಾವು ಭಾವಿಸುತ್ತೇವೆ. ರಸ್ತೆಯ ಬದಿಯಲ್ಲಿದ್ದ ಒಬ್ಬ ಸಾಮಾನ್ಯ ಮನುಷ್ಯ ಕುದುರೆಯ ಸವಾರನನ್ನು ಕುರಿತು ಜೋರಾಗಿ ಕೂಗಿ "ಅಯ್ಯಾ ಎಲ್ಲಿಗೆ ಹೋಗುತ್ತಿದ್ದೀಯಾ ಇಷ್ಟೊಂದು ಅವಸರವಾಗಿ?" ಎಂದು ಕೇಳುತ್ತಾನೆ. ಅದಕ್ಕೆ ಸವಾರ ಹೇಳುತ್ತಾನೆ:

ನನಗೆ ಗೊತ್ತಿಲ್ಲ ಕುದುರೆಯನ್ನು ಕೇಳು!

■

ಎನ್.ಬಿ.ಟಿ.ಯ ಇತ್ತೀಚಿನ ಪ್ರಕಟಣೆಗಳು

ಜನಪ್ರಿಯ ಸಮಾಜ ವಿಜ್ಞಾನ ಮಾಲೆ

ಘನತೆಯೊಂದಿಗೆ ಅಭಿವೃದ್ಧಿ – ಅಮಿತ್ ಭಾದುರಿ,
ಅನು: 'ರಾಹು' ಪು. ೧೩೬, ರೂ. ೪೫

ಉದ್ಯೋಗ ಖಾತರಿ ಕಾಯಿದೆ – ನಿಖಿಲ್ ಡೇ, ಜಾನ್‌ದ್ರೆಝ್
ರೀತಿಕಾ ಖೇರಾ, ಅನು: ಎಸ್. ಸೇತೂರಾವ್ ಪು. ೫೬ ರೂ. ೧೨

ಕೋಮುವಾರು ಸಮಸ್ಯೆ – ಕಾನ್ಪುರ ಗಲಭೆ ಕುರಿತ ವರದಿ
ಅನು: ಈಶ್ವರಚಂದ್ರ ಪು. ೨೩೨ ರೂ. ೬೫

ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ

ಶ್ರೀ ಕನಕದಾಸರು– ಬಸವರಾಜ ನಾಯ್ಕರ್ ಪು. ೧೧೪ ರೂ. ೪೫

ಇಂದಿರಾಗಾಂಧಿ– ಇಂದರ್ ಮಲ್ಹೋತ್ರ
ಅನು: ಶಂಸ ಐತಾಳ, ಪು. ೨೪೦ ರೂ. ೭೫

ಜನಪ್ರಿಯ ವಿಜ್ಞಾನ ಮಾಲೆ

ಮುಂದಾನೊಂದು ಕಾಲದ ಕಥೆಗಳು – ಸಂ. ರಾಜಶೇಖರ ಭೂಸನೂರಮಠ
ಪು. ೧೨೮ ರೂ. ೫೦

ಶಕ್ತಿ – ಎ. ಕೆ. ಭಕ್ಷಿ, ಅನು: ಅಡ್ಯನಡ್ಕ ಕೃಷ್ಣಭಟ್ ಪು. ೯೬ ರೂ. ೬೦

ಪವನ ಶಕ್ತಿ – ಸುಸಿಲ್ ಬಿ. ಅಠವಲೆ ಅನು: ಅಡ್ಯನಡ್ಕ ಕೃಷ್ಣಭಟ್
ಪು. ೭೨ ರೂ. ೫೦

ಅಂತರ ಭಾರತೀಯ ಪುಸ್ತಕ ಮಾಲೆ

ಬೆಳಕು ಚೆಲ್ಲುವ ಹುಡುಗಿ – ಟಿ. ಪದ್ಮನಾಭನ್
ಅನು: ಡಾ. ಅಶೋಕ್ ಕುಮಾರ್ ಪು. ೧೪೬ ರೂ. ೬೫

ಜಾನಪದ ಮಾಲೆ

ಸಿಂಹ ಹಾರುತ್ತಿದ್ದಾಗ – ನಿಕ್ ಗ್ರೀವ್ಸ್
ಅನು: ಕೃಷ್ಣಮೂರ್ತಿ ಚಂದರ್ ಪು. ೧೪೦ ರೂ. ೧೨೦

ಹಳಗನ್ನಡ ಪದ ಸಂಪದ : ಪಿ.ವಿ. ನಾರಾಯಣ

(ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೨೦೦೭)

ಹಳಗನ್ನಡ ಪದ ಸಂಪದ ಡಾ. ಪಿ.ವಿ. ನಾರಾಯಣರವರು ಏಕವ್ಯಕ್ತಿ ಸಾಹಸಿಯಾಗಿ ಸಿದ್ಧಪಡಿಸಿರುವ ವಿಶೇಷ ನಿಘಂಟು. ಇದು ಕನ್ನಡದ ಹಳಗನ್ನಡ ಕಾವ್ಯಗಳಲ್ಲಿ ಕಂಡು ಬರುವ ಪದಗಳನ್ನೇ ಒಳಗೊಂಡು ಸಿದ್ಧವಾಗಿರುವ ಕಾವ್ಯಾಸಕ್ತರ ನಿಘಂಟಾಗಿದೆ. ಕಾವ್ಯಗಳನ್ನೇ ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿರುವ ನಿಘಂಟುಗಳೂ ನಿಘಂಟುಗಳ ಚರಿತ್ರೆಯಲ್ಲಿ ಒಂದು ಪ್ರತ್ಯೇಕ ವಿಭಾಗವಾಗಿ ಬೆಳೆದುಬಂದಿದೆ. ನಿಘಂಟುಗಳಲ್ಲಿ ಏಕಾಕ್ಷರಕೋಶ, ನಾನಾರ್ಥಕೋಶ, ಪಡೆನುಡಿ ಕೋಶ, ಬಹುಬಾಷಾ ಕೋಶ-ಹೀಗೆ ವಿವಿಧ ರೀತಿ ಗಳಿರುವಂತೆ ಹಳಗನ್ನಡ ಕೋಶವೂ ಒಂದು.

ಕನ್ನಡ ಭಾಷೆಯನ್ನು ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ಮುಖ್ಯವಾಗಿ ಮೂರು ವಿಭಾಗಗಳನ್ನಾಗಿ ಮಾಡಿದ್ದು ಈ ಒಂದೊಂದು ಕನ್ನಡವೂ ಬೇರೆ ಬೇರೆಯಾಗಿಯೇ ವ್ಯಕ್ತವಾಗುತ್ತವೆ. ಪದ ಪ್ರತ್ಯಯ ವಾಕ್ಯ ಎಲ್ಲದರಲ್ಲೂ ವ್ಯತ್ಯಾಸಗಳಿವೆ. ಪ್ರಸ್ತುತ ನಿಘಂಟು ಹೆಸರೇ ಸೂಚಿಸುವಂತೆ ಹಳಗನ್ನಡ ಭಾಷೆಗೆ ಸಂಬಂಧಿಸಿದುದಾಗಿದೆ. ೧೦ ರಿಂದ ೧೨ನೇ ಶತಮಾನದ ಅವಧಿಯ ಕನ್ನಡವನ್ನು ಹಳಗನ್ನಡ ಎಂದು ಕರೆದಿದ್ದರೂ ಆ ಅವಧಿಯಲ್ಲಿ ರಚನೆಯಾದ ಕೃತಿಗಳಷ್ಟೇ ಅಲ್ಲದೆ ೧೭ ನೇ ಶತಮಾನದವರೆಗೂ ಕವಿಗಳು ಈ ಭಾಷಾ ಶೈಲಿಯನ್ನು ಬಳಸಿಕೊಂಡು ಕಾವ್ಯಗಳನ್ನು ರಚಿಸಿದ್ದಾರೆ. ಈ ಎಲ್ಲ ಹಳಗನ್ನಡ ಭಾಷಾ ಶೈಲಿಯಲ್ಲಿ ರಚನೆಯಾಗಿರುವ ಗ್ರಂಥಗಳಲ್ಲಿ ಕಂಡು ಬಂದಿರುವ ಕ್ಲಿಷ್ಟಪದಗಳನ್ನೆಲ್ಲ ಈ ನಿಘಂಟು ಒಳಗೊಂಡಿದೆ.

ಕನ್ನಡ ಭಾಷೆಯ ಇತಿಹಾಸದಲ್ಲಿ ಹಳಗನ್ನಡಕ್ಕೇ ಮೀಸಲಾದ ನಿಘಂಟುಗಳೆಂದು ಗುರುತಿಸಬಹುದಾದ ಹತ್ತಾರು ನಿಘಂಟುಗಳಿವೆ. ರನ್ನನ 'ರನ್ನ ಕಂದ' (ಕ್ರಿ.ಶ.೯೯೦)ವೇ ಅಂತಹ ಮೊದಲ ನಿಘಂಟಾಗಿ ನಿಲ್ಲುತ್ತದೆ. ನಂತರ ಕ್ರಿ.ಶ. ೧೪೦೦ರ ಸುಮಾರಿನಲ್ಲಿ 'ಕರ್ನಾಟಕ ಶಬ್ದಸಾರ', 'ಕರ್ನಾಟಕ ನಿಘಂಟು'ಗಳೆಂಬ ಎರಡು ನಿಘಂಟುಗಳು ಕಂಡು ಬಂದರೂ ನಿಘಂಟುಕಾರರು ಯಾರೆಂದು ತಿಳಿದಿಲ್ಲ. ೧೪೫೦ರ ಬೊಮ್ಮರಸನ 'ಚತುರಾಸ್ಯ ನಿಘಂಟು' ೧೫೦೦ರ 'ಲಿಂಗಮಂತ್ರಿಯ' 'ಕಬ್ಬಿಗರ ಕೈಗನ್ನಡಿ,' ೧೫೫೦ರ ವಿರಕ್ತತೋಂಟ ದಾರ್ಯರ 'ಕರ್ನಾಟಕ ಶಬ್ದ ಮಂಜರಿ'ಗಳು ಹಳಗನ್ನಡ ನಿಘಂಟುಗಳಾಗಿ ಕಂಡು ಬಂದಿದ್ದರೂ ಇವುಗಳಲ್ಲಿ ನಡುಗನ್ನಡ ಪದಗಳೂ ಸೇರಿವೆ. ಕ್ರಿ.ಶ. ೧೬೦೦ ರ ಸುಮಾರಿನ ಸೂರ್ಯ ಕವಿಯ 'ಕವಿಕಂಠಾಹಾರ' ವು ನಿಘಂಟೇ ಆಗಿದೆ. ಆಶ್ಚರ್ಯವೆಂದರೆ ಇವುಗಳೆಲ್ಲ ಬಹುಮಟ್ಟಿಗೆ ಪದ್ಯ ಶೈಲಿಯಲ್ಲಿವೆ. ವಾಸ್ತವವಾಗಿ ಪ್ರಾಚೀನ ನಿಘಂಟುಗಳಷ್ಟೇ ಅಲ್ಲದೆ,ವ್ಯಾಕರಣ, ಛಂದಸ್ಸು ಗಳಂತಹ ಶಾಸ್ತ್ರಗ್ರಂಥಗಳೆಲ್ಲ ಪದ್ಯಗಳಲ್ಲೇ ಇರುವುದೊಂದು ವಿಶೇಷವೆ ಆಗಿದೆ. ಸಂಸ್ಕೃತದ 'ಅಮರ ಕೋಶ' ಶ್ಲೋಕಗಳಲ್ಲಿರುವ ನಿಘಂಟಾಗಿದ್ದು ಸಂಸ್ಕೃತ ವ್ಯಾಕರಣ ತರಗತಿಗಳಲ್ಲಿ ಅದನ್ನು ವಿದ್ಯಾರ್ಥಿಗಳಿಂದ ಉರುಹೊಡಸುವುದನ್ನು ನಾವು ನೋಡಬಹುದು.

ಆಧುನಿಕ ಕಾಲದಲ್ಲಿ ಹಳಗನ್ನಡಕ್ಕೆಂದು ಮೀಸಲಾದ ನಿಘಂಟುಗಳೆಂದರೆ ಸ. ಸ. ಮಾಳವಾಡ, ಕ. ವೆಂ. ರಾಜಗೋಪಾಲ ಮತ್ತು ಟಿ. ಕೇಶವ ಭಟ್ಟರು ಸಿದ್ಧಪಡಿಸಿದ್ದ ಕ್ರಿ. ಶ. ೧೯೭೦ರ, ಕಾವ್ಯಶಬ್ದಗಳನ್ನು ಆಧರಿಸಿದ 'ಕಾವ್ಯಮಂಜರಿ' ನಿಘಂಟೇ ಮೊದಲನೆಯದೆಂದು ಹೇಳಬಹುದು. ಇದನ್ನು ಬಿಟ್ಟರೆ ಎನ್. ಬಸವಾರಾಧ್ಯರ 'ಹಳಗನ್ನಡ ನಿಘಂಟು' (೧೯೭೩) ಒಂದೇ ಹಳಗನ್ನಡದ್ದೆಂದು ಹೆಸರಿಸಬಹುದಾದ ನಿಘಂಟಾಗಿದೆ. ಉಳಿದ ಕಿಟ್ಟೆಲ್ ನಿಘಂಟು, ಕನ್ನಡ ಕನ್ನಡ ನಿಘಂಟು, ಸಿರಿಗನ್ನಡ ಅರ್ಥಕೋಶ ಮುಂತಾದವೆಲ್ಲ ಎಲ್ಲ ಕಾಲದ ಪದಗಳನ್ನೂ ಒಳಗೊಂಡ ಸಾಮಾನ್ಯ ನಿಘಂಟುಗಳಾಗಿವೆ. ಹಳಗನ್ನಡ ನಿಘಂಟಿನ ಮುಖ್ಯ ವೈಶಿಷ್ಟ್ಯ ಹಳಗನ್ನಡ ಕಾಲದಲ್ಲಿ ಮಾತ್ರ ಬಳಕೆಯಾಗುತ್ತಿದ್ದ 'ಱ' 'ೞ' ಎಂಬ ವಿಶಿಷ್ಟ ಅಕ್ಷರಗಳಿಂದ ಕೂಡಿದ ಪದಗಳಿರುವುದು. ಮೊದಲಬಾರಿಗೆ ೧೨ ನೇ ಶತಮಾನದ ಕೇಶಿರಾಜ ತನ್ನ 'ಶಬ್ದಮಣಿ ದರ್ಪಣ' ವ್ಯಾಕರಣ ಗ್ರಂಥದಲ್ಲಿ ಆ ವೇಳೆಗಾಗಲೇ ಬಳಕೆ ತಪ್ಪುತ್ತಿದ್ದ ಮತ್ತು ತಪ್ಪುತಪ್ಪಾಗಿ ಬಳಕೆಯಾಗುತ್ತಿದ್ದ ಈ ಅಕ್ಷರಗಳಿಂದ ಕೂಡಿದ ಪದಗಳನ್ನೆಲ್ಲ ಪಟ್ಟಿಮಾಡಿ ಒಂದೆಡೆ ಕೊಟ್ಟಿದ್ದಾನೆ. ನಂತರ ಕನ್ನಡ ಸಾಹಿತ್ಯ ಪರಿಷತ್ತು ಈ ಅಕ್ಷರಗಳಿಂದ ಕೂಡಿದ ಪದಗಳನ್ನೆಲ್ಲ ಸೇರಿಸಿ 'ಱ ೞ ನಿಘಂಟು' ಎಂಬ ಒಂದು ಪ್ರತ್ಯೇಕ ನಿಘಂಟನ್ನೇ ಪ್ರಕಟಿಸಿದೆ.

ಈ ಎಲ್ಲ ಪ್ರಯತ್ನಗಳ ನಂತರ ಬಂದಿರುವ ಹಳಗನ್ನಡ ನಿಘಂಟಾಗಿ ಡಾ. ಪಿ. ವಿ. ನಾರಾಯಣರ 'ಹಳಗನ್ನಡ ಪದಸಂಪದ' ನಿಲ್ಲುತ್ತದೆ. ಹಳಗನ್ನಡ ಕಾವ್ಯಾಭ್ಯಾಸಿಗಳಿಗೆ ಎನ್. ಬಸವಾರಾಧ್ಯರ ನಿಘಂಟನ್ನು ಹೊರತು ಪಡಿಸಿದರೆ ಸದ್ಯಕ್ಕೆ ನೆರವಾಗುವ ಗ್ರಂಥವೆಂದರೆ ಇದೇ. ಇದು ಓದುಗರಿಗೆ ಸರಳ, ಸುಲಭ ಮತ್ತು ಸಂಗ್ರಾಹ್ಯವಾಗಿದೆ. ನಾಮ, ಕ್ರಿಯಾ, ಮುಂತಾದ ಪದ ಸೂಚನೆಯಾಗಲಿ ದೇಶ್ಯ, ಅನ್ಯದೇಶ್ಯ ಮುಂತಾದ ಪದವರ್ಗವಾಗಲಿ ಇಲ್ಲದೆ ಮುಖ್ಯವಾಗಿ ಚಂಪೂ ಕಾವ್ಯಗಳಲ್ಲಿ ಬಳಕೆಯಾಗಿರುವ ಪದಗಳನ್ನೆಲ್ಲ ಅಕಾರಾದಿಯಾಗಿ ಪಟ್ಟಿಮಾಡಿ ಅರ್ಥ ಹೇಳಿರುವುದರಿಂದ ಪದಗಳನ್ನು ಹುಡುಕುವುದಕ್ಕೆ ಬಹಳ ಸುಲಭವಾಗಿದೆ. ಹಾಗೆಯೇ ಪ್ರತಿಯೊಂದು ಪದಗಳೂ ಸ್ವತಂತ್ರ ಉಲ್ಲೇಖಗಳಾಗಿ ದಪ್ಪ ಅಕ್ಷರಗಳಲ್ಲಿ ಅಚ್ಚಾಗಿವೆ. ಮೂಲಪದ-ಸಾಧಿತಪದ -ಸಮಾಸ ಪದಗಳೆಂದು ವಿಭಾಗಿಸಿಲ್ಲ. ಮೂಲ ಪದದ ಉಲ್ಲೇಖದಲ್ಲೇ ಅವುಗಳನ್ನು ನೀಡದೆ ಸ್ವತಂತ್ರ ಪದಗಳನ್ನಾಗಿಯೇ ಕೊಡಲಾಗಿದೆ. ಇದು ಓದುಗರಿಗೆ ಬಹಳ ಅನುಕೂಲವಾಗಿದೆ. ಇಂತಹ ಸುಮಾರು ಮೂವತ್ತೈದು ಸಾವಿರ ಪದಗಳಿಗೆ ಈ ನಿಘಂಟಿನಲ್ಲಿ ಅರ್ಥಗಳಿವೆ.

ಹಳಗನ್ನಡ ಕಾಲದ ಸಾಹಿತ್ಯಕೃತಿಗಳೆಂದರೆ ಚಂಪೂ ಕಾವ್ಯ ಗ್ರಂಥಗಳಷ್ಟೇ ಆಗಿದ್ದರೂ ಒಂದೆರಡು ಗದ್ಯ ಕೃತಿಗಳೂ ಇವೆ. ಇವೆಲ್ಲದರ ಪದಗಳಿಗೂ ಇಲ್ಲಿ ಅರ್ಥಗಳಿವೆ. ಆಯಾ ಗ್ರಂಥಗಳ ಸಂಪಾದಕರು(?) ಪ್ರಶ್ನಾರ್ಥಕ ಚಿಹ್ನೆ ಬಳಸಿರುವ ಪದಗಳಿಗೆ ಇಲ್ಲಿಯೂ ಅರ್ಥ ಲಭಿಸುವುದಿಲ್ಲ. ಬದಲಿಗೆ ಅಂತಹ ಪದಗಳನ್ನು ಅನುಬಂಧದಲ್ಲಿ ನೀಡಿದ್ದು, 'ಅರ್ಥ ಸಂದಿಗ್ಧತೆಯ ಶಬ್ದ'ಗಳು ಎಂದು ಪಟ್ಟಿಮಾಡಿದೆ. ಇದಕ್ಕೆ ಪ್ರಸ್ತುತ ನಿಘಂಟುಕಾರರು ಕೊಡುವ ಕಾರಣ 'ಇವುಗಳಿಗೆ ಅರ್ಥವೇ ಸ್ಪಷ್ಟವಿಲ್ಲದಿರುವಾಗ ಶಬ್ದಗಳೆಂದು ಪರಿಗಣಿಸಲಾಗುವುದಿಲ್ಲ' ಎಂದು. ಹೀಗಾಗಿ ಆಯಾ ಸಂಪಾದಕರು ಮತ್ತು ವಿವಿಧ ನಿಘಂಟುಗಳು ಹೇಳಿರುವ ಅರ್ಥಗಳನ್ನು ಮಾತ್ರ ಇಲ್ಲಿ ಒಂದೆಡೆ ಸಂಗ್ರಹಿಸಲಾಗಿದೆಯೇ ಹೊರತು ಹೊಸ ಅರ್ಥಗಳನ್ನಾಗಲಿ ಅರ್ಥ ಬದಲಾವಣೆಗಳನ್ನಾಗಲಿ ನಿಘಂಟುಕಾರರು ಮಾಡಹೋಗಿಲ್ಲ.

ಹಳಗನ್ನಡ ಎಂಬ ಭಾಷಾವರ್ಗವನ್ನೂ ಪ್ರಸ್ತುತ ನಿಘಂಟುಕಾರರು ಸಾಹಿತ್ಯ ಕೃತಿಗಳ ಆಧಾರದ ಮೇಲೆ, ಸಾಹಿತ್ಯ ಚರಿತ್ರಕಾರರು ಮಾಡಿರುವ ವಿಭಾಗದ ಅರ್ಥದಲ್ಲಿ ಸ್ವೀಕರಿಸಿರುವುದರಿಂದ ಇಲ್ಲಿ ಶಾಸನಗಳು ಸೇರ್ಪಡೆಯಾಗುವುದಿಲ್ಲ. ವಾಸ್ತವವಾಗಿ 'ಹಳಗನ್ನಡ ಭಾಷೆ' ಎಂಬ ವರ್ಗೀಕರಣ ಆ ಕಾಲದ ಶಾಸನ ಭಾಷೆಯನ್ನೂ ಒಳಗೊಂಡಿರುತ್ತದೆ. ಕಾವ್ಯಗಳಲ್ಲಿ ಬಳಕೆಯಾಗಿದ್ದ ಎಷ್ಟೋ ಪದಗಳು ಶಾಸನಗಳಲ್ಲಿ ಬಳಕೆಯಾಗಿವೆ. ಆದರೆ ಪಿ. ವಿ. ನಾರಾಯಣರವರು ಈ ನಿಘಂಟು, ಹಳಗನ್ನಡ ಕಾವ್ಯಾಭ್ಯಾಸಿಗಳಿಗೆ ಅದರಲ್ಲೂ ಸಾಮಾನ್ಯ ಓದುವ ವರ್ಗಕ್ಕೆ ಸಹಾಯಕವಾಗಲೆಂದು ಮಾಡಿದ ಪ್ರಯತ್ನವೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಶಾಸನಗಳ ಪದಗಳನ್ನು ಇಲ್ಲಿ ಸೇರಿಸಿಲ್ಲವೆಂದೂ ಖಚಿತಪಡಿಸಿರುವುದರಿಂದ ಶಾಸನ ಪದಗಳನ್ನು ಇಲ್ಲಿ ನಿರೀಕ್ಷಿಸಲಾಗುವುದಿಲ್ಲ.

ಹೀಗೆ ತನ್ನದೇ ಆದ ಮಿತಿಯಲ್ಲಿ ಹಳಗನ್ನಡ ಕಾವ್ಯವನ್ನು ಓದುವ ಸಾಮಾನ್ಯ ಅಭ್ಯಾಸಿಗೆ ಸುಲಭವಾಗಿ ಕ್ಲಿಷ್ಟಪದಗಳಿಗೆ ತಕ್ಷಣ ಅರ್ಥದೊರಕುವಂತೆ ಸರಳೀಕರಿಸಿ ಮಾಡಿರುವುದರಿಂದ ಇದು ಅತ್ಯಂತ ಉಪಯುಕ್ತವಾಗಿದೆ. ಇಂತಹ ಉಪಯುಕ್ತ ನಿಘಂಟನ್ನು ನೀಡಿ ಹಳಗನ್ನಡ ಕಾವ್ಯಾಭ್ಯಾಸವನ್ನು ಸುಲಭ ಮಾಡಿರುವ ಪಿ. ವಿ. ನಾರಾಯಣರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಈ ಪುಸ್ತಕವನ್ನು ಅಚ್ಚು ಕಟ್ಟಾಗಿ ಮುದ್ರಿಸಿ, ಪ್ರಕಟಿಸಿ ಉಪಕರಿಸಿದೆ, ಚಂದ್ರಶೇಖರ ಪಾಟೀಲರ ಅಧ್ಯಕ್ಷಾವಧಿಯಲ್ಲಿ ಬಂದ ಅನೇಕ ಉಪಯುಕ್ತ ಪುಸ್ತಕಗಳಲ್ಲಿ ಇದೂ ಒಂದಾಗಿದೆ. ಆದರೆ ಪುಸ್ತಕದ ಬೆಲೆ ಸಾಮಾನ್ಯ ಓದುಗರ ಕೈಗೆಟಕದಂತಿರುವುದು (ರೂ. ೨೦೦-೦೦) ಸ್ವಲ್ಪ ದುಬಾರಿ ಎನಿಸಿದೆ. ಈ ಪುಸ್ತಕ ಸರ್ಕಾರದ ಅನುದಾನದಿಂದ ಪ್ರಕಟವಾಗಿರುವುದರಿಂದ ಪರಿಷತ್ತಿಗೆ ಯಾವುದೇ ಖರ್ಚು ಇಲ್ಲದಿರುವುದರಿಂದ ಸಾಂಕೇತಿಕ ಸುಲಭ ಬೆಲೆಯಲ್ಲಿ ಅಥವಾ ಮುದ್ರಣದ ವಾಸ್ತವ ಬೆಲೆಯಲ್ಲಿ ಕೊಡಲು ಏನೂ ಅಡ್ಡಿಯಿರಲಿಲ್ಲ. ಅನುದಾನಿತ ಪುಸ್ತಕಗಳಿಗೂ ಹೀಗೆ ವ್ಯಾಪಾರಿ ಧೋರಣೆಯ ಬೆಲೆಗಳನ್ನೇ ನಿಗದಿಮಾಡುವುದಾದರೆ ಅನುದಾನದ ಪ್ರಯೋಜನವಾದರು ಏನು ಎಂಬ ಪ್ರಶ್ನೆ ಮೂಡುತ್ತದೆ. ಪರಿಷತ್ತು ಈ ಬಗ್ಗೆ ಯೋಚಿಸಿದರೆ ಓದುಗರಿಗೆ ಅನುಕೂಲವಾಗುತ್ತದೆ.

• ನಾ. ಗೀತಾಚಾರ್ಯ

ಖಾಲಿಮನೆ : ರವಿ ಉಪಾಧ್ಯ

(ಕಾಲ ಪ್ರಕಾಶನ, ಬೆಂಗಳೂರು; ೨೦೦೮)

ಹಿರಿಯ ಕವಿ ರವಿ ಉಪಾಧ್ಯ ಖಂಡಿತ ರವಿ ಕಾಣದ್ದನ್ನು ಕವಿಯಾಗಿ ಕಂಡಿದ್ದಾರೆ. ಕಳೆದ ದಶಕಗಳಿಂದ ಕಾವ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಉಪಾಧ್ಯ ಅವರು ಕಾವ್ಯ ಕ್ಷೇತ್ರಕ್ಕೆ ಅಕ್ಷರ ಸಂಪತ್ತಿನಿಂದ ತುಂಬಿದ 'ಖಾಲಿ ಮನೆ'ಯನ್ನು ತುಂಬಿ ಕೊಟ್ಟಿದ್ದಾರೆ. ಕವಿತೆಗಳನ್ನು ಅಭ್ಯಾಸ ಮಾಡುವಾಗ ಒಮ್ಮೊಮ್ಮೆ ಕವಿಯ ಬದುಕಿನೆಡೆಗೆ ನೋಡಬಹುದಾದ ಅನಿವಾರ್ಯತೆ. ಬದುಕಿನ ಎಲ್ಲಾ ಘಟನೆಗಳನ್ನು ರಸವತ್ತಾಗಿ ನೇಯುವ ಕಲೆಗಾರಿಕೆ ಕೆಲವರಿಗೆ ಸಿದ್ಧಿಸುತ್ತದೆ.

ರವಿ ಉಪಾಧ್ಯ ಅವರ. ಬಿಡದ 'ಖಾಲಿ ಮನೆ'ಯ ಮಾಯೆಯ ಅವರ ಆಪ್ತ ಮಾತುಗಳು ಕವಿಗಿರುವ ಅತ್ಮವಿಶ್ವಾಸ, ಸಕಾರಾತ್ಮಕ ಧೋರಣೆಗೆ ಸಾಕ್ಷಿಯಾಗಿವೆ. ಆದ್ದರಿಂದ ಇಲ್ಲಿ ಕವಿ-ಕವಿತೆಗಳು ಪ್ರಧಾನವೆನಿಸುತ್ತವೆ.

ಭಾವ ಜೀವಿಯಾಗಿರುವ ಕವಿ ತಮ್ಮ ಬದುಕಿನ ಘಟನೆಗಳನ್ನು ನಿರ್ಭಾವುಕರಾಗಿ ನೋಡುವ ಪ್ರಯತ್ನ ಮಾಡುತ್ತಾರೆ. ಅವರೊಳಗಿನ ಬೇಗುದಿ, ತಲ್ಲಣಗಳಿಗೆ ಜೀವ ತುಂಬುವಾಗ ಕಾವ್ಯಕ್ಕಿರುವ ಸೀಮಾರೇಖೆ ದಾಟುವುದಿಲ್ಲ. ಬಡತನ ದೈಹಿಕ ನೋವು, ಬದುಕಿನಲ್ಲಿ ಬಂದು ಹೋದ, ಹಾಗೆ ಜೊತೆಗಿರುವ ಎಲ್ಲರೊಂದಿಗಿನ ಬಂಧನಗಳನ್ನು ನವಿರಾಗಿ ತಮ್ಮ ಕವಿತೆಗಳಲ್ಲಿ ಪ್ರಸ್ತಾಪಿಸುತ್ತಾರೆ.

ಸಂತೆಯೊಳಗಿನ ಗದ್ದಲವನ್ನು, ಮನದೊಳಗಿನ ಮೌನವನ್ನು, ಗತಕಾಲದ ಗತಿಯನ್ನು ವರ್ತಮಾನದ ಪರದಿಗಳನ್ನು ಕಾವ್ಯದಲ್ಲಿ ದಾಖಲಿಸುವ ಗತ್ತಿನೊಂದಿಗೆ ಶಬ್ದಗಳೊಂದಿಗೆ ಆಡವಾಡುವ ಗಮ್ಮತ್ತಿದೆ. ಇಲ್ಲಿನ ನಾಲ್ವತ್ನಾಲ್ಕು ಪದ್ಯಗಳಲ್ಲಿ ಮೈ ತುಂಬಾ ಕಣ್ಣಿಟ್ಟು ಕೊಂಡು ತಾವು ಕಂಡದ್ದನ್ನು ವಿಶ್ವಾಸದಿಂದ ವಿವರಿಸುತ್ತಾರೆ.

ಅವರ ಖಾಲಿಮನೆಯ ಈ ಕೆಳಗಿನ ಸಾಲುಗಳು

.... ಈ ದುಮ್ಮ ಜಲಿನ ಕೆಂಪು ಅಂಚುಳ್ಳ
ಆಜುಬಾಜುವಿನ ಕಿರೀಟವಂಚಿತ
ಖಿಡೆಪಾಡದ ಲಂಗೋಟಿ ಪಟ್ಟಿ ನಾಲ್ಕು ಸಂಪನ
ಖೊಲಿರಹಿತ ಮನೆ
ಯಾವ ಮುನ್ಸೂಚನೆ ಇಲ್ಲಿದೆ
ಇದ್ದಕ್ಕಿದ್ದಂತೆ ಮಹಾ ಮೌನಧಾರಣೆಯಾಗಿ ಬಿಡಬೇಕೆ ?

ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಸಾಗುವ ಕವಿ ದೇಸಿಯ ಪದಪುಂಜಗಳನ್ನು ಪೋಣಿಸುತ್ತ ಬೆಚ್ಚಗಿನ ಕೌದಿ ಹೊಲಿಯುತ್ತಾರೆ. ತಮ್ಮನ್ನು ಆಡಿಸಿ ಬೆಳೆಸಿದವರ, ಬೀಳಿಸಿ ಮೋಜು ನೋಡಿದವರ, ತಮ್ಮನ್ನು ಕಾಡಿದ ಭಾವನೆಗಳ ಆತ್ಮ ಕಥನ ರೂಪದಲ್ಲಿ ವಿವರಿಸುತ್ತಾರೆ.

"ಸೂರ್ಯ"ನೊಬ್ಬನನ್ನು ಪೋಷಿಸಿ ಬೆಳೆಸಿದ್ದು, ಕವಿಯನ್ನಾಗಿ ಮಾರ್ಪಡಿಸಿದ್ದು

ಸತ್ಯ - ಸುಳ್ಳಿನ ನಡುವೆ ಸೂತ್ರ ಏನು ?
ಇದೇನು ಬಿಡಿಸಲಾಗದ ಒಗಟೇನು ?

ಎಂದೆಸೆಯುವ ಖಾಲಿ ಮನೆಯ ಪ್ರಶ್ನೆ ಎಲ್ಲದಕ್ಕೂ ಉತ್ತರ ನೀಡುತ್ತದೆ.

ಮೌನವನ್ನು ಯಾರಿಂದಲೂ ಅನುವಾದಿಸಲಾಗದು
ಅದೇನು ಸಮವಸರಣದ ಮೌನ "ಓಂ" ಅಲ್ಲವಲ್ಲ
ಮೌನವೆಂದರೆ ಯಾರದೋ ತೋಟದ ದಯಾಳು ಮರದಡಿಯ
ದೀಪ್ತ ಚಿತ್ರಣ ಕನಸು - ಮನಸುಗಳ ಮರೆತ ಪ್ರಭಾವ -ವತ್ತ.

ಎಂದು ವಿವರಿಸುವಾಗ ಕವಿಗಿರುವ ಧ್ಯಾನಸ್ಥ ಸ್ಥಿತಿಯೊಂದಿಗಿನ ಒಳಗಿನ ಎಚ್ಚರವೂ ಗೋಚರವಾಗುತ್ತದೆ. ಇಂತಹ ಅಪರೂಪದ ಪದಪುಂಜಗಳಿಂದ ಓದುಗರನ್ನು ಆಕರ್ಷಿಸುತ್ತ,

ಉಳಿದ ಗಂಭೀರ ಕೊಂಚ ಸುದೀರ್ಘ ಕವಿತೆಗಳತ್ತ ನಮ್ಮನ್ನು ಎಳೆದೊಯ್ಯುತ್ತಾರೆ. ಮೌನವ ತಿರುಳನ್ನು ತಿಳಿಸುತ್ತ, ಮಾತಿನ ಮತಿಯನ್ನು

ಮಾತು-ಕತೆ
ಕವಿತೆಯಲ್ಲ
ಮಾತು -ಸೀರೆ
ಧಡಿಯಲ್ಲ
ಮಾತು ಪೈಜಣ
ನತ್ತು ಅಲ್ಲ, ಮಾತು ಕಟಕಿ
ಕಿಟಕಿಯಲ್ಲ (ಮಾತು)
ಎಂದು ಕಟಕಿಯಾಡುತ್ತಾರೆ.

ಕಾಗೆ ಮತ್ತು ಕೋಗಿಲೆಗಳ ಸಂವಾದದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು, ತರತಮ ಪದ್ಧತಿಯನ್ನು ಕಟ್ಟಿಕೊಡುತ್ತಾರೆ. ಕಾಗೆ ಕೋಗಿಲೆಗಳ ವಾದ ವಿವಾದದಲ್ಲಿ ಅನೇಕ ಸತ್ಯಗಳನ್ನು ಸಾಹಿತ್ಯ ಕ್ಷೇತ್ರದ ಅರ್ಧ ಸತ್ಯಗಳನ್ನು ಪ್ರತಿಪಾದಿಸುತ್ತಾ, ಬೇಂದ್ರೆ, ಕುವೆಂಪು ಹೆಸರು ಬಳಸಿಕೊಂಡು ತಮ್ಮಲ್ಲಿಯೇ ಗೊಂದಲ ಉಂಟಾಗಿ ಯಾರು ಕಾಗೆ, ಯಾರು ಕೋಗಿಲೆ ಎಂದು ನಿರ್ದಿಷ್ಟ ವ್ಯಾಖ್ಯಾನ ಕೊಡಲಾಗದೆ ಚಡಪಡಿಸಿರುವುದು ಗೋಚರವಾಗುತ್ತದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಪ್ರತಿಪಾದಿಸುವಾಗ ಗೊಂದಲ ಉಂಟಾಗುವುದು ಸಹಜವಾದರೂ ನಮ್ಮಲ್ಲಿ ಮೊದಲ ಸ್ಪಷ್ಟತೆ ಬೇಕಾಗುತ್ತದೆ. ಹತ್ತು ಹಲವು ಉತ್ತಮ ಕವಿತೆಗಳೊಂದಿಗೆ ದಾಖಲಾಗಲಿ ಎಂಬ ಕಾರಣಕ್ಕೆ ಪ್ರಕಟಗೊಂಡಿರುವ, ವಾಚ್ಯ ವಿವರಣೆ ಕಾವ್ಯದ ಗಡಿ ಮೀರಿರುವ ಕೆಲವು ಕವಿತೆಗಳು ಓದುಗರಿಗೆ ಕಿರಿ ಕಿರಿ ಎನಿಸುತ್ತವೆ.

ಚಿಂತನೆಗೆ ಹಚ್ಚುವ ಕವಿತೆಗಳು ಬೌದ್ಧಿಕ ಕಸರತ್ತಿಗೆ ಕಾರಣವಾದರೆ, ಸಂಕಲನದ ವಿನ್ಯಾಸ ಭೌತಿಕ ಆಕರ್ಷಣೆ ಹೆಚ್ಚಿಸಿಕೊಂಡಿದೆ. ಬೆನ್ನುಡಿಯಾಗಿ ದೊಡ್ಡವರ ಶ್ರೀರಕ್ಷೆಯ ಅಗತ್ಯವಿತ್ತೇ? ಎಂಬ ಪ್ರಶ್ನೆಯೊಂದಿಗೆ ಡಾ. ಯು ಆರ್. ಅನಂತ ಮೂರ್ತಿಯವರ ಬೆನ್ನುಡಿ ಓದುಗರಿಗೆ ದಾರಿದೀಪವಾಗಲಿದೆ.

• ಸಿದ್ದು ಯಾಪಲಪರವಿ

ಸಮಕ್ಷ : ಲಿಂಗಣ್ಣ ಗೋನಾಲ

(ಶರಣು ಪ್ರಕಾಶನ, ಗುಲಬರ್ಗಾ: ೨೦೦೭)

ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಲಿಂಗಣ್ಣ ಗೋನಾಲ ಅವರ, ಬೇರೆ ಬೇರೆ ಸಾಹಿತ್ಯ ಪತ್ರಿಕೆಗಳಲ್ಲಿ ಅಭಿನಂದನಾ ಗ್ರಂಥಗಳಲ್ಲಿ, ಹೈದರಾಬಾದ್ ಆಕಾಶವಾಣಿಯಲ್ಲಿ ಪ್ರಕಟವಾದ, ಪ್ರಸಾರವಾದ, ಲೇಖನಗಳು ಭಾಷಣಗಳ ಒಟ್ಟು ಗ್ರಾಂಥಿಕ ರೂಪ ಇದು. ಇದರಲ್ಲಿ ೧೪ ಲೇಖನಗಳಿವೆ. ತಿರುಮಲೇಶರ ಕತೆಗಳು, ಕುವೆಂಪು ಅವರ ಕಾವ್ಯ ಮಾಸ್ತಿಯವರ ಸಣ್ಣ ಕತೆಗಳು, ಒಡಲಾಳ - ಇವು ಈಗಾಗಲೇ ಬಹು ಚರ್ಚಿತವಾದವು.

ಇವನ್ನು ಬಿಟ್ಟರೆ ಉಳಿದೆಲ್ಲಾ ಹೊಸ ವಿಷಯಗಳು. ನಾಗಾರ್ಜುನ ಎಂಬ ಹೆಸರನ್ನು ಅಲ್ಲಮ ಪ್ರಭು ಕುರಿತ ಸಂಕಿರಣಗಳಲ್ಲಿ ಬಹುವಾಗಿ ಕೇಳಿದ್ದ ನನಗೆ, ಕುತೂಹಲದಿಂದ ಓದಿದಾಗ ಆತ ಬೌದ್ಧ, ನಮ್ಮ ಅಲ್ಲಮನನ್ನು ಹೋಲುತ್ತಾನೆ ಎಂಬಷ್ಟು ತಿಳಿದಿದ್ದ ನನಗೆ ತಾನು ಗಳಿಸಿದ ಅದ್ಭುತ ಶಕ್ತಿಯಿಂದ ಅದೃಶ್ಯವಾಗಿ ರಾಜನ ಹೆಂಡತಿಯರೊಡನೆ ಸರಸವಾಡುತ್ತಿದ್ದ, ಅನಂತರ ಸನ್ಯಾಸಿಯಾದ, ಗ್ರಂಥಗಳನ್ನು ಬರೆದ ಎಂಬ ವಿವರ ಇಲ್ಲಿ ದೊರೆಯಿತು. ಶೇಕ್ ಶರೀಫ್ ಎಂಬ ಸೂಫಿ ಸಂತನ ಕುರಿತ ಲೇಖನವೂ ಅಷ್ಟೇ. ಈ ಎರಡೂ ಲೇಖನಗಳು ತಮ್ಮ ಪಿ.ಹೆಚ್.ಡಿ ಪ್ರಬಂಧವಾದ "ಡಿ. ಆರ್. ನಾಗರಾಜರ ವಿಮರ್ಶೆ ಕುರಿತ ಅಧ್ಯಯನ"ದಿಂದ ತೆಗೆದ ಪುಟಗಳೆಂದು ಲೇಖಕರೇ ಹೇಳಿದ್ದಾರೆ. ಇವೆರಡು ಬಹು ಉಪಯುಕ್ತ ಲೇಖನಗಳು. ದಲಿತ ಕವಿಗಳಲ್ಲಿ ಇತ್ತೀಚಿನ ಗಟ್ಟಿಧ್ವನಿ ಸತ್ಯಾನಂದ ಪಾತ್ರೋಟ ಅವರದು. ಇವರ ಸಮಗ್ರ ಸಾಹಿತ್ಯ ಕುರಿತ ವಿಚಾರ ಸಂಕಿರಣ ವೊಂದರಲ್ಲಿ ಮಂಡಿತವಾದ ಪ್ರಬಂಧಗಳ ಪುಸ್ತಕ ರೂಪ "ಹುಸಿ ಇಲ್ಲದ ಗೂಡಿನೊಳಗೆ" ಎಂಬ ಅಭಿನಂದನಾ ಗ್ರಂಥದ ವಿಮರ್ಶಾ ಲೇಖನ ಇಲ್ಲಿದೆ. ಸೋಮಶೇಖರ ಇಮ್ರಾಪೂರ ಅವರ ಅಂಕಣ ಬರಹಗಳನ್ನು ಕುರಿತ ಒಂದು ಲೇಖನವಿದೆ. ಎಂ.ಪಿ. ಪ್ರಕಾಶ ಅವರ ಪ್ರವಾಸ ಕಥನ "ಕಳಿಂಗ ಸೂರ್ಯ ಮತ್ತು ಇತರ ಲೇಖನಗಳು", ಸಿದ್ಧರಾಮ ಹೊನ್ಕಲ್ ಅವರ "ಪಂಚ ನದಿಗಳ ನಾಡಿನಲ್ಲಿ", "ಕನ್ಯಾಕುಮಾರಿಯಿಂದ ಹಿಮಾಲಯದೆಡೆಗೆ", "ಕಲಬುರ್ಗಿಯಿಂದ ಕಠಮಂಡುವಿನವರೆಗೆ", ರಾಜಶೇಖರ ಹತಗುಂದಿಯವರ "ಬುದ್ಧನ ನಾಡಿನಲ್ಲಿ" ಚೆನ್ನಣ್ಣ ವಾಲಿಕಾರ ಅವರ "ಮಹಾರಾಷ್ಟ್ರ ರಾಜ್ಯದ ತುಂಬ ಹರಿಯುತ್ತಿರುವ ವೇಶ್ಯಾ ಸೋದರಿಯರ ಕಣ್ಣೀರು ಕಡಲಿನ ಕೋಗಿಲೆಗಳು". ಈ ಆರು ಪ್ರವಾಸ ಪ್ರಬಂಧಗಳನ್ನು ಕುರಿತ ಪರಿಚಯಾತ್ಮಕ ಲೇಖನಗಳು ಇಲ್ಲಿವೆ. ಸರಜೂ ಕಾಟ್ಕರ್ ಅನುವಾದಿಸಿರುವ ಮರಾಠಿ ದಲಿತ ಕಾವ್ಯ ಕುರಿತಾದ ವಿಮರ್ಶೆ, ಚೆನ್ನಣ್ಣ ವಾಲಿಕಾರ ಅವರ 'ಬಂಡೆದ್ದ ದಲಿತರ ಬೀದಿ ಹಾಡುಗಳು' ಕವನ ಸಂಕಲನ ಕುರಿತ ವಿಮರ್ಶೆಗಳೂ ಇವೆ.

ಪ್ರಾಯೋಗಿಕ ವಿಮರ್ಶೆಗೆ ಅಳವಟ್ಟಿರುವ ಡಾ. ಸಿದ್ಧಲಿಂಗಯ್ಯ ಅವರ 'ಕತ್ತೆ ಮತ್ತು ಧರ್ಮ', ಬೇಂದ್ರೆಯವರ 'ಪುಟ್ಟ ವಿಧವೆ' ಮತ್ತು ಕನಕದಾಸರ ಒಂದು ಕವಿತೆ-ಇವು ಆಳವಾದ ವಿಶ್ಲೇಷಣೆ ಮತ್ತು ತೌಲನಿಕ ಅಧ್ಯಯನದ ಕೊರತೆಯಿಂದ ಕೂಡಿದ್ದು ಇನ್ನೂ ಹೆಚ್ಚಿನ ಗಾಂಭೀರ್ಯವನ್ನು ಅಪೇಕ್ಷಿಸುತ್ತಿವೆ. ನಾಗಾರ್ಜುನನ ಕವಿತೆಯ ಅನುವಾದದ ಈ ಸಾಲು :

ಕಳಬೇಡ
ಕೊಲಬೇಡ
ಹಾದರಬೇಡ
ಹುಸಿಯ ನುಡಿಯಲು ಬೇಡ
ಹೆಂಡದ ಹಂಗುಬೇಡ
ಅಪರಾತ್ರಿಯಲ್ಲಿ ಊಟಬೇಡ
ಎತ್ತರದ ಗಾಡಿ ಬೇಡ.... ಬಸವಣ್ಣನನ್ನು ನೆನಪಿಸಿತು.

• ಎಸ್. ವಿ. ಪ್ರಭಾವತಿ

ನೀರಗಂಧ : ಜಿ. ವಿ. ಆನಂದಮೂರ್ತಿ

(ಬೋಧಿಶ್ರೀ ಪ್ರಕಾಶನ, ತುಮಕೂರು : ೨೦೦೭)

ಬಿಸಿಲಲ್ಲಿ ಕೆಲಸ ಮಾಡುತ್ತಿರುವ ರೈತ ಮರದ ನೆರಳಿಗೆ ಬಂದು ತುಸುಹೊತ್ತು ವಿಶ್ರಮಿಸಿಕೊಳ್ಳು ಹಾಗೆ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಡಾ. ಜಿ.ವಿ. ಆನಂದಮೂರ್ತಿ ಬಿಡುವು ಸಿಕ್ಕಾಗೆಲ್ಲ ಕಾವ್ಯರಚನೆಗೆ ಕೈಯಿಕ್ಕುವುದುಂಟು ಎಂಬ ಅರ್ಥ ಬರುವ ಮಾತನ್ನು 'ನೀರಗಂಧ'ದ ವಿಶ್ಲೇಷಣಾ ಮಾತುಗಳಲ್ಲಿ ವಿಮರ್ಶಕ ಎಚ್. ಎಸ್. ರಾಘವೇಂದ್ರ ರಾವ್ ಹೇಳುತ್ತಾರೆ. ಈ ಸಂಕಲನ ಓದಿದರೆ ಅವರ ಮಾತಿಗೆ ಪುಷ್ಟಿ ಸಿಗುತ್ತದೆ.

"ನವಣೆ ಹೊಲದಲ್ಲಿ
ಕವಣೆ ಬೀಸುವ ಸೀಳುಗಾಳಿಗೆ
ಕೈವೊಡ್ಡಿ ಕೇಳಿದೆ
ಜಲದ ನೆರಿಗೆಯುಟ್ಟು
ಬೆಳದಿಂಗಳ ರವಿಕೆ ತೊಟ್ಟು
ಈಜಿ ಬರುವ
ಗಂಗಮ್ಮ ತಾಯಿ
ಹರಿದು ಹೋದಳು ಎತ್ತ" (ನಕ್ಷತ್ರ ಹೂ)

ಎಂಬ ಕವಿತೆಯು ಜಲಮೂಲವನ್ನು ಅರಸುವ ಈ ಕವಿಯ ಆಶಯ ಕವಿತೆಯಾಗಿ ಸಂಕಲನಮುದ್ದಕ್ಕೆ ಅಂತರ್ವಾಹಿನಿಯಾಗಿ ಹರಿಯುವುದನ್ನು ಗುರುತಿಸಬಹುದು. ಅವರ ರೂಪಕಗಳು, ಪ್ರತಿಮೆಗಳು ಗಾಢ ವಿಷಾದದ ಅಚ್ಚಿನಲ್ಲಿ ಪಡಿ ಮೂಡಿಸುವುದು ನಾಗರಿಕತೆಯ ಕೃಷಿಕೇಂದ್ರಿತ ಸಮಾಜದ ಮೇಲೆ ಮಾಡುವ ಘಾತದ ಹಿಂಸ್ರಕ ಮುದ್ರೆಗಳನ್ನು. ಪ್ರಕೃತಿಯೊಂದಿಗಿನ ನಿತ್ಯ ಹೋರಾಟವೇ ಜೀವನ ಬವಣೆಯಾಗಿರುವ ಸಮುದಾಯದ ಬಗ್ಗೆ ಅಂತಃಕರಣ ಪೂರಿತವಾಗಿ ಬರೆದಾಗ ಸಿಕ್ಕುವ ಯಶಸ್ಸು ಅವರಿಗೆ ಅಂತಹ ಭಾವನೆಗಳನ್ನು ಆರೋಪಿಸಿಕೊಂಡಾಗ ಸಿಗದಿರುವುದು ಬಹುಶಃ ಈ ನೆಲಮೂಲ ಕಾರಣದಿಂದಾಗಿ ಅನಿಸುತ್ತದೆ. ಉದಾ:

ತೈಲ ಬಾವಿಯ ಸುತ್ತ
ಕೆಂಪುಮೋರೆಯ ರಕ್ಕಸರ ಹೆಜ್ಜೆಗುರುತುಗಳಿದ್ದವು
ದವನದ ತೋಟ ನೆಲಸಮವಾಗಿತ್ತು
ಗಾಳಿಯ ಸುಗಂಧದ ಮೇಲೆ
ಸಮಾಧಿಗಳಿದ್ದವು. (ದವನದ ತೋಟ)

ಮೊದಲೆರಡು ಸಾಲು ಅರಬ್ ದೇಶಗಳ ತೈಲಬಾವಿಯ ಕುರಿತಾದ ರಾಜಕಾರಣದ ಬಗ್ಗೆ ಮಾತನಾಡಿದರೆ, ಅನಂತರ ವಿವರ ಹಾಗೂ ಅನುಭವದ ಕೊರತೆಯಿಂದ ನೆಲಮೂಲ ಚೌಕಟ್ಟಿಗೆ ನುಸುಳಿ ಬಿಡುವುದು ಕವನಗಳ ಮಿತಿಯೂ ಆಗಿ ಪರಿಣಮಿಸುತ್ತದೆ.

ಕೃಷಿಕರ ಬವಣೆಗಳ ಮತ್ತು ಪ್ರಕೃತಿನಾಶದ ಕಥನದಾಚೆಗಿನ ಅನುಭವಲೋಕದ ಕೊರತೆಯಿಂದಾಗಿ ಮತ್ತು ಅಂತಹ ಚಿಂತನೆಯ ಅಭಾವದಿಂದಾಗಿ ಇಲ್ಲಿನ ಕವನಗಳೆಲ್ಲ ಏಕಮುಖೀ ಹೇಳಿಕೆಗಳಂತೆ ಕಂಡುಬರುತ್ತವೆ ಮತ್ತು ಕವಿತೆಗಳೆಲ್ಲ ಒಂದರ ನಂತರ ಒಂದರ ಮುಂದುವರಿಕೆಯಂತೆ ಕಂಡುಬರುತ್ತದೆ.

ಕೃಷಿಮೂಲಕ್ಕೆ ಬಂದಾಗ-ಅಲ್ಲಿನ ಅನುಭವವನ್ನು ಚಿಂತನೆಯನ್ನು ಹಿಡಿದಿಡುವಲ್ಲಿ ಅವರು ಯಶಸ್ವಿಯಾಗುತ್ತಾರೆ.

ಆರು ಕೆರೆ ಅಕ್ಕಳಿಸಿ
ಮೂರು ಕೆರೆ ಮುಕ್ಕಳಿಸಿ
ಮೈದಾಳ ತುಂಬಿ
ಬತ್ತಿದ ಹೂ ಬತ್ತಿ ನೆಂದು
ತೇಲುತೆಪ್ಪದ ಮೇಲೆ ಕುಡಿ
ಅರಳಿದ ನಂದಾದೀಪ (ತಾಯಿದಿಕ್ಕಿ ನೆಡೆಗೆ)

ಎಂಬಲ್ಲಿ ಪರಿಚಿತ ನುಡಿಗಟ್ಟು ಮತ್ತು ಜನಪದೀಯ ಆಶಯದ ಮೂಲಕ ಕನಸುಗಾರಿಕೆಯ ಜೀವನ್ಮುಖೀ ಧೋರಣೆಯಿದೆ,

ಕವಿಗೆ ಘೋಷಣೆಗಳು ಒಂದು ಅಬ್ಸೆಶನ್ ಆಗಬಾರದು. ಅದು ಹಲವು ಬಾರಿ ಕೊರಳಿಗೆ ಕಟ್ಟುವ ಮಿತಿಗಳಿಂದಾಗಿ ಕವಿ ಅಲ್ಲಲ್ಲಿ ಎಡವಿ ಬೀಳುವಂತಾಗಬಹುದು. ಆದ್ದರಿಂದ ಮುಕ್ತತೆ ಕೊಡುವ ಸ್ವಾತಂತ್ರ್ಯ ಮತ್ತು ಸ್ವಾಚ್ಛಂದ್ಯವನ್ನು ಕವಿ ಉಪಯೋಗಿಸಿಕೊಳ್ಳಬಹುದು ಅನ್ನಿಸುತ್ತದೆ. ಈ ದೃಷ್ಟಿಯಿಂದ 'ಕನ್ನಡಿ ಮತ್ತು ಕವಿತೆ', 'ತೂಗು ಮೋಡಗಳ ಬಗೆ ಮಾಡಿ', 'ಸರಗುಣಿಕೆ ದಾರಿಯೊಳಗೆ' ಮೊದಲಾದವು ಯಶಸ್ವೀ ರಚನೆಗಳು.

● **ವಸಂತಕುಮಾರ ಪೆರ್ಲ**

ಒಲವಿನ ಒರತೆ : ಪ್ರಭು ಚನ್ನಬಸವ ಸ್ವಾಮೀಜಿ

(ಗುರು ಚೆನ್ನಬಸವೇಶ್ವರ ಗ್ರಂಥಮಾಲೆ, ಅಥಣಿ; ೨೦೦೯)

೧೨ನೆಯ ಶತಮಾನದ ವಚನ ಸಾಹಿತ್ಯ ಅಂತರಗಂಗೆಯಂತೆ ಕನ್ನಡದ ಬದುಕನ್ನು, ಸಂಸ್ಕೃತಿಯನ್ನು ನಿರಂತರವಾಗಿ ಹಸಿರಾಗಿ, ಹಸನಾಗಿ ರೂಪಿಸುತ್ತಲೇ ಬಂದಿದೆ. ಅಂದಿನ ವಚನ-ವಿನ್ಯಾಸವನ್ನು ಬಳಸಿಕೊಂಡು ಇಂದಿಗೂ ನೂರಾರು 'ಆಧುನಿಕ' ವಚನಕಾರರು ಸಮಕಾಲೀನ ಪ್ರಜ್ಞೆಯೊಂದಿಗೆ ಕಾವ್ಯ ಸೃಷ್ಟಿಸುತ್ತಿದ್ದಾರೆ. ಈ ಕಾವ್ಯದ ಮುಖ್ಯ ನೆಲೆ-ನೀತಿ ಬೋಧೆ. ಹೀಗಾಗಿಯೇ ಬಹುಶಃ ಅದು ವಿಮರ್ಶಕರ ಅವಜ್ಞೆಗೆ ತುತ್ತಾಗಿರಬೇಕು.

'ಅಥಣೀಶ' ಅಂಕಿತದಲ್ಲಿ ಪ್ರಭು ಚೆನ್ನಬಸವ ಸ್ವಾಮೀಜಿಯವರು ಹೊರತಂದ 'ಒಲವಿನ ಒರತೆ' ಅವರ ಮೂರನೆಯ ಕೃತಿ. ಸುತ್ತಲಿನ ಬದುಕೇ ಅವರ ಸಾಮಗ್ರಿ. ನಮ್ಮ ಕಣ್ಣೆದುರಿಗಿನ ನೂರಾರು ವ್ಯಕ್ತಿಗಳು, ಪ್ರಸಂಗಗಳು ಇಲ್ಲಿವೆ. ಕೆಲವು ಸ್ತುತಿಪರ ಪದ್ಯಗಳಿದ್ದರೂ, ಬಹುತೇಕ

ರಚನೆಗಳ ಉದ್ದೇಶ ವೈಪರೀತ್ಯಗಳನ್ನು ಖಂಡಿಸುವುದು. ಬಿಸಿಯೂಟ, ರೆಸಿಡೆನ್ಸಿಯಲ್ ಶಾಲೆ, ಕಂಪ್ಯೂಟರ್, ಕ್ರಿಕೆಟ್, ರಾಜಕೀಯ, ಅಡ್ಡಪಲ್ಲಕ್ಕಿ ಎಲ್ಲವೂ ಇಲ್ಲಿವೆ.

ದಿನವಿಡಿ ದುಡಿಯುವ ರೈತನಿಗೆ
ಕಟಕ ರೊಟ್ಟಿ, ಖಾರಾ ಎಣ್ಣೆ
ಏಸಿ ರೂಮಿನಲ್ಲಿ ಸಹಿ ಮಾಡುವ ಅಧಿಕಾರಿಗೆ
ಐಸ್, ಬ್ರೆಡ್ ಬೆಣ್ಣೆ

*

ಹೆತ್ತವರನ್ನು ಕೂಳಿಕ್ಕದೆ ಕೊಂದು
ಶ್ರಾದ್ಧಕ್ಕೆ ಮೃಷ್ಟಾನ್ನ
ಮಾಡುವ ಮಕ್ಕಳಿದ್ದಾರೆ

*

ರಾಮನ ಹೆಸರಿನಲ್ಲಿ ಬಡಿಗೆ
ತ್ರಿಶೂಲ ಠೇಂಕಾರ
ರೇಣುಕರ ಪಥದಲ್ಲಿ ಪಲ್ಲಕ್ಕಿಗಳ ಅವಾಂತರ

ಹೀಗೆ ಅತ್ಯಂತ ಮಾರ್ಮಿಕವಾದ ಮಾತುಗಳ ಸರಪಳಿಯೇ ಇಲ್ಲಿದೆ.

೧೨ನೇ ಶತಮಾನದ ವಚನ ಸೃಷ್ಟಿ, ಒಂದು ಸಾಮಾಜಿಕ - ಧಾರ್ಮಿಕ ಆಂದೋಲನದ ಉಪ ಉತ್ಪನ್ನವಾಗಿತ್ತು: ಆದರೆ ಇಂದಿನ ಬಹುತೇಕ ಆಧುನಿಕ ವಚನಕಾರರಿಗೆ ಆ ಹಿನ್ನಲೆ ಇದ್ದಂತಿಲ್ಲ. ಅವರಿಗೆ ವಚನವೆಂಬುದು ಅಂತರಂಗದ ಅನಿವಾರ್ಯ ಅಭಿವ್ಯಕ್ತಿಯಾಗಿರದೆ. ಆರಾಮ ಕುರ್ಚಿಯ ಶಬ್ದವ್ಯಾಮೋಹವಾಗಿರುವಂತಿದೆ. ಆವರಣ ಮತ್ತು ಹೂರಣಗಳ ವಿರೋಧಾಭಾಸ ಒಡೆದು ಕಾಣುತ್ತದೆ.

ವಚನ ಎಂದರೆ
ಹೊರಗಣ್ಣಿನ ಹೊಳಪಲ್ಲ, ಒಳಗಣ್ಣಿನ ಬೆಳಕು
ವಚನ ಎಂದರೆ
ಶಬ್ದಗಳ ಗೊಂದಲವಲ್ಲ, ನಿಃಶಬ್ದದ ನಿರಾಳ ನಿಲುವು

ಈ ಬಗೆಯ ಅರಿವು ಅಥಣೀಶರಿಗೆ ಇರುವುದು ಅಭಿನಂದನೀಯ.
ಆದರೂ ಬಸವಣ್ಣ, ಅರವಿಂದ, ಪರಮಹಂಸ, ವಿವೇಕಾನಂದ, ವಿಶ್ವೇಶ್ವರಯ್ಯ ಅವರ ಬರುವಿಗಾಗಿ ಕಾಯುವ ಕವಿ "ವೀರ ಸಾವರ್ಕರ್" ರಿಗೂ ಕಾಯುವುದು; ಬಿಸ್ಮಿಲ್ಲಾಖಾನ, ಝಾಕೀರ ಹುಸೇನ, ಸಿದ್ಧಯ್ಯ ಪುರಾಣಿಕ, ಗದುಗಿನ ಸ್ವಾಮೀಜಿ, ಮುಂತಾದವರ ಸ್ಫೂರ್ತಿ-ಕೇಂದ್ರಗಳ ಪಟ್ಟಿಗೆ ವಿಜಯ ಕರ್ನಾಟಕದ "ವಿಶ್ವೇಶ್ವರ ಭಟ್ಟ"ರನ್ನು ಸೇರಿಸಿರುವುದು- ಹಾಸ್ಯಕ್ಕೆ ಆಸ್ಪದವೀಯುವಂತಿದೆ.

● ಚಂಪಾ

■

ಕನ್ನಡಕ್ಕೆ ಬೇಡ ಮುಖವಾಡ : ದೇವಕಿಸುತ

(ಪಯಸ್ವಿನಿ ಪ್ರಕಾಶನ, ಸರ್ವಜ್ಞನಗರ, ಬೆಂಗಳೂರು-೮; ೨೦೦೭)

ಒಂದು ಜನಪರ ಚಳುವಳಿಯ ಆಶಯಗಳನ್ನು ಜನಕ್ಕೆ ಪರಿಣಾಮಕಾರಿಯಾಗಿ ನಾಟಕಗಳ ಮೂಲಕ ತಲುಪಿಸಲು ಸಾಧ್ಯ. ಕನ್ನಡ ನಾಡು ಈ ನಿಟ್ಟಿನಲ್ಲಿ ಒಂದು ಪರಂಪರೆಯನ್ನೇ ನಿರ್ಮಿಸಿದೆ. ನಾಟಕಕಾರ ದೇವಕಿಸುತರು ಈ ಪುಟ್ಟ ನಾಟಕದಲ್ಲಿ ನಮ್ಮ ರಾಜ್ಯದಲ್ಲಿ ಕನ್ನಡದ ದಟ್ಟ ವಾತಾವರಣ ನಿರ್ಮಿಸುವ ಒಂದು ಸಫಲ ಪ್ರಯೋಗ ಮಾಡಿದ್ದಾರೆ.

ಕೆಲವೇ ಪಾತ್ರಗಳು, ಸೂಕ್ತ ಸನ್ನಿವೇಶ, ಚುರುಕಾದ ಸಂಭಾಷಣೆ, ಹಾಡುಗಳ ಸಮರ್ಪಕ ಬಳಕೆ - ಇವು ಈ ಕೃತಿಯ ಮುಖ್ಯ ಲಕ್ಷಣಗಳು. ಮುನ್ನುಡಿ ಬರೆದ ಚಂಪಾ, ಮೂಲತಃ ಮಲಯಾಳಿ ಭಾಷಿಕರಾಗಿರುವ ದೇವಕಿಸುತರು "ಕನ್ನಡ ಭಾಷೆಯ ಸತ್ವ ಹಾಗೂ ಲಯವನ್ನು ಹೀರಿಕೊಂಡು" ಕನ್ನಡ ಪ್ರಚಾರವನ್ನು ತಮ್ಮ ಕಾಯಕವನ್ನಾಗಿ ಮಾಡಿಕೊಂಡ ಪರಿಯನ್ನು ತುಂಬು ಕೊರಳಿನಿಂದ ಹೊಗಳಿದ್ದಾರೆ. ಮುಖ್ಯಮಂತ್ರಿ ಚಂದ್ರು ಬೆನ್ನುಡಿಯ ಮೂಲಕ ಬೆನ್ನು ಚಪ್ಪರಿಸಿದ್ದಾರೆ.

■

ಒಂದನೆ ತರಗತಿಯಿಂದಲೆ ಉರುಳು : ಬಿ. ಎಂ. ಪುಟ್ಟಯ್ಯ

(ದುಡಿಮೆ ಪ್ರಕಾಶನ, ಶ್ರೀರಾಮಪುರಂ, ಬೆಂಗಳೂರು; ೨೦೦೭)

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಬಿ.ಎಂ. ಪುಟ್ಟಯ್ಯನವರು ಬರೆದ ಈ ೭೦ ಪುಟಗಳ ಪುಸ್ತಕವು ನಮ್ಮ ಸಮಕಾಲೀನ ಸಮಸ್ಯೆಯೊಂದರ ಎಲ್ಲ ಮಗ್ಗಲುಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತದೆ. ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೆ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಪ್ರಸ್ತಾವನೆಯ ವಿರುದ್ಧ ಕನ್ನಡ ಸಾಹಿತ್ಯ ಪರಿಷತ್ತು ಸಮಾನ ಶಿಕ್ಷಣ ನೀತಿಗಾಗಿ ಆಗ್ರಹಿಸಿ ಜನಾಂದೋಲನವನ್ನೇ ಹೂಡಿದ ಸಂದರ್ಭದಲ್ಲಿ 'ಪ್ರಗತಿಪರ ಚಿಂತಕ'ರ ಒಂದು ತಂಡ ಕೂಡಾ ಹಾದಿ ತಪ್ಪಿದಾಗ ಪುಟ್ಟಯ್ಯ ಅತ್ಯಂತ ಪ್ರಬುದ್ಧ ನೆಲೆಯಲ್ಲಿ ತಮ್ಮ ವಾದ ಮಂಡಿಸಿದರು. ಜಾಗತೀಕರಣದ ಸನ್ನಿವೇಶದಲ್ಲಿ ಇಂಗ್ಲಿಶ್ ಕಲಿಯುವ ಆವೇಶದಲ್ಲಿ ನಾವು ಹೇಗೆ ಹೊಸ ಬಗೆಯ ಶೋಷಣೆಗೆ ಗುರಿಯಾಗುತ್ತಿದ್ದೇವೆ - ಎಂಬುದನ್ನು ಎಳೆ ಎಳೆಯಾಗಿ ಈ ಕೃತಿಯಲ್ಲಿ ಬಿಡಿಸಿದ್ದಾರೆ.

೧೮ ಅಧ್ಯಾಯಗಳಲ್ಲಿ ಬಿಚ್ಚಿಕೊಳ್ಳುವ ಪುಟ್ಟಯ್ಯನವರ ವಾದ ಸರಣಿ ಆಕರ್ಷಕವಾಗಿದೆ; ಸತ್ಯಾನ್ವೇಷಣೆಯ ಪ್ರಾಮಾಣಿಕ ಪ್ರಯತ್ನವಾಗಿದೆ. ಖ್ಯಾತ ಕವಿ, ಚಿಂತಕ ಕೆ.ಬಿ. ಸಿದ್ದಯ್ಯನವರು ಮುನ್ನುಡಿಯಲ್ಲಿ 'ಅಲಕ್ಷ್ಯಕ್ಕೆ ಒಳಗಾದ ಅಖಂಡ ಸಮುದಾಯ ಚಿಂತನೆ ಮಾಡಲು ಈ ಕೃತಿ ಸಹಾಯಕ' ಎಂದಿದ್ದಾರೆ.

■

ಡಾ. ಬಿ. ಆರ್. ಅಂಬೇಡ್ಕರ್: ಸಿ.ಎಚ್. ಜಾಕೋಬ್ ಲೋಬೊ

(ಬ್ಯಾಲದಕೆರೆ ಪ್ರಕಾಶನ, ನಾಗತಿಹಳ್ಳಿ ಅಂಚೆ, ಮಂಡ್ಯ; ೨೦೦೫)

ರಾಜ್ಯ ಸರಕಾರದ ಸಮಾಜ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಯಾಗಿದ್ದು ವಿಶೇಷವಾಗಿ ಹಿಂದುಳಿದ ಸಮುದಾಯಗಳ ಬಗ್ಗೆ ಆಸಕ್ತಿಯಿಂದ ಕೆಲಸ ಮಾಡಿದ ಚಿಂತಕ ಸಿ. ಎಚ್. ಜಾಕೋಬ್ ಲೋಬೊ ಅವರು ೧೯೮೮ರಲ್ಲಿ ಬರೆದ ಈ ಕೃತಿಯನ್ನು ಮರುಮುದ್ರಣ ಮಾಡಿದವರು ಖ್ಯಾತ ಪ್ರಕಾಶಕ ಸಿ.ವಿ.ಜಿ. ಚಂದ್ರು ಅವರು. ಭಾರತದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಈ ಯುಗದ ಮಹಾನ್ ಶಕ್ತಿ. ಅವರ ಅನೇಕ ಜೀವನ ವಿವರಗಳನ್ನು ತಿಳಿಗನ್ನಡದಲ್ಲಿ ಸರಳವಾಗಿ ನಿರೂಪಿಸುವ ಲೇಖಕರು ಈ ಕೃತಿಯಲ್ಲಿ ಮುಖ್ಯವಾಗಿ, ಮುನ್ನುಡಿ ಬರೆದ ಹಿರಿಯ ಗಾಂಧಿವಾದಿ ಶ್ರೀ ಎಚ್. ಎಸ್. ದೊರೆಸ್ವಾಮಿ ಯವರು ಗುರುತಿಸಿದಂತೆ, ಪುರೋಹಿತಶಾಹಿ ಹಿಡಿತದ ಸಾಮಾಜಿಕ ವ್ಯವಸ್ಥೆ ಮತ್ತು ಬಂಡವಾಳಶಾಹಿ ಹಿಡಿತದ ಆರ್ಥಿಕ ವ್ಯವಸ್ಥೆ ಕುರಿತು ನಮ್ಮ ಗಮನ ಸೆಳೆಯುತ್ತಾರೆ. ದಲಿತ ನಾಯಕರೆಂದೇ ಬಿಂಬಿಸಲ್ಪಟ್ಟಿರುವ ಅಂಬೇಡ್ಕರ್ ಅವರು ಸಮಗ್ರ ಭಾರತೀಯ ಸಮಾಜದ ಸರ್ವಾಂಗೀಣ ಒಳಿತನ್ನೇ ತಮ್ಮ ಜೀವಿತದ ಧ್ಯೇಯವನ್ನಾಗಿ ಇರಿಸಿಕೊಂಡಿದ್ದರು. ಕನ್ನಡ ನಾಡಿನ ಯುವ ಪೀಳಿಗೆ ಇತಿಹಾಸದ ಹೆಜ್ಜೆಗಳನ್ನು ಗುರುತಿಸಿ, ಭವಿಷ್ಯವನ್ನು ಕಟ್ಟಿಕೊಳ್ಳಲು ಇಂಥ ಕೃತಿಗಳ ಅಧ್ಯಯನ ಅವಶ್ಯ. ನಾ. ಡಿಸೋಜ ಅವರ 'ಎರಡು ಮಾತು' ಔಚಿತ್ಯ ಪೂರ್ಣವಾಗಿದೆ.

■

ಅಣ್ಣನ ಸ್ಮರಣೆ : ಟಿ. ಎಸ್. ಛಾಯಾಪತಿ

(ಪ್ರತಿಭಾ ಪ್ರಕಾಶನ, ಮೈಸೂರು; ೨೦೦೭)

ಕನ್ನಡ ನವೋದಯ ಕಾಲದ ಸಾಹಿತ್ಯಿಕ-ಸಾಂಸ್ಕೃತಿಕ ವಲಯದಲ್ಲಿ ಹಳೇ ಮೈಸೂರು ಭಾಗದಲ್ಲಿ ತ.ಸು. ಶಾಮರಾಯರದು ಬಹಳ ದೊಡ್ಡ ಹೆಸರು. ಪ್ರಕಾಂಡ ಪಂಡಿತರಾಗಿದ್ದ ಅವರು ತಮ್ಮ ಓರಗೆಯ ಘಟಾನುಘಟಿಗಳಿಗಿಂತ ಬಹಳ ಭಿನ್ನರಾಗಿ ಬದುಕಿದವರು ಜಾತಿ, ಮತಗಳ ಸಂಕುಚಿತ ಬೇಲಿಯನ್ನು ಮೀರಿ ಮಾನವೀಯತೆಯ ನೆಲೆಯಲ್ಲಿ ವ್ಯವಹರಿಸುತ್ತಿದ್ದ ಅವರ ಶಿಷ್ಯಕೋಟಿ ಅಪಾರ. ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ. ಹಿರಿಯ ಸಾಹಿತಿ ಚದುರಂಗರ ಮಾತಿದು: 'ಶಾಮರಾಯರ ಮನೆ ಹನ್ನೆರಡನೇ ಶತಮಾನದ ಮಹಾಮನೆಯಂತಿತ್ತು'.

ಇಂಥ ಮಹಾನುಭಾವರ ಜೀವನದ ಅನೇಕ 'ಪ್ರಸಂಗ'ಗಳನ್ನು 'ಅಣ್ಣನ ಸ್ಮರಣೆ'ಯಾಗಿ ದಾಖಲಿಸಿದವರು ಅವರ ಮಗ, ಖ್ಯಾತ ಪುಸ್ತಕ ಪ್ರಕಾಶಕ ಟಿ. ಎಸ್. ಛಾಯಲಪತಿಯವರು. ತಂದೆಯೊಂದಿಗೆ ಐದು ದಶಕ ಕಳೆದ ಇವರಿಗೆ ಅವರ ವ್ಯಕ್ತಿತ್ವದ ಅನೇಕ ಮುಖಗಳನ್ನು ಯಾವ ಅತಿಗಳೂ ಇಲ್ಲದೆ, ದೃಶ್ಯಗಳ ಮೂಲಕ ಹಿಡಿದಿಡಲು ಸಾಧ್ಯವಾಗಿದೆ. "ಮೌಲ್ಯಗಳು ನಶಿಸುತ್ತಿರುವ ಈ ಹೊತ್ತು ಅಣ್ಣನಂಥವರ ಚರಿತ್ರೆ ಈ ಸಮಾಜಕ್ಕೆ ಅನಿವಾರ್ಯ"- ಎನ್ನುತ್ತಾರೆ ಛಾಯಾಪತಿ. ಡಾ. ಪ್ರಭುಶಂಕರ ಅವರು ಸೂಕ್ತ ಶಬ್ದಗಳಲ್ಲಿ ಗುರುನಮನ ಸಲ್ಲಿಸಿದ್ದಾರೆ.

■

ಕ್ಷಣ ಹೊತ್ತು ಅಣಿಮುತ್ತು : ಎಸ್. ಷಡಕ್ಷರಿ

(ರಮಣಶ್ರೀ ಪ್ರಕಾಶನ, ಬೆಂಗಳೂರು-೨೫; ೨೦೦೭)

ಕನ್ನಡದಲ್ಲಿ ಪತ್ರಿಕೆಗಳ ಸಂಖ್ಯೆ, ಆ ಮೂಲಕ ವಾಚಕರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ವಿವಿಧ ಅಭಿ ರುಚಿಗಳಿಗೆ ತಕ್ಕ ಹಾಗೆ ತಕ್ಕುದಾದ ಸಾಮಾಗ್ರಿಯೂ ದೊರಕತೊಡಗಿದೆ. ಕ್ಷಿಪ್ರಗತಿಯ ಜೀವನ ಶೈಲಿಯಿಂದಾಗಿ ಪುಟ್ಟ ಪುಟ್ಟ ಬರಹಗಳ ಬೇಡಿಕೆಯೂ ಅಧಿಕವಾಗುತ್ತಿದೆ. ಕರ್ನಾಟಕದ ಜನಪ್ರಿಯ ಪತ್ರಿಕೆಯೊಂದಕ್ಕೆ ಪ್ರತಿದಿನವೂ ಇಂಥ ಲೇಖನ ಬರೆಯುತ್ತಿರುವ ಎಸ್. ಷಡಕ್ಷರಿಯವರ ಸಂಕಲನವಿದು. ಈಗಾಗಲೇ ಅನೇಕ ಆವೃತ್ತಿಗಳನ್ನು ಕಂಡಿದೆ.

ಇಂದಿನ ಅಂತರ್ಜಾಲ ಯುಗದಲ್ಲಿ ಮಾಹಿತಿಗಳನ್ನು ಅನೇಕ ಆಕರಗಳಿಂದ ಕೂಡಿ ಹಾಕುವುದು ಸುಲಭ. ಅನೇಕ ದೇಶಗಳ, ಕಾಲಖಂಡಗಳ ಅನುಭವ ಈಗ ಕೈಬೆರಳ ತುದಿಯಲ್ಲಿ ಸಿಗುತ್ತದೆ. ಆದರೆ ಈ ಮಾಹಿತಿಗೆ ಅಕ್ಷರಗಳ ಮೂಲಕ ಕಲಾತ್ಮಕ ರೂಪಕೊಟ್ಟು ಸರಳವಾಗಿ, ಸ್ವಾರಸ್ಯ ಕರವಾಗಿ, ಓದುಗನಿಗೆ ತಲುಪಿಸುವಲ್ಲಿ ಷಡಕ್ಷರಿಯವರ ಸಾಧನೆ ಪ್ರಶಂಸನೀಯ. ಬದುಕಿನ ಬಗ್ಗೆ ಇರುವ ನೈತಿಕ ನಿಲುವು ಮತ್ತು ಸ್ವಭಾವದ ಲಕ್ಷಣವಾಗಿಯೇ ಇರುವ ಸಹಜ ವಿನೋದ- ಅವರ ಬರವಣಿಗೆಗೆ ವಿಶೇಷ ಮೆರುಗು ತಂದಿದೆ. ಅವರಿವರ ಅನುಭವವನ್ನು ನೇರವಾಗಿ ಓದುಗರ ಅನುಭವಕ್ಕೇ ಮುಖಾಮುಖಿಯಾಗಿಸುವ ಈ ತಂತ್ರ ಆತ್ಮೀಯವೆನ್ನಿಸುತ್ತದೆ. ಪಂಚತಂತ್ರ, ಜಾತಕ ಕತೆಗಳು, ಜೆನ್ ಕತೆಗಳು, ಈಸೋಪನ ನೀತಿಕತೆಗಳು - ಇದೊಂದು ಜಾಗತಿಕ ಪರಂಪರೆ. ಷಡಕ್ಷರಿ ಈ ಪರಂಪರೆಯನ್ನು ಮುಂದುವರೆಸಿದ್ದಾರೆ. ■

ನಮ್ಮ ಲೇಖಕರು

ಡಾ. ಎಲ್. ಬಸವರಾಜು	ನಂ. ೩೭, ನಳಿನಿ ಶಂಕರ, ೩ನೇ ಬ್ಲಾಕ್ ೫ನೇ ಮೇನ್, ಜಯಲಕ್ಷ್ಮೀಪುರ, ಮೈಸೂರು ೫೭೦೦೧೨
ಮನೋಜ ಪಾಟೀಲ	ಸಂಪಾದಕರು, ಸಂಯುಕ್ತ ಕರ್ನಾಟಕ ಕೊಪ್ಪೀಕರ ರಸ್ತೆ, ಹುಬ್ಬಳ್ಳಿ ೫೮೦೦೨೦
ಎಸ್. ಎಸ್. ಹಳ್ಳೂರ	ಪ್ಲಾಟ್ ನಂ. ೫೦, ಸೆಕ್ಟರ್ ೨೭, ನವನಗರ, ಬಾಗಲಕೋಟ ೫೮೭ ೧೦೧
ಡಾ. ಆರ್. ಎಸ್. ಚುಳಕಿ	ನಂ. ೨೭, ಕೆ.ಎಚ್.ಬಿ. ಕಾಲಿನಿ ಸೋಲಾಪುರ ರಸ್ತೆ, ಬಿಜಾಪುರ ೫೮೬೧೦೩
ಡಿ. ಎಸ್. ನಾಗಭೂಷಣ	ಎಚ್.ಐ.ಜಿ-೫, ನುಡಿ, ಕೆ.ಎಚ್.ಬಿ. ಕಾಲನಿ ಕಲ್ಲಹಳ್ಳಿ ಬಡಾವಣೆ, ವಿನೋಬನಗರ ಶಿವಮೊಗ್ಗ ೫೭೭ ೨೦೪
ಡಾ. ಶರಣಮ್ಮ ಗೊರೇಬಾಳ	ಗೋಲೀಲ, ೫ನೇ ಕ್ರಾಸ್, ೪ನೇ ಮೇನ್ ಗಾಂಧಿನಗರ, ಧಾರವಾಡ ೫೮೦೦೦೪
ಎಸ್. ಚಂದ್ರಕಿರಣ ಕುಳವಾಡಿ	ಎಲ್-೪೮, ೮ನೇ ಕ್ರಾಸ್, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
ಬಾಲಕೃಷ್ಣನಾಯ್ಕ ಡಿ.	Flat No. 9, Harmony-I, Royale Garden Estate E-12, Sector - 61 Noida (U.P.) 201301
ಡಾ. ನಾ. ಗೀತಾಚಾರ್ಯ	ಕನ್ನಡ ಪ್ರಾಧ್ಯಾಪಕರು, ಶೇಷಾದ್ರಿಪುರಂ ಕಾಲೇಜು ಶೇಷಾದ್ರಿಪುರಂ, ಬೆಂಗಳೂರು ೫೬೦ ೦೨೦
ಸಿದ್ದು ಯಾಪಲ ಪರವಿ	ಇಂಗ್ಲಿಷ್ ಉಪನ್ಯಾಸಕರು, ೬ನೇ ಕ್ರಾಸ್ ಪಂಚಾಕ್ಷರಿ ನಗರ, ಗದಗ ೫೮೨೧೦೧
ಡಾ. ಎಸ್. ವಿ. ಪ್ರಭಾವತಿ	ಕನ್ನಡ ಉಪನ್ಯಾಸಕಿ, ಬಿ.ಎಸ್.ವಿ.ಪಿ. ಕಾಲೇಜು ವಿಜಯನಗರ, ಬೆಂಗಳೂರು ೫೬೦೦೪೦
ಡಾ. ವಸಂತಕುಮಾರ ಪೆರ್ಲ	ಮುಖ್ಯಸ್ಥರು, ಆಕಾಶವಾಣಿ ಕೇಂದ್ರ ಕಾರವಾರ (ಉ.ಕ.) ೫೮೧೩೦೧

44th YEAR OF PUBLICATION

ಸಂಕ್ರಮಣ

JAN.-APRIL 2009

Price : Rs. 20

SANKRAMANA : PERIODICAL
REGD. WITH THE REGISTRAR OF NEWSPAPERS FOR INDIA
VIDE RNI No. 29730/76
EDITOR: CHANDRASHEKHAR PATIL

Vol. 44 : No. 01-02 January -April 2009

ಎಲ್. ಬಸವರಾಜು

ಮನೋಜ ಪಾಟೀಲ

ಎಸ್. ಎಸ್. ಹಳ್ಳೂರ

ಆರ್. ಎಸ್. ಚುಳಕಿ

ಡಿ. ಎಸ್. ನಾಗಭೂಷಣ

ಶರಣಮ್ಮ ಗೊರೇಬಾಳ

ಎಸ್. ಚಂದ್ರಕಿರಣ ಕುಳವಾಡಿ

ಬಾಲಕೃಷ್ಣ ನಾಯ್ಕ ಡಿ.

ನಾ. ಗೀತಾಚಾರ್ಯ

ಎಸ್. ವಿ. ಪ್ರಭಾವತಿ

ಸಿದ್ದು ಯಾಪಲ ಪರವಿ

ವಸಂತಕುಮಾರ ಪೆರ್ಲ

ಚಂಪಾ

SANKRAMANA PRAKASHANA
2nd Cross, Jyothi Layout, Yelachenahalli
J. P. Nagar Post, Bangalore–560 078
✆ 080-2632 33 44